ಶುಕ್ರವಾರ, ನವೆಂಬರ್ 19, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 320 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಚಂದನವನದಲ್ಲಿ 'ನೀಲಿಹಕ್ಕಿ'ಯಾಗಿ ಮಿಂಚಿದ ಶ್ರೀನಿಧಿ ಹೆಗಡೆ ಈಗ ಹೊಸ ಅವಕಾಶಗಳ ಹೊಸ್ತಿಲಿನಲ್ಲಿದ್ದಾರೆ



ಆಳ-ಅಗಲ ಮಹಿಳೆಯರ ಪ್ರಯಾಣದ ಪ್ರಯಾಸ
ಕ್ರಿಪ್ಟೊ ಕರೆನ್ಸಿ ಸುರಕ್ಷತೆ: ಸಹಕಾರಕ್ಕೆ ಪ್ರಧಾನಿ ಆಗ್ರಹ 10
ಪ್ರಕಾಶ್ ಪಡುಕೋಣೆಗೆ ಜೀವಮಾನ ಸಾಧನೆ ಪ್ರಶಸ್ತಿ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,636 ▼	17,764 ▼	₹50,800 (ಬೆಂಗಳೂರು)	₹68,400 (ಬೆಂಗಳೂರು)	74.24 ▲

ಟೆಂಡರ್: ಕಾಂಚಾಣ ಕುಣಿತ

ಕಾಮಗಾರಿ ಮೊತ್ತದ ಶೇ 40ರ ವರೆಗೆ ಲಂಚದ ಆರೋಪ • ಪ್ರಧಾನಿಗೆ ದೂರಿತ್ತ ಗುತ್ತಿಗೆದಾರರು

• ವಿ.ಎಸ್.ಸುಬ್ರಹ್ಮಣ್ಯ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಗುತ್ತಿಗೆ ಕಾಮಗಾರಿಗಳ ಮೊತ್ತದ ಶೇಕಡ 40ರಷ್ಟು ಲಂಚದ ರೂಪದಲ್ಲೇ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳ ಜೇಬು ಸೇರುತ್ತಿದೆ ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೂರು ನೀಡಿರುವುದು ದೊಡ್ಡ ಮಟ್ಟದ ಚರ್ಚೆಗೆ ಕಾರಣವಾಗಿದೆ.

ಪ್ರಮುಖ ಕಾಮಗಾರಿಗಳನ್ನು ನಿರ್ವಹಿಸುವ ಲೋಕೋಪಯೋಗಿ, ಜಲ ಸಂಪನ್ಮೂಲ, ಸಣ್ಣ ನೀರಾವರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ನಗರಾಭಿವೃದ್ಧಿ, ಆರೋಗ್ಯ ಇಲಾಖೆಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಮಂಜೂರಾದ ಅನುದಾನದ ಅರ್ಧದಷ್ಟು ಮೊತ್ತ ಲಂಚದ ರೂಪದಲ್ಲೇ ಕೊಳ್ಳೆಯಾಗುತ್ತಿದೆ ಎಂದು ಸಂಘಟನೆ ದೂರಿನಲ್ಲಿ ಆರೋಪಿಸಿದೆ. ಅನುದಾನ ಮಂಜೂರಾತಿಯಿಂದ ಬಿಲ್ ಪಾವತಿಯವರೆಗೆ 'ಕಾಂಚಾಣ ಕುಣಿತ'ವೇ ಎಲ್ಲವನ್ನೂ ನಿರ್ಧರಿಸುತ್ತಿದ್ದು, 'ಗುತ್ತಿಗೆದಾರರ ಬಲಿ ಹಣ ಸೃಷ್ಟಿಸುವ ಮಂತ್ರದಂಡವಿದೆ ಎಂದು ಭಾವಿಸಿ ಸುಲಿಗೆ ಮಾಡಲಾಗುತ್ತಿದೆ' ಎಂದು ಪ್ರಧಾನಿಗೆ ಬರೆದಿರುವ ಪತ್ರದಲ್ಲಿ ವಿವರಿಸಲಾಗಿದೆ.

ರಾಜ್ಯದಲ್ಲಿ ಸಿವಿಲ್, ಎಲೆಕ್ಟ್ರಿಕ್ ಸೇರಿದಂತೆ ವಿವಿಧ ಬಗೆಯ ಕಾಮಗಾರಿಗಳನ್ನು ನಿರ್ವಹಿಸುವ ಗುತ್ತಿಗೆದಾರರು ಸದಸ್ಯರಾಗಿರುವ 52 ಅಸೋಸಿಯೇಷನ್‌ಗಳು ರಾಜ್ಯ ಗುತ್ತಿಗೆದಾರರ ಸಂಘದ ಸದಸ್ಯತ್ವ ಹೊಂದಿವೆ. ಒಟ್ಟು ಒಂದು ಲಕ್ಷಕ್ಕೂ ಅಧಿಕ ಗುತ್ತಿಗೆದಾರರು ಸದಸ್ಯರಾಗಿರುವ ಈ ಸಂಘ ಸರ್ಕಾರದ ಕಾಮಗಾರಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಕುರಿತು ದನಿ ಎತ್ತಿದ್ದು, ಸ್ವಯಂ ಪ್ರೇರಿತವಾಗಿ ತನಿಖೆಗೆ ಆದೇಶಿಸುವಂತೆ ಪ್ರಧಾನಿಯವರನ್ನು ಆಗ್ರಹಿಸಿದೆ.

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಜುಲೈ 7ರಂದು ಪ್ರಧಾನಿ ಕಚೇರಿಗೆ ನೋಂದಾಯಿತ ಅಂಚೆ ಮೂಲಕ ದೂರು ರವಾನಿಸಿದ್ದರು. ಜುಲೈ 13ರಂದು ದೂರು ಪ್ರಧಾನಿ ಕಚೇರಿಯನ್ನು ತಲುಪಿತ್ತು. ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರಿಗೂ ದೂರು ಕಳುಹಿಸಿದ್ದರು. ಮುಖ್ಯಮಂತ್ರಿ, ಗುತ್ತಿಗೆ ಕಾಮಗಾರಿಗಳು ನಡೆಯುತ್ತಿರುವ ಇಲಾಖೆಯ ನೇತೃತ್ವ ವಹಿಸಿರುವ ಸಚಿವರು, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹಾಗೂ ರಾಜ್ಯದ ಎಲ್ಲ ಶಾಸಕರಿಗೂ ಸಂಘದಿಂದಲೇ ಪತ್ರ ಬರೆದು, ಲಂಚದ ಹಾವಳಿ ತಡೆಗೆ ಒತ್ತಾಯಿಸಲಾಗಿತ್ತು.

8ನೇ ಪುಟ ನೋಡಿ



ಕಾಮಗಾರಿಗಳ ಗುತ್ತಿಗೆಯಲ್ಲಿನ ಭ್ರಷ್ಟಾಚಾರದ ಕುರಿತು ಗುತ್ತಿಗೆದಾರರ ಸಂಘ ಪ್ರಧಾನಿಗೆ ದೂರು ನೀಡಿರುವ ವಿಷಯ ನನ್ನ ಗಮನಕ್ಕೆ ಬಂದಿಲ್ಲ. ಈ ಬಗ್ಗೆ ಮಾಹಿತಿ ಪಡೆದು ಪರಿಶೀಲಿಸಿ, ಪ್ರತಿಕ್ರಿಯಿಸುತ್ತೇನೆ.
ಪಿ. ರವಿಕುಮಾರ್, ಮುಖ್ಯ ಕಾರ್ಯದರ್ಶಿ



ಕಳಪೆ ಕಾಮಗಾರಿ ನಡೆದರೆ ಎಲ್ಲರೂ ಗುತ್ತಿಗೆದಾರರತ್ತ ಬೆರಳು ತೋರಿಸುತ್ತಾರೆ. ಮಂಜೂರಾದ ಮೊತ್ತದಲ್ಲಿ ಅರ್ಧದಷ್ಟನ್ನು ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ಲಂಚದ ರೂಪದಲ್ಲಿ ಕೊಡಬೇಕಾದರೆ ಗುಣಮಟ್ಟದ ಕಾಮಗಾರಿ ಹೇಗೆ ಸಾಧ್ಯ?
ಡಿ. ಕೆಂಪಣ್ಣ, ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ

ಪ್ರಜಾವಾಣಿ ವಿಶೇಷ

ಯಾರಿಗೆಷ್ಟು ಲಂಚ?



• ಟೆಂಡರ್ ಅನುಮೋದನೆಗೂ ಮೊದಲು ಸಚಿವರಿಗೆ	5%
• ಕಾಮಗಾರಿ ಆರಂಭಕ್ಕೆ ಮುನ್ನ ಕೆಲವು ಸಂಸದರಿಗೆ	2%
• ರಸ್ತೆ ಕಾಮಗಾರಿಗಳಲ್ಲಿ ಸ್ಥಳೀಯ ಜನಪ್ರತಿನಿಧಿಗಳಿಗೆ	10%
• ಕಟ್ಟಡ ಕಾಮಗಾರಿಗಳಲ್ಲಿ ಸ್ಥಳೀಯ ಜನಪ್ರತಿನಿಧಿಗಳಿಗೆ	5%
• ಕೆಆರ್‌ಐಡಿಎಲ್ ಕಾಮಗಾರಿಗಳಲ್ಲಿ ಸ್ಥಳೀಯ ಜನಪ್ರತಿನಿಧಿಗಳಿಗೆ	10%
• ಕಾಮಗಾರಿಗಳ ಪ್ರಗತಿ ಹಂತದಲ್ಲಿ 15%ರಿಂದ	20%
• ಬಿಲ್ ಪಾವತಿಗಾಗಿ ಅಧಿಕಾರಿಗಳಿಗೆ	6%

ಇ-ಪ್ರೊಕ್ಯೂರ್‌ಮೆಂಟ್‌ನಲ್ಲೂ ಅಕ್ರಮ ಶಂಕೆ

ಕಾಮಗಾರಿಗಳ ಗುತ್ತಿಗೆಗೆ ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರಲು ಇ-ಸಂಗ್ರಹಣಾ ವ್ಯವಸ್ಥೆ ರೂಪಿಸಲಾಗಿತ್ತು. ಕೆಲವು ಅಧಿಕಾರಿಗಳು ಮತ್ತು ಗುತ್ತಿಗೆದಾರರು ಶಾಮೀಲಾಗಿ ಇ- ಸಂಗ್ರಹಣಾ ವ್ಯವಸ್ಥೆಯಲ್ಲೇ ಅಕ್ರಮ ನಡೆಸುತ್ತಿರುವ ಅನುಮಾನಗಳಿವೆ. ಹ್ಯಾಕರ್ ಶ್ರೀಕೃಷ್ಣ ರಾಜ್ಯದ ಇ- ಸಂಗ್ರಹಣಾ ವ್ಯವಸ್ಥೆಯ ಸರ್ವರ್ ಹ್ಯಾಕ್ ಮಾಡಿರುವುದರ ಹಿಂದೆಯೂ ಪ್ರಭಾವಿ ರಾಜಕಾರಣಿಗಳು ಮತ್ತು ಗುತ್ತಿಗೆದಾರರ ಕೈವಾಡ ಇರುವ ಶಂಕೆ ಇದೆ ಎಂದು ಕೆಲವು ಗುತ್ತಿಗೆದಾರರು ದೂರುತ್ತಾರೆ.

ಉಪಗ್ರಹ ಚಿತ್ರ ಆಧರಿಸಿ 'ಎನ್‌ಡಿ ಟಿ.ವಿ' ವರದಿ

'ಭಾರತದ ನೆಲದಲ್ಲಿ ಚೀನಾ ವಸತಿ ಪ್ರದೇಶ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಚೀನಾವು ಅರುಣಾಚಲ ಪ್ರದೇಶದಲ್ಲಿ ಹೊಸ ವಸತಿ ಪ್ರದೇಶವೊಂದನ್ನು ನಿರ್ಮಿಸಿದೆ ಎಂಬುದು ಉಪಗ್ರಹ ಚಿತ್ರಗಳಿಂದ ಸಾಬೀತಾಗಿದೆ' ಎಂದು 'ಎನ್‌ಡಿ ಟಿ.ವಿ' ವರದಿ ಮಾಡಿದೆ. ಆ ಉಪಗ್ರಹ ಚಿತ್ರಗಳನ್ನೂ ಎನ್‌ಡಿ ಟಿ.ವಿ ತನ್ನ ಜಾಲತಾಣದಲ್ಲಿ ಪ್ರಕಟಿಸಿದೆ.

'ಮ್ಯಾಕ್ಸರ್ ಟೆಕ್ನಾಲಜೀಸ್ ಮತ್ತು ಪ್ಲಾನೆಟ್ ಲ್ಯಾಬ್ ಕಂಪನಿಗಳು ಒದಗಿಸುವ ಅತ್ಯಂತ ಸ್ಪಷ್ಟವಾದ, ಉಪಗ್ರಹ ಚಿತ್ರಗಳನ್ನು ಬಳಸಿಕೊಂಡು ಈ ವರದಿ ಪ್ರಕಟಿಸಲಾಗಿದೆ. ಅರುಣಾಚಲ ಪ್ರದೇಶದ ಶಿಯೋಮಿ ಜಿಲ್ಲೆಯ ಗಡಿಭಾಗದಲ್ಲಿ ಈ ವಸತಿ ಪ್ರದೇಶವನ್ನು ನಿರ್ಮಿಸಲಾಗಿದೆ. ಭಾರತ ಮತ್ತು ಚೀನಾ ನಡುವೆ ಇರುವ ವಾಸ್ತವ ಗಡಿ ರೇಖೆಯಿಂದ (ಎಲ್‌ಎಸಿ) ಉತ್ತರಕ್ಕೆ ಮತ್ತು ಅಂತರರಾಷ್ಟ್ರೀಯ ಗಡಿಯಿಂದ ದಕ್ಷಿಣ ಭಾಗದಲ್ಲಿ ಈ ವಸತಿ ಪ್ರದೇಶ ನಿರ್ಮಿಸಲಾಗಿದೆ. ಈ ಎರಡೂ ಗಡಿಗಳ ಮಧ್ಯಭಾಗದಲ್ಲಿ ಈ ವಸತಿ ಪ್ರದೇಶ ಇದೆ' ಎಂದು 'ಎನ್‌ಡಿ ಟಿ.ವಿ' ವರದಿ ಮಾಡಿದೆ.

'ಅಂತರರಾಷ್ಟ್ರೀಯ ಗಡಿಯಿಂದ 7 ಕಿ.ಮೀ. ಒಳಗೆ ಈ ಸ್ಥಳವಿದೆ. 2019ರಲ್ಲಿ ಮ್ಯಾಕ್ಸರ್ ಟೆಕ್ನಾಲಜೀಸ್ ಮತ್ತು ಪ್ಲಾನೆಟ್ ಲ್ಯಾಬ್ಸ್ ತೆಗೆದಿದ್ದ ಉಪಗ್ರಹ ಚಿತ್ರಗಳಲ್ಲಿ, ಈ ವಸತಿ ಪ್ರದೇಶದ ಕುರುಹು ಇರಲಿಲ್ಲ. ಆದರೆ 2021ರ ಜುಲೈನಲ್ಲಿ ತೆಗೆಯಲಾಗಿರುವ ಚಿತ್ರದಲ್ಲಿ ಕಟ್ಟಡಗಳು ನಿರ್ಮಾಣವಾಗಿರುವುದು ಕಾಣುತ್ತದೆ. ಅರ್ಧ ಚಂದ್ರಾಕೃತಿಯಲ್ಲಿರುವ ಈ ವಸತಿ-ಪ್ರದೇಶದಲ್ಲಿ 60 ಸಣ್ಣ ಕಟ್ಟಡಗಳು ಮತ್ತು ಕೆಲವು ದೊಡ್ಡ ಕಟ್ಟಡಗಳು ಇವೆ. ಒಂದು ದೊಡ್ಡ ಕಟ್ಟಡದ ಚಾವಣಿಯ ಮೇಲೆ ಚೀನಾದ ಧ್ವಜದ ಚಿತ್ರವನ್ನು ಬರೆಯಲಾಗಿದೆ. ಧ್ವಜದ ಚಿತ್ರವು ಉಪಗ್ರಹ ಚಿತ್ರದಲ್ಲಿ ಸ್ಪಷ್ಟವಾಗಿ ಕಾಣುತ್ತದೆ' ಎಂದು ಎನ್‌ಡಿ ಟಿ.ವಿ ವಿವರಿಸಿದೆ.

9ನೇ ಪುಟ ನೋಡಿ

ಶೀಘ್ರದಲ್ಲೇ ಮಾತುಕತೆ

'ಪೂರ್ವ ಲಡಾಖ್‌ನ ಸಂಘರ್ಷಪೀಡಿತ ಪ್ರದೇಶದಿಂದ ಭಾರತ ಮತ್ತು ಚೀನಾ ಸೈನಿಕರನ್ನು ವಾಪಸ್ ಕರೆಸಿಕೊಳ್ಳುವ ಸಂಬಂಧ ಎರಡೂ ಸೇನೆಗಳ ಅಧಿಕಾರಿಗಳ ಮಧ್ಯೆ ಮತ್ತೆ ಮಾತುಕತೆ ನಡೆಸಲು ಎರಡೂ ದೇಶಗಳು ಒಪ್ಪಿಕೊಂಡಿವೆ' ಎಂದು ವಿದೇಶಾಂಗ ಸಚಿವಾಲಯವು ಮಾಹಿತಿ ನೀಡಿದೆ.

ಸೈನಿಕರನ್ನು ವಾಪಸ್ ಕರೆಸಿಕೊಳ್ಳುವ ಸಂಬಂಧ ಎರಡೂ ಸೇನೆಯ ಅಧಿಕಾರಿಗಳು ಈವರೆಗೆ 13 ಸುತ್ತಿನ ಮಾತುಕತೆ ನಡೆಸಿದ್ದಾರೆ. ಆದರೆ ಈ ಮಾತುಕತೆಗಳು ನಿರೀಕ್ಷಿತ ಫಲ ನೀಡಿಲ್ಲ. ಈಗ 14ನೇ ಸುತ್ತಿನ ಮಾತುಕತೆ ನಡೆಸಲು ಒಪ್ಪಿಕೊಳ್ಳಲಾಗಿದೆ. ಮಾತುಕತೆ ನಡೆಯಲಿರುವ ದಿನ ಮತ್ತು ಸಮಯವನ್ನು ಇನ್ನಷ್ಟೇ ಅಂತಿಮಗೊಳಿಸಬೇಕಿದೆ' ಎಂದು ಸಚಿವಾಲಯವು ಮಾಹಿತಿ ನೀಡಿದೆ.

ದಿನವಿಡೀ ಮಳೆ: ಮನೆಗಳ ಗೋಡೆ ಕುಸಿತ

ಧರೆಗುರುಳಿದ ಮರಗಳು, ರಸ್ತೆಗಳು ಜಲಾವೃತ • ವಾಹನ ಸವಾರರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಾವೃತಗೊಂಡ ರಸ್ತೆಗಳು, ಅವುಗಳಲ್ಲಿ ಸಾಗಲು ಹರಸಾಹಸ ಪಡುತ್ತಿರುವ ವಾಹನ ಸವಾರರು, ಧರೆಗುರುಳಿದ ಮರಗಳು, ಸುರಿಯುತ್ತಿರುವ ಮಳೆಯ ನಡುವೆಯೇ ಅವುಗಳನ್ನು ತೆರವುಗೊಳಿಸಲು ಪ್ರಯಾಸ ಪಟ್ಟ ಪಾಲಿಕೆ ಸಿಬ್ಬಂದಿ...

ನಗರದ ವಿವಿಧ ಭಾಗಗಳಲ್ಲಿ ಗುರುವಾರ ಕಂಡುಬಂದ ದೃಶ್ಯಗಳಿವು.

ವಾಯುಭಾರ ಕುಸಿತದಿಂದಾಗಿ ಕೆಲ ದಿನಗಳಿಂದ ನಗರದಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿದೆ. ಬುಧವಾರ ಅಲ್ಪ ಬಿಡುವು ನೀಡಿದ್ದ ಮಳೆರಾಯ, ಗುರುವಾರ ಆಗಸದಲ್ಲಿ ಸೂರ್ಯ ಇಣುಕಿ ನೋಡಲೂ ಅವಕಾಶ ನೀಡಲಿಲ್ಲ. ಮುಂಜಾನೆಯಿಂದಲೇ ಶುರುವಾಗಿದ್ದ 'ವರುಣನ ಆಟ' ಮಧ್ಯರಾತ್ರಿವರೆಗೂ ನಿಲ್ಲಲಿಲ್ಲ. ಹೀಗಾಗಿ ಜನಜೀವನ ಅಸ್ತವ್ಯಸ್ತಗೊಂಡಿತ್ತು. ನಗರದಲ್ಲಿ ಮೈನಡುಗಿಸುವ ಚಳಿಯ ವಾತಾವರಣವೂ ನಿರ್ಮಾಣವಾಗಿತ್ತು.



ಕೆ.ಆರ್ ಮಾರುಕಟ್ಟೆಯಲ್ಲಿ ಗ್ರಾಹಕರು ಗುರುವಾರ ಮಳೆಯ ನಡುವೆ ಕೊಡೆ ಹಿಡಿದು ಸಾಗಿದರು –ಪ್ರಜಾವಾಣಿ ಚಿತ್ರ

ಧರೆಗುರುಳಿದ ಗೋಡೆಗಳು: ಎಡಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ನಗರದಲ್ಲಿ ಮೂರು ಕಡೆ ಮನೆ ಹಾಗೂ ಕಟ್ಟಡಗಳ ಗೋಡೆಗಳು ಕುಸಿದಿವೆ.

3ನೇ ಪುಟ ನೋಡಿ

ಶಾಲೆಗಳಿಗೆ ರಜೆ

ಬೆಂಗಳೂರು: ಧಾರಾಕಾರವಾಗಿ ಮಳೆ ಸುರಿಯುತ್ತಿರುವುದರಿಂದ ಬೆಂಗಳೂರು ಗ್ರಾಮಾಂತರ, ತುಮಕೂರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಶಾಲೆಗಳಿಗೆ ನ.19 ಮತ್ತು 20ರಂದು ರಜೆ ಘೋಷಿಸಲಾಗಿದೆ. ಬೆಂಗಳೂರು ನಗರ ಮತ್ತು ರಾಮನಗರದಲ್ಲಿ ನ.19ರಂದು ರಜೆ ನೀಡಲಾಗಿದೆ.

ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಮಳೆ ಬೀಳುತ್ತಿರುವುದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆಯಾ ಜಿಲ್ಲೆಗಳ ಪರಿಸ್ಥಿತಿಯನ್ನು ಅವಲೋಕಿಸಿ ಶಾಲೆಗಳಿಗೆ ರಜೆ ಘೋಷಿಸುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತ ಡಾ.ಆರ್. ವಿಶಾಲ್ ಪತ್ರ ಬರೆದಿದ್ದಾರೆ.

ಇನ್ನಷ್ಟು ಸುದ್ದಿಗಳು 8

ಚರ್ಮ ತಾಗಿದ್ದರೆ ಮಾತ್ರ ಲೈಂಗಿಕ ದೌರ್ಜನ್ಯ: ಬಾಂಬೆ ಹೈಕೋರ್ಟ್ ತೀರ್ಪು

ತೀರ್ಪು ರದ್ದುಪಡಿಸಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಬಾಲಕಿಯ ಚರ್ಮಕ್ಕೆ ಆರೋಪಿಯ ಚರ್ಮ ತಾಗಿದ್ದರೆ ಮಾತ್ರ ಲೈಂಗಿಕ ದೌರ್ಜನ್ಯ ನಡೆದಿದೆ ಎಂದು ಪರಿಗಣಿಸಬಹುದು ಎಂದು ಬಾಂಬೆ ಹೈಕೋರ್ಟ್ ಪೋಕ್ಸೊ ಕಾಯ್ದೆ ಅಡಿಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ಗುರುವಾರ ರದ್ದುಪಡಿಸಿದೆ. ದೌರ್ಜನ್ಯ ಎಸಗಿದ ವ್ಯಕ್ತಿಯ ಲೈಂಗಿಕತೆಯ ಉದ್ದೇಶವೇ ಇಲ್ಲಿ ಮುಖ್ಯವಾದ ಅಂಶವೇ ಹೊರತು ಬಾಲಕಿಯ ಚರ್ಮಕ್ಕೆ ಆರೋಪಿಯ ಚರ್ಮ ತಾಗಿದೆಯೇ ಎಂಬುದಲ್ಲ ಎಂದು ಕೋರ್ಟ್ ಹೇಳಿದೆ.



ಸಂತ್ರಸ್ತ ಬಾಲಕಿಯ ಚರ್ಮಕ್ಕೆ ಆರೋಪಿಯ ಚರ್ಮ ತಾಗಿಲ್ಲ. ಹಾಗಾಗಿ, ಲೈಂಗಿಕ ದೌರ್ಜನ್ಯ ನಡೆದಿದೆ ಎಂದು ಪೋಕ್ಸೊ ಕಾಯ್ದೆ ಅಡಿಯಲ್ಲಿ ಪರಿಗಣಿಸುವುದು ಸಾಧ್ಯವಿಲ್ಲ ಎಂದು ಬಾಂಬೆ ಹೈಕೋರ್ಟ್ ಹೇಳಿತ್ತು.

ಬಾಲಕಿಯ ಲೈಂಗಿಕ ಅಂಗ ಅಥವಾ ಇನ್ನಾವುದೇ ಭಾಗವನ್ನು ಲೈಂಗಿಕತೆಯ ಉದ್ದೇಶದಿಂದ ಮುಟ್ಟುವುದು ಪೋಕ್ಸೊ ಕಾಯ್ದೆಯ ಸೆಕ್ಷನ್ 7ರ ಪ್ರಕಾರ ಲೈಂಗಿಕ ದೌರ್ಜನ್ಯ ಎನಿಸುತ್ತದೆ ಎಂದು ನ್ಯಾಯಮೂರ್ತಿ ಯು.ಯು. ಲಲಿತ್ ನೇತೃತ್ವದ ಪೀಠವು ಹೇಳಿದೆ. ಅಪರಾಧಿಯು ಕಾನೂನಿನ ಬಲೆಯಿಂದ ತಪ್ಪಿಸಿಕೊಳ್ಳದಂತೆ ನೋಡಿಕೊಳ್ಳುವುದು ಕೂಡ ಕಾನೂನಿನ ಉದ್ದೇಶ ಎಂದು ಪೀಠ ಹೇಳಿದೆ.

9ನೇ ಪುಟ ನೋಡಿ

ಡಿ.9ರಿಂದ ಪಿಯು ಮಧ್ಯವಾರ್ಷಿಕ ಪರೀಕ್ಷೆ

ಬೆಂಗಳೂರು: ಪ್ರಥಮ ಮತ್ತು ದ್ವಿತೀಯ ಪಿಯುಸಿ ಮಧ್ಯ ವಾರ್ಷಿಕ ಪರೀಕ್ಷೆಗಳನ್ನು ಏಕಕಾಲಕ್ಕೆ ಡಿಸೆಂಬರ್ 9ರಿಂದ 23ರವರೆಗೆ ನಡೆಸಲು ನಿರ್ಧರಿಸಲಾಗಿದೆ.

ಈ ಬಗ್ಗೆ ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕಿ ಆರ್. ಸ್ನೇಹಲ್ ಅವರು ಗುರುವಾರ ಪರಿಷ್ಕೃತ ಸುತ್ತೋಲೆ ಹೊರಡಿಸಿದ್ದಾರೆ.

9ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಉಚಿತ ನೇತ್ರ ತಪಾಸಣೆ ಶಿಬಿರ

ಬೆಂಗಳೂರು: ಸ್ನೇಹ ಸಮ್ಮಿಲನ ಫೌಂಡೇಷನ್ ಹಾಗೂ ಅತ್ತಿಬೆಲೆ ಸರ್ಜಾಪುರದ ರೋಟರಿ ವತಿಯಿಂದ ಇದೇ 21ರಂದು ಉಚಿತ ನೇತ್ರ ತಪಾಸಣೆ, ಶಸ್ತ್ರ ಚಿಕಿತ್ಸೆ ಮತ್ತು ಕನ್ನಡಕ ವಿತರಣಾ ಶಿಬಿರ ಆಯೋಜಿಸಲಾಗಿದೆ.

ಸರ್ಜಾಪುರದ ಇಟ್ಟಂಗೂರು ರಸ್ತೆಯ ಶ್ರೀರಾಮ್ ಪಬ್ಲಿಕ್ ಸ್ಕೂಲ್‌ನಲ್ಲಿ ಈ ಶಿಬಿರ ಆಯೋಜಿಸಲಾಗಿದೆ. ಬೆಳಿಗ್ಗೆ 8.30ರಿಂದ ಶಿಬಿರ ಆರಂಭವಾಗಲಿದೆ.

ಶಿಬಿರದಲ್ಲಿ ಕಣ್ಣಿಗೆ ಸಂಬಂಧಿಸಿದ ಎಲ್ಲ ಸಮಸ್ಯೆಗಳನ್ನು ಉಚಿತವಾಗಿ ತಪಾಸಣೆ ಮಾಡಲಾಗುವುದು. ಶಸ್ತ್ರ-ಚಿಕಿತ್ಸೆಗೆ ಒಳಗಾಗುವವರಿಗೆ ಊಟ, ವಸತಿ, ಔಷಧಿ ಹಾಗೂ ಕನ್ನಡಕಗಳನ್ನು ಉಚಿತವಾಗಿ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.


ಮಾಹಿತಿಗೆ: 9900514779, 9845011464, 9980030440 ಸಂಪರ್ಕಿಸಬಹುದು.

ಪೀಠೋಪಕರಣ ಮೇಳ ಇಂದಿನಿಂದ

ಬೆಂಗಳೂರು: ಮನೆ ಬಳಕೆಯ ಮತ್ತು ವಾಣಿಜ್ಯ ಬಳಕೆ ಉದ್ದೇಶದ ಪೀಠೋಪ-ಕರಣಗಳ ಪ್ರದರ್ಶನ ಮೇಳವು ನಗರದ ಅರಮನೆ ಮೈದಾನದ 'ತ್ರಿಪುರ ವಾಸಿನಿ'ಯಲ್ಲಿ ಶುಕ್ರವಾರದಿಂದ ಸೋಮವಾರ-ದವರೆಗೆ ನಡೆಯಲಿದೆ.

ಈ ಮೇಳದಲ್ಲಿ ಶೇಕಡ 70ರವರೆಗೆ ರಿಯಾಯಿತಿ ಮತ್ತು ಕೊಡುಗೆಗಳು ಲಭ್ಯವಿರಲಿವೆ. ಆಧುನಿಕ ವಿನ್ಯಾಸದ ಪೀಠೋಪಕರಣಗಳು ಮತ್ತು ಒಳಾಂಗಣ ಅಲಂಕಾರದ ಸಂಗ್ರಹಗಳು ಇಲ್ಲಿ ಲಭ್ಯವಿರಲಿವೆ. ನಾಲ್ಕು ದಿನಗಳ ಈ ಮೇಳವು ಬೆಳಿಗ್ಗೆ 10 ರಿಂದ ರಾತ್ರಿ 8ರವರೆಗೆ ಸಾರ್ವಜನಿಕರಿಗೆ ತೆರೆದಿರಲಿದ್ದು, ಪ್ರವೇಶವು ಉಚಿತವಾಗಿದೆ ಎಂದು ಮೇಳವನ್ನು ಆಯೋಜಿಸಿರುವ ಐ ಆ್ಯಡ್ಸ್ ಆ್ಯಂಡ್ ಈವೆಂಟ್ಸ್ ಪ್ರ-ಕಟಣೆಯಲ್ಲಿ ತಿಳಿಸಿದೆ.

ಅರವಿಂದ ಜತ್ತಿಗೆ ಪ್ರಶಸ್ತಿ



ಬಸವಕಲ್ಯಾಣ: ಬೆಂಗಳೂರು ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿಗೆ ಪ್ರಸಕ್ತ ಸಾಲಿನ 'ಡಾ. ಚನ್ನಬಸವ ಪಟ್ಟದ್ದೇವರು ಅನುಭವ ಮಂಟಪ ಪ್ರಶಸ್ತಿ' ಘೋಷಿಸಲಾಗಿದೆ. ಪ್ರಶಸ್ತಿಯು ₹ 1 ಲಕ್ಷ ನಗದು ಹಾಗೂ ಫಲಕ ಒಳಗೊಂಡಿದೆ. ನವೆಂಬರ್ 28 ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು.





ಅಂದ್ರಹಳ್ಳಿ ಮುಖ್ಯರಸ್ತೆಯಲ್ಲಿ ಆಟೊ ರಿಕ್ಷಾವನ್ನು ತಳ್ಳಿಕೊಂಡು ಹೋಗುತ್ತಿರುವುದು (ಎಡ ಚಿತ್ರ). ಅಂದ್ರಹಳ್ಳಿ ಮುಖ್ಯರಸ್ತೆಯಲ್ಲಿ ಪೈಪ್ ಇರಿಸಿರುವುದರಿಂದ ವಾಹನ ಸವಾರರು ಸಂಚಾರಕ್ಕೆ ಪರದಾಟ ನಡೆಸುತ್ತಿರುವುದು –ಪ್ರಜಾವಾಣಿ ಚಿತ್ರಗಳು

ಅಂದ್ರಹಳ್ಳಿ ಮುಖ್ಯರಸ್ತೆಯಲ್ಲಿ ಕಾವೇರಿ ಪೈಪ್ ಲೈನ್ ಅಳವಡಿಕೆ ಕಾಮಗಾರಿ

ರಸ್ತೆ ಕೆಸರುಮಯ: ಸಂಚಾರ ಅಯೋಮಯ

• ವರುಣ ಹೆಗಡೆ



ಬೆಂಗಳೂರು: 'ಮನೆ ಬಾಡಿಗೆಗೆ ಯಾರೂ ಬರುತ್ತಿಲ್ಲ. ಈಗ ಇರುವವರೂ ಮನೆ ಖಾಲಿ ಮಾಡುತ್ತಿದ್ದಾರೆ. ಮಳೆ ಬಂತೆಂದರೆ ವಾಹನಗಳನ್ನು ರಸ್ತೆಗೆ ಇಳಿಸುವ ಹಾಗಿಲ್ಲ. ಕೆಲಸಕ್ಕೆ ತೆರಳಲು ಆಟೊ ರಿಕ್ಷಾಗಳಿಗೆ ದುಪ್ಪಟ್ಟು ಹಣ ತೆರುವುದು ಇಲ್ಲಿ ಅನಿವಾರ್ಯ...'

ಇದು ಅಂದ್ರಹಳ್ಳಿ ನಿವಾಸಿಗಳ ಅಳಲು. ಕಾವೇರಿ ಪೈಪ್‌ಲೈನ್ ಅಳವಡಿಕೆಗಾಗಿ ಈ ಭಾಗದ ರಸ್ತೆಗಳ ಒಂದೆಡೆ ಅಗೆಯಲಾಗಿದೆ. ಇನ್ನೊಂದೆಡೆ, ರಸ್ತೆಯು ಗುಂಡಿಗಳಿಂದ ಕೂಡಿದೆ. ಹೀಗಾಗಿ, ಇಲ್ಲಿನ ರಸ್ತೆಗಳಲ್ಲಿ ಪ್ರಯಾಣ ಮಾಡಲು ವಾಹನ ಸವಾರರು ಹರಸಾಹಸ ಪಡಬೇಕಾದ ಪರಿಸ್ಥಿತಿಯಿದೆ. ಬಿಸಿಲು ಬಂದರೆ ದೂಳು ರಸ್ತೆಯನ್ನು ಆವರಿಸಿಕೊಳ್ಳುತ್ತಿದೆ.

ಅಂದ್ರಹಳ್ಳಿ ಮುಖ್ಯ ರಸ್ತೆಯು ನಗರದಲ್ಲಿ 5.98 ಕಿ.ಮೀ ಹಾದು ಹೋಗಿದ್ದು, ತುಮಕೂರು ರಸ್ತೆಗೆ ಸಂಪರ್ಕ ಕಲ್ಪಿಸಲಿದೆ. ತಿಗಳರಪಾಳ್ಯ, ತಿಪ್ಪೇನಹಳ್ಳಿ, ನಾಗಸಂದ್ರ, ಬಾಗಲಕುಂಟೆ, ಪೀಣ್ಯ, ರಾಘವೇಂದ್ರ-ನಗರ ಸೇರಿದಂತೆ ವಿವಿಧ ಪ್ರದೇಶಗಳಿಗೆ ಸಾಗುವವರು ಇದೇ ಮಾರ್ಗದಲ್ಲಿ ಸಾಗಬೇಕಿದೆ.

ಸಂಚಾರಕ್ಕೆ ಅಡ್ಡಿ: ಈ ರಸ್ತೆಯಲ್ಲಿ ಕೆಲವೆಡೆ ಕಾವೇರಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದೆ. ಹೀಗಾಗಿ, ರಸ್ತೆಯನ್ನು ಎಲ್ಲೆಂದರಲ್ಲಿ ಅಗೆಯಲಾಗಿದೆ. ಇನ್ನೂ ಕೆಲವೆಡೆ ರಸ್ತೆಯಲ್ಲಿಯೇ ಪೈಪ್‌ಗಳನ್ನು ಇರಿಸಲಾಗಿದೆ. ಇದರಿಂದಾಗಿ ವಾಹನ ಸಂಚಾರ ದುಸ್ತರವಾಗಿದ್ದು, ದ್ವಿಚಕ್ರ ವಾಹನ ಸವಾರರು ನಿಯಂತ್ರಣ ತಪ್ಪಿ ಬೀಳುವುದು ಸಾಮಾನ್ಯವಾಗಿದೆ. ಆಟೊ ರಿಕ್ಷಾ, ಕಾರು ಒಳಗೊಂಡಂತೆ ವಿವಿಧ ವಾಹನಗಳು ಕೆಸರಿನಲ್ಲಿ ಸಿಲುಕಿಕೊಳ್ಳುತ್ತಿವೆ.

'ಮಳೆ ಬಂದಲ್ಲಿ ರಸ್ತೆ ಸಂಪೂರ್ಣ ಕೆಸರುಮಯವಾಗುತ್ತದೆ. ಹಲವರು ಪ್ರತಿನಿತ್ಯ ಜಾರಿ ಬೀಳುತ್ತಿದ್ದಾರೆ. ವಾಹನಗಳು ನಡುರಸ್ತೆಯಲ್ಲಿ ಸಿಲುಕಿಕೊಂಡ ಉದಾಹರಣೆಗಳು ಸಾಕಷ್ಟಿವೆ. ನಿತ್ಯವೂ ಇಲ್ಲಿ ಸಾವಿರಾರು ಜನರು ಓಡಾಡುತ್ತಾರೆ. ರಾತ್ರಿ ವೇಳೆ ರಸ್ತೆಯಲ್ಲಿ ಕಾಲು ಇರಿಸಲಾಗದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಮನೆಯಲ್ಲಿ ವಾಹನವಿದ್ದರೂ ಆಟೊ ರಿಕ್ಷಾಗಳಿಗೆ ದುಪ್ಪಟ್ಟು ಬಾಡಿಗೆ ನೀಡಿ, ಕೆಲಸಗಳಿಗೆ ಸಾಗಬೇಕಿದೆ' ಎಂದು ಅಂದ್ರಹಳ್ಳಿ ನಿವಾಸಿಗಳು ಬೇಸರ ವ್ಯಕ್ತಪಡಿಸಿದರು.

ವಾಹನ ದಟ್ಟಣೆ ಹೆಚ್ಚಳ

ಅಂದ್ರಹಳ್ಳಿಯ ಅಡ್ಡ ರಸ್ತೆಗಳ ಡಾಂಬರು ಸಂಪೂರ್ಣ ಕಿತ್ತುಹೋಗಿದ್ದು, ಸಂಚಾರಕ್ಕೆ ಯೋಗ್ಯವಾಗಿಲ್ಲ. ಇದರಿಂದಾಗಿ ವಿವಿಧೆಡೆ ಕೆಲಸಕ್ಕೆ ಸಾಗುವವರು ಮುಖ್ಯ ರಸ್ತೆಗೆ ಬಂದು, ಆಟೊ ರಿಕ್ಷಾದ ಮೂಲಕ ಸಾಗಬೇಕಿದೆ. ಕೆಲವರು ದ್ವಿಚಕ್ರ ವಾಹನವನ್ನು ಮುಖ್ಯರಸ್ತೆಯವರೆಗೆ ತಳ್ಳಿಕೊಂಡೇ ಬರುತ್ತಿದ್ದಾರೆ. ಕಾವೇರಿ ಪೈಪ್ ಲೈನ್ ಅಳವಡಿಕೆ ಕಾಮಗಾರಿಯಿಂದಾಗಿ ಬಸ್‌ಗಳು ಬರುತ್ತಿಲ್ಲ. ಈ ರಸ್ತೆಯಲ್ಲಿ ಕೆಲ ದಿನಗಳಿಂದ ವಾಹನ ದಟ್ಟಣೆ ಹೆಚ್ಚಳವಾಗುತ್ತಿದೆ.

'ರಸ್ತೆಗಳ ಸ್ಥಿತಿಯನ್ನು ನೋಡಿ ಯಾರೂ ಮನೆ ಬಾಡಿಗೆಗೆ ಬರುತ್ತಿಲ್ಲ. ಇರುವವರೂ ಬೇರೆ ಕಡೆ ತೆರಳುತ್ತಿದ್ದಾರೆ. ರಸ್ತೆಯಲ್ಲಿನ ಕೆಸರು ಇಕ್ಕೆಲಗಳಲ್ಲಿರುವ ಮನೆಗಳಿಗೂ ಸಿಡಿಯುತ್ತಿದೆ. ಬಿಸಿಲು ಬಂದರೆ ದೂಳು ಬರುತ್ತದೆ. ಜೀವನ ನಡೆಸುವುದು ಕಷ್ಟವಾಗಿದೆ' ಎಂದು ಅಂದ್ರಳ್ಳಿ ನಿವಾಸಿ ನಾಗೇಶ್ ತಿಳಿಸಿದರು.



ರಸ್ತೆಗಳ ಸ್ಥಿತಿ ಹದಗೆಟ್ಟಿರುವುದರಿಂದ ವಾಹನಗಳ ನಿರ್ವಹಣೆಗೆ ಹೆಚ್ಚಿನ ಹಣ ಖರ್ಚಾಗುತ್ತಿದೆ. ಮನೆಯಲ್ಲಿನ ಕಾರನ್ನು ಹೊರತೆಗೆಯುತ್ತಿಲ್ಲ. ಕೆಲಸಕ್ಕೆ ತೆರಳಲಾಗುತ್ತಿಲ್ಲ

ಹರೀಶ್, ಅಂದ್ರಹಳ್ಳಿ ಮುಖ್ಯರಸ್ತೆ



ರಸ್ತೆಗಳ ದುಸ್ಥಿತಿಯಿಂದಾಗಿ ಒಂದೂವರೆ ತಿಂಗಳಿಂದ ನರಕಯಾತನೆ ಅನುಭವಿಸುತ್ತಿದ್ದೇವೆ. ರಸ್ತೆಗಳನ್ನು ಎಲ್ಲೆಂದರಲ್ಲಿ ಅಗೆಯಲಾಗಿದ್ದು, ಮಳೆ ಬಂದರೆ ಸಂಚಾರ ಕಷ್ಟ

ರಾಘವೇಂದ್ರ, ಅಂದ್ರಹಳ್ಳಿ ನಿವಾಸಿ



ಬಿಸಿಲು ಬಂದರೆ ದೂಳು, ಮಳೆ ಬಂದರೆ ಕೆಸರಿನ ಸಮಸ್ಯೆ ಎದುರಿಸಬೇಕಾಗಿದೆ. ದ್ವಿಚಕ್ರ ವಾಹನ ಸವಾರರು ನಿಯಂತ್ರಣ ತಪ್ಪಿ ಬೀಳುವುದು ಸಾಮಾನ್ಯವಾಗಿದೆ

ವೆಂಕಟೇಶ್, ಕರಿಹೋಬನಹಳ್ಳಿ ನಿವಾಸಿ

ರೋಗಿಗಳಿಗೆ ಬೆರಿಯಾಟ್ರಿಕ್ ಶಸ್ತ್ರಚಿಕಿತ್ಸೆ ಉತ್ತಮ ವಿಧಾನ: ತಜ್ಞ ವೈದ್ಯರ ಸಲಹೆ

'ಜೀವನಶೈಲಿ ಬದಲಿಸಿ, ಮಧುಮೇಹ ನಿಯಂತ್ರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮತೋಲನದ ಆಹಾರ ಮತ್ತು ನಿಯಮಿತ ವ್ಯಾಯಾಮದಿಂದ ಮಧುಮೇಹ ನಿಯಂತ್ರಿಸ-ಬಹುದು. ದಿನನಿತ್ಯ ನಾವು ಏನು ತಿನ್ನುತ್ತೇವೆ ಎನ್ನುವ ಬಗ್ಗೆ ಎಚ್ಚರ ವಹಿಸಿದರೆ ಮಧುಮೇಹವನ್ನು ದೂರ ಇರಿಸಬಹುದು. ಶಸ್ತ್ರಚಿಕಿತ್ಸೆ ಕೊನೆಯ ಆಯ್ಕೆ' ಎಂದು ಮಣಿಪಾಲ್ ಆಸ್ಪತ್ರೆ ವೈದ್ಯರು ಅಭಿಪ್ರಾಯಪಟ್ಟರು.

ವಿಶ್ವ ಮಧುಮೇಹ ದಿನದ ಪ್ರಯುಕ್ತ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಸಹಯೋಗದಲ್ಲಿ ಮಿಲ್ಲರ್ ರಸ್ತೆಯ ಮಣಿಪಾಲ್ ಆಸ್ಪತ್ರೆಯಲ್ಲಿ (ಈ ಮೊದಲು ವಿಕ್ರಂ ಆಸ್ಪತ್ರೆ) ಗುರುವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ 'ಬೊಜ್ಜು ಇರುವ ಮಧುಮೇಹ ವ್ಯಕ್ತಿಗಳಿಗೆ ಬೆರಿಯಾಟ್ರಿಕ್ ಶಸ್ತ್ರಚಿಕಿತ್ಸೆಯಿಂದಾಗುವ ಪ್ರಯೋಜನಗಳು' ಕುರಿತು ತಜ್ಞ ವೈದ್ಯರು ವಿಶ್ಲೇಷಿಸಿದರು.

ಮಣಿಪಾಲ್ ಆಸ್ಪತ್ರೆಯ ಕನ್ಸಲ್ಟಂಟ್ ಎಂಡೊಕ್ರಿನೊಲಾಜಿಸ್ಟ್ ಡಾ. ಶಾರದಾ ಮಾತನಾಡಿ, 'ಬೊಜ್ಜು ಹೆಚ್ಚಾಗಲು ಜೀವನ ಶೈಲಿಯೇ ಪ್ರಮುಖ ಕಾರಣ. ಒತ್ತಡದ ಬದುಕು ಸಹ ಇದಕ್ಕೆ ಕಾರಣವಾಗಿದೆ. ವ್ಯಾಯಾಮ ಆರೋಗ್ಯದ ಮೇಲೆ ಅಪಾರ ಪರಿಣಾಮ ಬೀರಲಿದೆ. ಇದರಿಂದ, ಕೊಬ್ಬಿನ ಅಂಶ ಕಡಿಮೆ ಮಾಡಬಹುದು. ಮಧುಮೇಹ ನಿಯಂತ್ರಿಸಲು ಶಸ್ತ್ರಚಿಕಿತ್ಸೆ ಕೈಗೊಳ್ಳುವ ಮುನ್ನ ರೋಗಿಯ ಮಾನಸಿಕ ಸ್ಥಿತಿಯ ಬಗ್ಗೆ ತಿಳಿದುಕೊಳ್ಳುವುದು ಬಹಳ ಮುಖ್ಯ' ಎಂದು ವಿವರಿಸಿದರು.

ಮಣಿಪಾಲ್ ಆಸ್ಪತ್ರೆಯ ಗ್ರಂಥಿ ವಿಜ್ಞಾನಿ ಡಾ. ಪ್ರಿಯಾ ಚಿನ್ನಪ್ಪ ಮಾತನಾಡಿ, 'ಇತ್ತೀಚಿನ ವರ್ಷಗಳಲ್ಲಿ ಯುವಕರಲ್ಲೇ ಹೆಚ್ಚು ಮಧುಮೇಹ ಕಾಣಿಸಿಕೊಳ್ಳುತ್ತಿದೆ. ಮಕ್ಕಳು ಸಹ ಇದಕ್ಕೆ ಹೊರತಾಗಿಲ್ಲ. ಒಂದೇ ಸ್ಥಳದಲ್ಲಿ ಬಹು ಹೊತ್ತು ಕುಳಿತುಕೊಂಡು ಕೆಲಸ ಮಾಡುವವರಲ್ಲಿ ಈ ಕಾಯಿಲೆ ಕಂಡು ಬರುತ್ತಿದೆ. ಕೋವಿಡ್ ಸಾಂಕ್ರಾಮಿಕ ಕಾಯಿಲೆ ಆರಂಭವಾದ ಬಳಿಕ, ವ್ಯಾಯಾಮ ಮಾಡುವುದು ಕಡಿಮೆಯಾಗಿದ್ದರಿಂದ ಹಲವರಲ್ಲಿ ಮಧುಮೇಹ ಕಂಡು ಬಂದಿದೆ' ಎಂದು ವಿವರಿಸಿದರು.

ಕನ್ಸಲ್ಟಂಟ್ ಬೆರಿಯಾಟ್ರಿಕ್ ಮತ್ತು ಅಡ್ವಾನ್ಸ್‌ಡ್ ಸರ್ಜನ್ ಡಾ. ಜಿ. ಮೊಯಿನುದ್ದೀನ್, 'ಬೆರಿಯಾಟ್ರಿಕ್ ಶಸ್ತ್ರ-ಚಿಕಿತ್ಸೆ 50 ವರ್ಷಗಳ ಹಿಂದೆಯೇ ಆರಂಭವಾಗಿದೆ. ಇದರಲ್ಲಿ 36ಕ್ಕೂ ಹೆಚ್ಚು ಪದ್ಧತಿಗಳಿವೆ. ಹೊಟ್ಟೆಗಾತ್ರವನ್ನು ಕಡಿಮೆ ಮಾಡುವುದು ಈ ಶಸ್ತ್ರಚಿಕಿತ್ಸೆಯ ಮುಖ್ಯ ಉದ್ದೇಶ. ಶಸ್ತ್ರಚಿಕಿತ್ಸೆ ಮೂಲಕ ಮಧುಮೇಹವನ್ನು ನಿಯಂತ್ರಿಸಬಹುದು. ಆದರೆ, ಸಂಪೂರ್ಣ ಗುಣಮುಖರ-ನ್ನಾಗಿ ಮಾಡಲು ಸಾಧ್ಯವಿಲ್ಲ. ಇತ್ತೀಚಿನ ದಿನಗಳಲ್ಲಿ ಶಸ್ತ್ರಚಿಕಿತ್ಸೆಯ ಕೌಶಲದಲ್ಲೂ ಅಪಾರ ಸುಧಾರಣೆಯಾಗಿದೆ' ಎಂದರು.

'ಮೈದಾ ಇರುವ ತಿಂಡಿ ತಿನಿಸುಗಳನ್ನು ಸೇವಿಸುವುದನ್ನು ಕಡಿಮೆ ಮಾಡಬೇಕು. ದಿನನಿತ್ಯ ನಡೆಯಬೇಕು. ಇಂದು ತೂಕ ಕಡಿಮೆ ಮಾಡುವುದು ಸಹ ಉದ್ಯಮವಾಗಿದೆ. ಹೀಗಾಗಿ ಜನರು ಎಚ್ಚರವಹಿಸಬೇಕು' ಎಂದು ಸಲಹೆ ನೀಡಿದರು.

ಬೆರಿಯಾಟ್ರಿಕ್ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ದೀಪಕ್ ತರುಣ್ ಮತ್ತು ಫರೀದಾ ಅವರು ತಮ್ಮ ಅನುಭವಗಳನ್ನು ಇದೇ ಸಂದರ್ಭದಲ್ಲಿ ಹಂಚಿಕೊಂಡರು.

'185 ಕೆ.ಜಿ. ಇದ್ದ ನಾನು ಈಗ 125 ಕೆ.ಜಿ.ಗೆ ಇಳಿದಿದ್ದೇನೆ. ಬೆರಿಯಾಟ್ರಿಕ್ ಶಸ್ತ್ರಚಿಕಿತ್ಸೆ ಬಳಿಕ 6–7 ದಿನಗಳಲ್ಲಿ ಗುಣಮುಖನಾಗಿ ಮತ್ತೆ ಎಂದಿನಂತೆ ಕೆಲಸಕ್ಕೆ ತೆರಳಿದೆ' ಎಂದು ದೀಪಕ್ ತರುಣ್ ವಿವರಿಸಿದರು.



'ಬೊಜ್ಜು ಇರುವ ಮಧುಮೇಹ ವ್ಯಕ್ತಿಗಳಿಗೆ ಬೆರಿಯಾಟ್ರಿಕ್ ಶಸ್ತ್ರಚಿಕಿತ್ಸೆಯಿಂದಾಗುವ ಪ್ರಯೋಜನಗಳು' ಕುರಿತ ಚರ್ಚೆಯಲ್ಲಿ ಬೆರಿಯಾಟ್ರಿಕ್ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ಫರೀದಾ ಮತ್ತು ದೀಪಕ್ ತರುಣ್ ಹಾಗೂ ವೈದ್ಯ ಡಾ. ಜಿ. ಮೊಯಿನುದ್ದೀನ್; 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್'ನ ಸಹಾಯಕ ಪ್ರಧಾನ ವ್ಯವಸ್ಥಾಪಕಿ ಲಿಸ್ಸಿ ಪ್ರಭಾಕರ್; ವೈದ್ಯರಾದ ಡಾ. ಪ್ರಿಯಾ ಚಿನ್ನಪ್ಪ, ಡಾ. ಶಾರದಾ ಭಾಗವಹಿಸಿದ್ದರು.–ಪ್ರಜಾವಾಣಿ ಚಿತ್ರ



ಮಹಿಳಾ ಉದ್ಯಮ ಸಹಾಯವಾಣಿ ಒಪ್ಪಂದ ಪತ್ರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಡುಗಡೆ ಮಾಡಿದರು. ಉಬುಂಟು ಅಧ್ಯಕ್ಷೆ ಕೆ. ರತ್ನಪ್ರಭಾ, ಕೈಗಾರಿಕಾ ಸಚಿವ ಮುರುಗೇಶ್ ಆರ್. ನಿರಾಣಿ ಇದ್ದರು –ಪ್ರಜಾವಾಣಿ ಚಿತ್ರ

ಮಹಿಳಾ ಉದ್ಯಮಿಗಳಿಗೆ ಪ್ರತ್ಯೇಕ ಆರ್ಥಿಕ ಸಂಸ್ಥೆ: ಸಿಎಂ ಭರವಸೆ

ಬೆಂಗಳೂರು: ಮಹಿಳಾ ಉದ್ಯಮಿಗಳಿಗೆ ಪ್ರತ್ಯೇಕ ಆರ್ಥಿಕ ಸಂಸ್ಥೆ ಆರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಅಂತರರಾಷ್ಟ್ರೀಯ ಮಹಿಳಾ ಉದ್ಯಮಶೀಲತಾ ದಿನದ ಅಂಗವಾಗಿ ನಡೆಯುತ್ತಿರುವ 'ಉಬುಂಟು' ಮಹಿಳಾ ಸಮಾವೇಶವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಮಹಿಳಾ ಉದ್ದಿಮೆದಾರರಿಗೆ ಪ್ರತ್ಯೇಕ ಆರ್ಥಿಕ ಸಂಸ್ಥೆ ಪ್ರಾರಂಭಿಸಲು ಆರ್ಥಿಕ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಗ್ರಾಮೀಣ ಪ್ರದೇಶದ ಮಹಿಳೆಯರನ್ನು ಗುರಿಯಾಗಿಸಿ ಆರ್ಥಿಕ ಸಂಸ್ಥೆ ಪ್ರಾರಂಭಿಸುವ ಗುರಿ ಹೊಂದಲಾಗಿದೆ' ಎಂದರು.

'ಹಳ್ಳಿಗಳಲ್ಲಿನ ಮಹಿಳಾ ಸ್ವಸಹಾಯ ಸಂಘಗಳ ಮಾದರಿಯಲ್ಲಿ ಹೊಸ ಸಂಘಗಳನ್ನು ರಚಿಸಲಾಗುವುದು. ಅಂಧ ಮತ್ತು ಅಂಗವಿಕಲ ಮಹಿಳೆಯರಿಗೆ ಉದ್ಯೋಗ ನೀಡಲು ವಿಶೇಷ ಯೋಜನೆ ರೂಪಿಸಲಾಗುವುದು' ಎಂದು ಹೇಳಿದರು.

ಸಚಿವ ಮುರುಗೇಶ್ ನಿರಾಣಿ, 'ಗುಡಿ ಕೈಗಾರಿಕೆಯಿಂದ ದೊಡ್ಡ ಕೈಗಾರಿಕೆ ತನಕ ಮಹಿಳೆಯರು ಮುಂಚೂಣಿಯಲ್ಲಿರ-ಬೇಕು. ಮಹಿಳೆಯರ ಉದ್ಯಮಶೀಲತಾ ಚಟುವಟಿಕೆಗಳಿಗೆ ಶೇ 4ರ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದೆ' ಎಂದರು.

25 ಮಹಿಳೆಯರಿಂದ ಪ್ರಾರಂಭವಾದ 'ಉಬುಂಟು' ಮಹಿಳಾ ಉದ್ದಿಮೆದಾರರ ಸಂಘಟನೆ ಈಗ 30 ರಾಜ್ಯಗಳಿಗೆ ವ್ಯಾಪಿಸಿದೆ ಎಂದು 'ಉಬುಂಟು' ಅಧ್ಯಕ್ಷೆ ಕೆ. ರತ್ನಪ್ರಭಾ ತಿಳಿಸಿದರು.

ನಿಧನ ವಾರ್ತೆ

ನಟ ದುನಿಯಾ ವಿಜಯ್‌ಗೆ ಪಿತೃ ವಿಯೋಗ



ಬೆಂಗಳೂರು: ನಟ, ನಿರ್ದೇಶಕ ದುನಿಯಾ ವಿಜಯ್ ತಂದೆ ರುದ್ರಪ್ಪ (81) ಅವರು ಬುಧವಾರ ಕೆಲಕಾಲದ ಅನಾರೋಗ್ಯದಿಂದ ನಿಧನರಾದರು.

ತಮ್ಮ ತಂದೆ ನಿಧನರಾದ ಕುರಿತು ಫೇಸ್‌ಬುಕ್‌ಲ್ಲಿ ದುನಿಯಾ ವಿಜಯ್ ಬರೆದುಕೊಂಡಿದ್ದು, 'ಮಿಸ್ ಯು ಅಪ್ಪಾ' ಎಂದು ಪೋಸ್ಟ್ ಹಾಕಿದ್ದಾರೆ. ಬುಧವಾರ ಆನೇಕಲ್ ಸಮೀಪದ ಕುಂಬಾರನಹಳ್ಳಿ-ಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಕಳೆದ ಜುಲೈನಲ್ಲಿ ವಿಜಯ್ ತಾಯಿ ನಾರಾಯಣಮ್ಮ ನಿಧನರಾಗಿದ್ದರು.

ಗಂಗಾಧರ ಕುಮಾರ್ ಎಸ್.



ಬೆಂಗಳೂರು: ವಿಜಯನಗರದ ನಿವಾಸಿ ಹಾಗೂ ಕುಮಾರ್ ಆ್ಯಂಡ್ ಕಂಪನಿಯ ಗಂಗಾಧರ ಕುಮಾರ್ ಎಸ್.(66) ಅವರು ಗುರುವಾರ ನಿಧನರಾದರು.

ಪತ್ನಿ ಪ್ರೇಮಾವತಿ ಹಾಗೂ ಇಬ್ಬರು ಪುತ್ರರು ಇದ್ದಾರೆ. ಮೃತರ ಅಂತಿಮ ಸಂಸ್ಕಾರ ಸುಮನಹಳ್ಳಿಯ ಚಿತಾಗಾರದಲ್ಲಿ ಶುಕ್ರವಾರ(ನ.19) ನಡೆಯಲಿದೆ ಸಂಪರ್ಕಕ್ಕೆ: 9900783329

ಮಳೆ: ಸಾವಿರಾರು ಹೆಕ್ಟೇರ್ ಬೆಳೆ ಹಾನಿ

ಪ್ರಜಾವಾಣಿ ವಾರ್ತೆ



ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ವೆಂಗಳಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡದ ಗೋಡೆ ಬುಧವಾರ ರಾತ್ರಿ ಕುಸಿದಿದ್ದು, ಮಕ್ಕಳು ಗುರುವಾರ ಬಯಲಿನಲ್ಲಿ ಪಾಠ ಕೇಳಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ರಾಜ್ಯದ ಹಲವಡೆ ಕೆಲವು ದಿನಗಳಿಂದ ನಿರಂತರವಾಗಿ ಮಳೆ ಸುರಿಯುತ್ತಿದ್ದು, ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದ ಬೆಳೆಗಳು ಹಾನಿಗೀಡಾಗಿವೆ. ನೂರಾರು ಮನೆಗಳು, ದೇವಸ್ಥಾನದ ಗೋಡೆ, ಶಾಲಾ ಕಟ್ಟಡ ಕುಸಿದಿವೆ.

ಕೋಲಾರ ಜಿಲ್ಲೆಯೊಂದರಲ್ಲಿಯೇ 36 ಸಾವಿರ ಹೆಕ್ಟೇರ್ ರಾಗಿ ಮತ್ತು ತೋಟಗಾರಿಕೆ ಬೆಳೆಗಳು ನಷ್ಟವಾಗಿವೆ. ₹5.78 ಕೋಟಿ ಮೌಲ್ಯದ 1,370 ಹೆಕ್ಟೇರ್‌ನಲ್ಲಿದ್ದ ಟೊಮೆಟೊ ಹಾಗೂ ತರಕಾರಿ, ಸೊಪ್ಪು ಜಮೀನಿನಲ್ಲೇ ಕೊಳೆಯುತ್ತಿವೆ. ರಾಗಿ, ಮುಸುಕಿನ ಜೋಳ, ನೆಲಗಡಲೆ, ತೊಗರಿ, ಭತ್ತ ಸೇರಿದಂತೆ 34,554 ಹೆಕ್ಟೇರ್ ಕೃಷಿ ಬೆಳೆ ನಾಶವಾಗಿದೆ.

ತುಮಕೂರು ಜಿಲ್ಲೆಯಲ್ಲಿ ರಾಗಿ ಬೆಳೆ ನೆಲಕ್ಕೆ ಮಲಗಿದೆ. ಜಿಲ್ಲೆಯಲ್ಲಿ 14,500 ಸಾವಿರ ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಳೆದ ಮೂರು ದಶಕಗಳಲ್ಲಿಯೇ ಅಧಿಕ ಮಳೆ ಪ್ರಸಕ್ತ ವರ್ಷ ಸುರಿದಿದ್ದು, ಅಕ್ಟೋಬರ್ 9ರಿಂದ ನ.11ರವರೆಗೆ 905.25 ಹೆಕ್ಟೇರ್ ತೋಟಗಾರಿಕೆ ಬೆಳೆಗಳು ನಾಶವಾಗಿವೆ. ಹಾನಿಯ ಒಟ್ಟು ಮೌಲ್ಯ ₹ 19.72 ಕೋಟಿ ಎಂದು ಅಂದಾಜಿಸಲಾಗಿದೆ. ಕೃಷಿ ಇಲಾಖೆ ಸಮೀಕ್ಷೆ ಪ್ರಕಾರ ಅಂದಾಜು 5,032 ಹೆಕ್ಟೇರ್ ಕೃಷಿ ಬೆಳೆ ಹಾನಿಯಾಗಿದೆ. ಭಾರಿ ಮಳೆ ಕಾರಣ ನ.19 ಮತ್ತು 20ರಂದು ಜಿಲ್ಲೆಯ ಶಾಲೆ ಮತ್ತು ಅಂಗನವಾಡಿಗಳಿಗೆ ರಜೆ ಘೋಷಿಸಲಾಗಿದೆ.

ಬೆಳಗಾವಿ ಜಿಲ್ಲೆಯ 'ಬೆಳಗಾವಿ, ಖಾನಾಪುರ ಹಾಗೂ ಚನ್ನಮ್ಮನ ಕಿತ್ತೂರು ತಾಲ್ಲೂಕುಗಳಲ್ಲಿ ಅಂದಾಜು 2,150 ಹೆಕ್ಟೇರ್ ಭತ್ತದ ಬೆಳೆಗೆ ಹಾನಿಯಾಗಿದೆ' ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ ತಿಳಿಸಿದರು.

ಉತ್ತರ ಕನ್ನಡ ಜಿಲ್ಲೆಯ ಕೃಷಿ ಕ್ಷೇತ್ರ ನಲುಗಿ ಹೋಗಿದೆ. ಕರಾವಳಿ, ಘಟ್ಟದ ಮೇಲಿನ ತಾಲ್ಲೂಕುಗಳ ಭತ್ತದ ಬೆಳೆ ಬಹುದೊಡ್ಡ ಪ್ರಮಾಣದ ನಷ್ಟ ಅನುಭವಿಸಿದೆ. ಒಟ್ಟು 894.9 ಹೆಕ್ಟೇರ್ ಪ್ರದೇಶದಲ್ಲಿ ಭತ್ತ ನಾಶವಾಗಿದೆ. ಕೊಯ್ಲಿಗೆ ಸಿದ್ಧವಾಗಿದ್ದ ಸಸಿಗಳು ಕೊಚ್ಚಿಹೋಗಿವೆ. ಕೊಯ್ಲು ಮಾಡಲಾಗಿದ್ದ ಸಾವಿರ ಕ್ವಿಂಟಲ್‌ಗೂ ಹೆಚ್ಚು ಮೆಕ್ಕೆಜೋಳ ಮಳೆನೀರಿಗೆ ಹಾಳಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಕಟಾವಿಗೆ ಬಂದ ಭತ್ತದ ಬೆಳೆ ನೆಲಕ್ಕುರುಳುತ್ತಿದೆ. ಮೆಕ್ಕೆಜೋಳದ ತೆನೆಗಳು ಮೊಳಕೆಯೊಡೆಯುತ್ತಿವೆ. ಜಿಲ್ಲೆಯಲ್ಲಿ 1,33,931 ಹೆಕ್ಟೇರ್ ಕೃಷಿ ಬೆಳೆ ಕ್ಷೇತ್ರವಿದೆ. 78,100 ಹೆಕ್ಟೇರ್ ಭತ್ತ, 52 ಸಾವಿರ ಹೆಕ್ಟೇರ್ ಮೆಕ್ಕೆಜೋಳ ಬೆಳೆಯಲಾಗಿದೆ. ಶೇ 90ರಷ್ಟು ಭತ್ತ, ಮೆಕ್ಕೆಜೋಳದ ಬೆಳೆ ಕಟಾವಿಗೆ ಬಂದಿದೆ. ಮಳೆ ಬಿಡುವು ನೀಡದ ಕಾರಣ ಹೊಲಗಳಲ್ಲಿ ನೀರು ನಿಂತು ಕಟಾವಿಗೆ ಅಡ್ಡಿಯಾಗಿದೆ. ಮಳೆಯಿಂದಾಗಿ 78 ಹೆಕ್ಟೇರ್ ಭತ್ತ, 13 ಹೆಕ್ಟೇರ್ ಮೆಕ್ಕೆಜೋಳ, 2 ಹೆಕ್ಟೇರ್ ಭತ್ತದ ಬೆಳೆ ನಷ್ಟವಾಗಿದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಎಂ. ಕಿರಣ್ ಕುಮಾರ್ ಮಾಹಿತಿ ನೀಡಿದರು.

ಹಾಸನ ಜಿಲ್ಲೆಯಲ್ಲಿ ಕಟಾವಿಗೆ ಬಂದಿದ್ದ ರಾಗಿ, ಮೆಕ್ಕೆಜೋಳಕ್ಕೆ ಹೆಚ್ಚು ಹಾನಿಯಾಗಿದೆ. ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ 675 ಹೆಕ್ಟೇರ್‌ನಲ್ಲಿ ಮೆಕ್ಕೆಜೋಳ ನೆಲಕಚ್ಚಿದ್ದರೆ, 19,403 ಹೆಕ್ಟೇರ್ ರಾಗಿ ಹಾಳಾಗಿದೆ.

ನಗರದಲ್ಲಿ ಇಂದು

ಲಕ್ಷದೀಪೋತ್ಸವ: ನೇತೃತ್ವ: ಆರ್.ಕೆ. ವಾದೀಂದ್ರ ಆಚಾರ್ಯ, ಸ್ಥಳ: ರಾಘವೇಂದ್ರಸ್ವಾಮಿ ಮಠ, ಜಯನಗರ, ಬೆಳಿಗ್ಗೆ 9ರಿಂದ
ಘಟಿಕೋತ್ಸವ ಸಮಾರಂಭ: ಅತಿಥಿ: ಗುರುರಾಜ ಕರಜಗಿ, ಆಯೋಜನೆ ಹಾಗೂ ಸ್ಥಳ: ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜು, ಬೆಳಿಗ್ಗೆ 10.30
ಬಹಿರಂಗ ಸಭೆ: ಸಿಪಿಐ (ಎಂ) ಬೆಂಗಳೂರು ದಕ್ಷಿಣ 23ನೇ ಸಮ್ಮೇಳನ, ಭಾಷಣಕಾರರು: ಎಂ.ಎಸ್. ಮೀನಾಕ್ಷಿ ಸುಂದರಂ, ಎಸ್. ವರಲಕ್ಷ್ಮಿ, ಕೆ.ಎನ್. ಉಮೇಶ್, ಪ್ರಕಾಶ್ ಕೆ., ಅಧ್ಯಕ್ಷತೆ: ಟಿ. ಸುರೇಂದ್ರ ರಾವ್, ಆಯೋಜನೆ: ಸಿಪಿಐ (ಎಂ) ಬೆಂಗಳೂರು ದಕ್ಷಿಣ, ಸ್ಥಳ: ಸಿಂಧೂರ ಕಲ್ಯಾಣ ಮಂಟಪ, ಸಾರಕ್ಕಿ, ಮಧ್ಯಾಹ್ನ 3.30
ವರದಿ ಬಿಡುಗಡೆ: 'ಮತೀಯ ಗೂಂಡಾಗಿರಿಯಿಂದ ಮತ್ತು ದ್ವೇಷದ ಅಪರಾಧಗಳವರೆಗೆ: ಅಂಬೇಡ್ಕರ್ ಅವರ ಭ್ರಾತೃತ್ವದ ಕನಸಿನ ಮೇಲೆ ದಾಳಿ' ವರದಿ ಬಿಡುಗಡೆ, ಆಯೋಜನೆ: ಪಿಯುಸಿಎಲ್, ಎಐಪಿಎಫ್, ಎಐಎಲ್‌ಎಜೆ ಮತ್ತು ಗೌರಿ ಲಂಕೇಶ್ ನ್ಯೂಸ್, ಸ್ಥಳ: 1ನೇ ಕಟ್ಟಡ, ಶಾಸಕರ ಭವನ, ಸಂಜೆ 4.30
ಕನ್ನಡ ರಾಜ್ಯೋತ್ಸವ: ಅಧ್ಯಕ್ಷತೆ: ಮುನಿರತ್ನ, ಉದ್ಘಾಟನೆ: ಎಲ್.ಎನ್. ಮುಕುಂದರಾಜ್, ಆಯೋಜನೆ: ಸಾಕ್ಷಾತ್ಕಾರ ಚಾರಿಟಬಲ್ ಸೊಸೈಟಿ, ಸ್ಥಳ: ಶಿವಕುಮಾರಸ್ವಾಮೀಜಿ ಜ್ಞಾನಸೌಧ, ಕಲ್ಯಾಣನಗರ, ಸಂಜೆ 5
ಕಾರ್ತಿಕ ಗಮಕ ಸಂಭ್ರಮ: ಗಮಕ ವಾಚನ: ಗಂಗಮ್ಮ ಕೇಶವಮೂರ್ತಿ, ವ್ಯಾಖ್ಯಾನ: ಜಿ. ದಕ್ಷಿಣಾಮೂರ್ತಿ, ಆಯೋಜನೆ: ಡಾ. ಶಂಕರ ಗುಹಾ ದ್ವಾರಕನಾಥ್ ಬೆಳ್ಳೂರು, ಕರ್ನಾಟಕ ಗಮಕ ಕಲಾ ಪರಿಷತ್ತು, ಸ್ಥಳ: ಮಲ್ಲಿಕಾರ್ಜುನ ದೇವಸ್ಥಾನದ ಸಭಾಂಗಣ, ಸನ್ನಿಧಿ ರಸ್ತೆ, ಬಸವನಗುಡಿ, ಸಂಜೆ 6

ದಿನವಿಡೀ ಮಳೆ: ಮನೆಗಳ ಗೋಡೆ ಕುಸಿತ

ಒಂದನೇ ಪುಟದಿಂದ



ಪಾದರಾಯನಪುರದಲ್ಲಿ ಮಂಜುಗಡ್ಡೆ ತಯಾರಿಕಾ ಕಾರ್ಖಾನೆಯ ಗೋಡೆ ಕುಸಿದಿರುವುದು –ಪ್ರಜಾವಾಣಿ ಚಿತ್ರ

'ಕಾಡುಗೋಡಿ ಸಮೀಪದ ರೈಲ್ವೆ ಹಳಿ ಪಕ್ಕದ ಅಂಗಡಿಯೊಂದರ ಗೋಡೆ ಬೆಳಗಿನ ಜಾವ ಕುಸಿಯಿತು. ಕಟ್ಟಡ ಶಿಥಿಲಗೊಂಡಿದ್ದರಿಂದ ಅಂಗಡಿಯವರನ್ನು ಇತ್ತೀಚೆಗೆ ಖಾಲಿ ಮಾಡಿಸಲಾಗಿತ್ತು. 60 ವರ್ಷದ ವೃದ್ಧರೊಬ್ಬರು ಆ ಕಟ್ಟಡದಲ್ಲೇ ನಿದ್ರಿಸುತ್ತಿದ್ದರು. ಅವರನ್ನು ರಕ್ಷಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದರು.

ಶಂಕರಮಠ ವಾರ್ಡ್‌ನ ಕಾವೇರಿನಗರದ ಸಮೀಪವಿರುವ ಆಂಜನೇಯ ಗುಡ್ಡ ಪ್ರದೇಶದಲ್ಲಿ ಮನೆಯೊಂದರ ಗೋಡೆ ಧರೆಗುರುಳಿದೆ. ಮನೆಯಲ್ಲಿದ್ದವರು ಸುರಕ್ಷಿತರಾಗಿದ್ದಾರೆ. ಪಾದರಾಯನಪುರದ ಹರಿಶ್ಚಂದ್ರ ದೇವಸ್ಥಾನ ಸಮೀಪದ 3ನೇ ತಿರುವಿನಲ್ಲಿರುವ ಮಂಜುಗಡ್ಡೆ ತಯಾರಿಕಾ ಕಾರ್ಖಾನೆಯ ಗೋದಾಮಿನ ಭಾರಿ ಗೋಡೆಯೊಂದು ಮಳೆಯಿಂದಾಗಿ ಶಿಥಿಲಗೊಂಡು ಕುಸಿದಿದೆ. ಗೋಡೆ ಕುಸಿದಿದ್ದರಿಂದ ಸಮೀಪದಲ್ಲೇ ನಿಲ್ಲಿಸಿದ್ದ ಆಟೊಗಳು ಜಖಂಗೊಂಡಿವೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ನೆಲಕ್ಕುರುಳಿದ ಮರಗಳು: ಕ್ವೀನ್ಸ್ ರಸ್ತೆ, ಮಹಾವೀರ ರಸ್ತೆಯಲ್ಲಿ ವಾರ್ತಾ ಇಲಾಖೆ ಪ್ರಧಾನ ಕಚೇರಿಯ ಹತ್ತಿರ ಮರಗಳು ಉರುಳಿದ್ದು, ಕೆಲ ಕಾಲ ಸಂಚಾರ ದಟ್ಟಣೆ ಏರ್ಪಟ್ಟಿತ್ತು. ಥಣಿಸಂದ್ರ, ಕೆ.ಆರ್.ಪುರದಿಂದ ಟಿ.ಸಿ. ಪಾಳ್ಯಕ್ಕೆ ಸಾಗುವ ಮಾರ್ಗದಲ್ಲಿ ಭಾರಿ ಮರವೊಂದು ಉರುಳಿತು. ಬನಶಂಕರಿ ಎರಡನೇ ಹಂತದ ಬಡಾವಣೆಯಲ್ಲೂ ಮರ ನೆಲಕ್ಕುರುಳಿದೆ.

ರಸ್ತೆಯಲ್ಲೇ ನಿಂತ ನೀರು: ಎಚ್‌ಬಿಆರ್ ಲೇಔಟ್‌ನ 12ನೇ ಅಡ್ಡರಸ್ತೆ, ನ್ಯೂ ಬೈಯಪ್ಪನಹಳ್ಳಿಯ 9ನೇ ಅಡ್ಡರಸ್ತೆ, ಶಿವಾಜಿನಗರ ಮುಖ್ಯ ರಸ್ತೆ, ಕಲಾಸಿಪಾಳ್ಯ ಸಮೀಪದ ಬಸಪ್ಪ ವೃತ್ತ, ನಾಗವಾರ ಸಮೀಪದ ಕೆ.ಇ.ಬಿ.ವೃತ್ತ, ಕೇಂಬ್ರಿಡ್ಜ್ ವೃತ್ತ, ಟಿ.ಸಿ.ಎಂ.ರಾಯನ್ ರಸ್ತೆ, ಮಾರುತಿ ನಗರ 10ನೇ ತಿರುವು, ಕೋಡಿ ಚಿಕ್ಕನಹಳ್ಳಿಯ ಅನುಗ್ರಹ ಬಡಾವಣೆ, ಬಾಣಸವಾಡಿಯ ಸಿಎಂಆರ್ ಕಾಲೇಜು ಸಮೀಪದ ರಸ್ತೆಗಳಲ್ಲಿ ನೀರು ನಿಂತಿದ್ದರಿಂದ ವಾಹನ ಸವಾರರು ಸಮಸ್ಯೆ ಎದುರಿಸಿದರು. ಮೈಸೂರು ರಸ್ತೆ, ಕೆಂಗೇರಿ, ಹೊಸಕೆರೆಹಳ್ಳಿ, ಪ್ರಮೋದ ಲೇಔಟ್, ದೀಪಾಂಜಲಿ ನಗರ, ನಾಯಂಡಹಳ್ಳಿಯಲ್ಲೂ ಮಳೆ ನೀರು ರಸ್ತೆಯಲ್ಲೇ ಸಂಗ್ರಹವಾಗಿತ್ತು.

ವ್ಯಾಪಾರಿಗಳ ಪರದಾಟ: ದಿನವಿಡೀ ಸುರಿದ ಮಳೆಯಿಂದಾಗಿ ಕೃಷ್ಣರಾಜ ಮಾರುಕಟ್ಟೆ ಸೇರಿ ಪ್ರಮುಖ ಮಾರುಕಟ್ಟೆಗಳಲ್ಲಿನ ವರ್ತಕರು ಹಾಗೂ ನಗರದಾದ್ಯಂತ ಬೀದಿಬದಿ ವ್ಯಾಪಾರಿಗಳು ಸಂಕಷ್ಟ ಎದುರಿಸಿದರು.

'ಮಳೆಯಿಂದಾಗಿ ಜನರು ಮನೆಯಿಂದ ಹೊರಗೆ ಬಂದಿಲ್ಲ. ಹೀಗಾಗಿ ವ್ಯಾಪಾರವೂ ಆಗಿಲ್ಲ. ಮಾರುಕಟ್ಟೆಯಿಂದ ತಂದ ತರಕಾರಿ, ಸೊಪ್ಪು, ಹೂವು ಹಾಗೂ ಹಣ್ಣುಗಳು ಕೊಳೆತು ಹೋಗುತ್ತಿವೆ' ಎಂದು ಚಿಕ್ಕಪೇಟೆಯ ವ್ಯಾಪಾರಿಯೊಬ್ಬರು ಅಳಲು ತೋಡಿಕೊಂಡರು.

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಸುತ್ತಮುತ್ತ, ಹೆಸರಘಟ್ಟ, ಉತ್ತರಹಳ್ಳಿ, ಸಂಪಂಗಿರಾಮನಗರ, ಶಾಂತಿನಗರ, ಇಂದಿರಾನಗರ, ಕಾವಲ್ ಭೈರಸಂದ್ರ, ಬಾಣಸವಾಡಿ, ಎಲೆಕ್ಟ್ರಾನಿಕ್ಸ್ ಸಿಟಿ, ಶ್ರೀನಿವಾಸನಗರ, ಆಶ್ರಮ, ಚಾಮರಾಜಪೇಟೆ, ಪದ್ಮನಾಭನಗರ, ಹಲಸೂರು, ಜೀವನ್‌ಬಿಮಾ ನಗರ, ಮಹಾಲಕ್ಷ್ಮಿ ಲೇಔಟ್‌ನಲ್ಲೂ ಜೋರು ಮಳೆ ಸುರಿಯಿತು.

ಕಾವೇರಿನಗರ, ಕಾವಲ್‌ಭೈರಸಂದ್ರ, ಕಮ್ಮನಹಳ್ಳಿ ವಾರ್ಡ್ 28ರ ಕಾಳಮ್ಮ ರಸ್ತೆ, ಬಾಣಸವಾಡಿ ರೈಲ್ವೆ ನಿಲ್ದಾಣ, ಬ್ಯಾಟರಾಯನಪುರದ ಸರೋವರ ನಗರ ವಾರ್ಡ್ ಹಾಗೂ ಎನ್‌ಟಿಐ ಲೇಔಟ್‌ನ ವಾರ್ಡ್ 9ರಲ್ಲಿ ಹಲವು ಮನೆಗಳಿಗೆ ನೀರು ನುಗ್ಗಿತ್ತು. ನೀರು ಹೊರಹಾಕಲು ನಿವಾಸಿಗಳು ಹರಸಾಹಸಪಟ್ಟರು. ಹಾಗಾಗಿ ರಾತ್ರಿ ಇಡೀ ನಿದ್ರೆ ಇಲ್ಲದೆ ಕಳೆಯುವಂತಾಯಿತು.

37 ಮಿ.ಮೀ ಮಳೆ

ನಗರದಲ್ಲಿ ಗುರುವಾರ ರಾತ್ರಿ 8.30ರ ಹೊತ್ತಿಗೆ ಒಟ್ಟು 37 ಮಿ.ಮೀ ಮಳೆ ಸುರಿದಿದೆ. ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಇದೇ ಅವಧಿಯವರೆಗೆ ಒಟ್ಟು 39.4 ಮಿ.ಮೀ ಮಳೆ ದಾಖಲಾಗಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರಾತ್ರಿ 7.30ರ ವರೆಗೆ 20 ಮಿ.ಮೀ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಇಂದು ಯೆಲ್ಲೊ ಅಲರ್ಟ್

'ನಗರದಲ್ಲಿ ಶುಕ್ರವಾರವೂ ಮಳೆ ಮುಂದುವರಿಯಲಿದೆ. ಅಲ್ಲಲ್ಲಿ ಧಾರಾಕಾರ ಮಳೆಯಾಗುವ ಸಾಧ್ಯತೆ ಇದ್ದು ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ. ಶನಿವಾರದ ನಂತರ ಮಳೆ ಕಡಿಮೆಯಾಗಬಹುದು' ಎಂದು ಹವಾಮಾನ ಇಲಾಖೆ ಹೇಳಿದೆ.

ಕೆ.ಆರ್.ಪುರಕ್ಕೆ ಸೀಮಿತ ಬೊಮ್ಮಾಯಿ 'ಪ್ರೀತಿ'!

ಕಾಮಗಾರಿಗೆ ಅನುದಾನ: ಸಿಎಂ ನಡೆಗೆ ನಗರ ಶಾಸಕರ ಅಸಮಾಧಾನ

● ಮಂಜುನಾಥ ಹೆಬ್ಬಾರ್

ಬೆಂಗಳೂರು: ನವ ನಗರೋತ್ಥಾನ ಯೋಜನೆಯಡಿ ಕೆ.ಆರ್.ಪುರ ವಿಧಾನ ಸಭಾ ಕ್ಷೇತ್ರದಲ್ಲಿ ₹158.55 ಕೋಟಿ ಮೊತ್ತದ ಕಾಮಗಾರಿಗಳಿಗಷ್ಟೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅನುಮತಿ ನೀಡಿರುವುದು ನಗರದ ಇತರ ಕ್ಷೇತ್ರಗಳನ್ನು ಪ್ರತಿನಿಧಿಸುವ ಶಾಸಕರ ಅಸಮಾಧಾನಕ್ಕೆ ಕಾರಣವಾಗಿದೆ.

ನಗರದ 27 ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿ ಕಾಮಗಾರಿಗಳನ್ನು ರಾಜ್ಯ ಸರ್ಕಾರವು ನಗರೋತ್ಥಾನ ಯೋಜನೆಯಡಿ ಕೈಗೆತ್ತಿಕೊಳ್ಳುತ್ತಿದೆ. ವಿವಿಧ ವಿಧಾನಸಭಾ ಕ್ಷೇತ್ರಗಳ ₹1 ಸಾವಿರ ಕೋಟಿಗೂ ಅಧಿಕ ಮೊತ್ತದ ಕಾಮಗಾರಿಗಳಿಗೆ ಅಧಿಕಾರಯುಕ್ತ ಸಮಿತಿಯು ಕೆಲವು ತಿಂಗಳ ಹಿಂದೆ ಒಪ್ಪಿಗೆ ಕೊಟ್ಟಿತ್ತು. ಕಾಮಗಾರಿಗಳ ಅನುಮೋದನೆಗಾಗಿ ಮುಖ್ಯಮಂತ್ರಿ ಸಚಿವಾಲಯಕ್ಕೆ ಕಡತಗಳನ್ನು ಕಳುಹಿಸಲಾಗಿತ್ತು. ಆದರೆ, ಒಂದು ತಿಂಗಳಿಂದ ಈ ಕಡತಗಳು ವಿಲೇವಾರಿಯಾಗದೆ ಉಳಿದಿದ್ದವು. ಇದು ಬಿಜೆಪಿ ಶಾಸಕರ ಅತೃಪ್ತಿಗೆ ಕಾರಣವಾಗಿತ್ತು. ಉಪಚುನಾವಣೆ ಕಾರಣದಿಂದ ಕಡತ ವಿಲೇವಾರಿ ವಿಳಂಬವಾಗಿದೆ ಎಂದು ಮುಖ್ಯಮಂತ್ರಿ ಸಚಿವಾಲಯ ಸಮಜಾಯಿಷಿ ನೀಡಿತ್ತು.

ಈ ನಡುವೆ, ಕಾಮಗಾರಿಗಳಿಗೆ ಅನುಮೋದನೆ ನೀಡಲು ಮುಖ್ಯಮಂತ್ರಿಯವರು ಅಕ್ಟೋಬರ್ ತಿಂಗಳಿನಲ್ಲಿ ನಗರಾಭಿವೃದ್ಧಿ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಅ. 16ರಂದು ಸಭೆ ನಡೆಸಿದ್ದಾರೆ. ಸಭೆಯ ಮುಂದೆ 26 ಕಾರ್ಯಸೂಚಿಗಳಿದ್ದರೂ, ಕೆ.ಆರ್.ಪುರ ಕ್ಷೇತ್ರಕ್ಕೆ ಸಂಬಂಧಿಸಿದ ಕಾರ್ಯಸೂಚಿಗಳಿಗಷ್ಟೇ (06ರಿಂದ 22) ಮುಖ್ಯಮಂತ್ರಿಯವರು ಅನುಮೋದನೆ ನೀಡಿದ್ದಾರೆ.

> ಬಿಬಿಎಂಪಿ ವ್ಯಾಪ್ತಿಗೆ ಬರುವ 110 ಗ್ರಾಮಗಳ ಒಳಚರಂಡಿ ಮಾರ್ಗಗಳ ಸಮಸ್ಯೆ ನಿವಾರಿಸಲು ₹ 280 ಕೋಟಿ ಮೊತ್ತದ ಟೆಂಡರ್ ಕಾರ್ಯಕ್ಕೆ ಅನುಮತಿ ನೀಡಲಾಗಿದೆ.
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಇದಕ್ಕೆ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್ ಅವರ ಒತ್ತಡವೇ ಕಾರಣ ಎಂದು ಮೂಲಗಳು ಹೇಳಿವೆ.

ಮೈಸೂರು ರಸ್ತೆಯ ಗೋಪಾಲನ್ ಆರ್ಕೇಡ್ ಬಳಿ ರಾಜಕಾಲುವೆ ಮೇಲೆ ₹71.44 ಕೋಟಿ ವೆಚ್ಚದಲ್ಲಿ ಸೇತುವೆ ನಿರ್ಮಿಸುವ ಕಾಮಗಾರಿಗೆ ಹಾಗೂ ಹೆಬ್ಬಾಳ ಕ್ಷೇತ್ರದ ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಬುಡಕಟ್ಟು ಉಪ ಯೋಜನೆ (ಎಸ್‌ಸಿಪಿ–ಟಿಎಸ್‌ಪಿ) ಕಾಮಗಾರಿಗಳಿಗೂ ಮಂಜೂರಾತಿ ನೀಡಿಲ್ಲ. ಬಿಜೆಪಿ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳ ಹಲವು ಯೋಜನೆಗಳಿಗೂ ಅಂಕಿತ ಹಾಕಿಲ್ಲ. ಸಕಾರಣ ನೀಡದೆ 26 ಕಡತಗಳನ್ನು (46 ಟೆಂಡರ್) ಪಾಲಿಕೆಗೆ ಮುಖ್ಯಮಂತ್ರಿ ಸಚಿವಾಲಯ ವಾಪಸ್ ಕಳುಹಿಸಿದೆ. ಇದರಲ್ಲಿ ರಸ್ತೆ ಮೂಲಸೌಕರ್ಯ, ರಾಜಕಾಲುವೆ ಹಾಗೂ ಕಸ ವಿಲೇವಾರಿಗೆ ಸಂಬಂಧಿಸಿದ ಕಡತಗಳು ಸೇರಿವೆ.

'ಬಿಬಿಎಂಪಿಗೆ ಸೇರಿದ 110 ಹಳ್ಳಿಗಳ ಅಭಿವೃದ್ಧಿ ಯೋಜನೆಯ ಕಾಮಗಾರಿಗಳಿಗಷ್ಟೇ ಮುಖ್ಯಮಂತ್ರಿ ಒಪ್ಪಿಗೆ ನೀಡಿದ್ದಾರೆ. ಕ್ಷೇತ್ರಗಳ ವಿಚಾರದಲ್ಲಿ ತಾರತಮ್ಯ ಮಾಡಿಲ್ಲ' ಎಂದು ಮುಖ್ಯಮಂತ್ರಿ ಸಚಿವಾಲಯದ ಮೂಲಗಳು ಸ್ಪಷ್ಟಪಡಿಸಿವೆ.

'ನನ್ನ ಕ್ಷೇತ್ರದಲ್ಲಿ ₹58 ಕೋಟಿ ವೆಚ್ಚದಲ್ಲಿ ಮೇಲ್ಸೇತುವೆ ನಿರ್ಮಾಣಕ್ಕೆ ಅನುಮೋದನೆ ಕೋರಿದ್ದೆ. ಅದಕ್ಕೆ ಒಪ್ಪಿಗೆ ಸಿಕ್ಕಿಲ್ಲ. ಈ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜತೆಗೆ ಚರ್ಚೆ ನಡೆಸಿದ್ದು, ನಾಲ್ಕೈದು ದಿನಗಳಲ್ಲಿ ಅನುಮೋದನೆ ಸಿಗಲಿದೆ ಎಂದೂ ಭರವಸೆ ನೀಡಿದ್ದಾರೆ. ಮುಖ್ಯಮಂತ್ರಿಯವರು ಅನುದಾನ ಹಂಚಿಕೆಯಲ್ಲಿ ಯಾವುದೇ ತಾರತಮ್ಯ ಮಾಡಿಲ್ಲ' ಎಂದು ಮಹಾಲಕ್ಷ್ಮಿ ಲೇಔಟ್ ಕ್ಷೇತ್ರದ ಶಾಸಕರಾಗಿರುವ ಅಬಕಾರಿ ಸಚಿವ ಕೆ.ಗೋಪಾಲಯ್ಯ ಪ್ರತಿಕ್ರಿಯಿಸಿದರು.

'ಒಂದೇ ಕ್ಷೇತ್ರದ ಹಲವು ಯೋಜನೆಗಳಿಗೆ ಅನುಮೋದನೆ ನೀಡುವ ಅಗತ್ಯ ಏನಿತ್ತು. ಬಿಬಿಎಂಪಿಗೆ ಸೇರಿದ 110 ಹಳ್ಳಿಗಳು ಬೇರೆ ಕ್ಷೇತ್ರಗಳಲ್ಲೂ ಇವೆ. ಅವುಗಳತ್ತವೂ ಗಮನ ಹರಿಸಬೇಕಿತ್ತು. ಒತ್ತಡಕ್ಕೆ ಮಣಿದು ಒಂದೇ ಕ್ಷೇತ್ರಕ್ಕೆ ಮುಖ್ಯಮಂತ್ರಿಯವರು ಅನುದಾನ ಕೊಟ್ಟಿದ್ದಾರೆ' ಎಂದು ಬಿಜೆಪಿ ಶಾಸಕರೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

'ಕ್ಷೇತ್ರಕ್ಕೆ ಬಂದು ನೋಡಲಿ'



ಬಿಜೆಪಿ ಸರ್ಕಾರ ಬಂದ ಕೂಡಲೇ ಕಾಂಗ್ರೆಸ್, ಜೆಡಿಎಸ್ ಶಾಸಕರ ಕ್ಷೇತ್ರಗಳ ಬಹುತೇಕ ಅನುದಾನವನ್ನು ಕಿತ್ತುಕೊಂಡು ಅನ್ಯಾಯ ಮಾಡಿತು. ಈಗ ಅಳಿದುಳಿದ ಅಲ್ಪ ಅನುದಾನ ಕೊಡುವುದಕ್ಕೂ ಸರ್ಕಾರ ಸತಾಯಿಸುತ್ತಿದೆ. ಕೆಲವೇ ಶಾಸಕರ ಕ್ಷೇತ್ರಗಳಿಗಷ್ಟೇ ಸಾವಿರಾರು ಕೋಟಿ ಅನುದಾನ ಸಿಗುತ್ತಿದೆ. ಕೆ.ಆರ್.ಪುರ ಕ್ಷೇತ್ರದಲ್ಲಿ ಮಾತ್ರ ಸಮಸ್ಯೆ ಇರುವುದಾ? ಉಳಿದೆಲ್ಲ ಕ್ಷೇತ್ರಗಳಲ್ಲಿ ಸಮಗ್ರ ಅಭಿವೃದ್ಧಿ ಆಗಿದೆಯೇ? ಮುಖ್ಯಮಂತ್ರಿಯವರು ಒಂದು ಸಲ ನಮ್ಮ ಕ್ಷೇತ್ರಗಳಲ್ಲೂ ಸುತ್ತಾಡಲಿ. ಅವರಿಗೆ ಸಮಸ್ಯೆಯ ಗಂಭೀರತೆ ಅರಿವಾಗುತ್ತದೆ.

ಅಖಂಡ ಶ್ರೀನಿವಾಸಮೂರ್ತಿ
ಕಾಂಗ್ರೆಸ್ ಶಾಸಕ (ಪುಲಿಕೇಶಿನಗರ ಕ್ಷೇತ್ರ)

'ವಿಧಾನಸೌಧದಲ್ಲಿ ಧರಣಿ ಕೂರುವೆ'



ನಿರಂತರ ಸುರಿದ ಮಳೆಯಿಂದಾಗಿ ಕ್ಷೇತ್ರದ ರಾಜಕಾಲುವೆಗಳು ಉಕ್ಕಿ ಹರಿದು ಮನೆಗಳಿಗೆ ನೀರು ನುಗ್ಗಿದೆ. ವಾಹನಗಳು ಸಂಚರಿಸಲಾಗದ ಸ್ಥಿತಿಯಲ್ಲಿ ರಸ್ತೆಗಳಿವೆ. ಸರ್ಕಾರ ಎರಡು ವರ್ಷಗಳಿಂದ ಅನುದಾನ ನೀಡದ ಕಾರಣ ಯಾವುದೇ ಕಾಮಗಾರಿ ಕೈಗೆತ್ತಿಕೊಳ್ಳಲು ಸಾಧ್ಯವಾಗಿಲ್ಲ. ಅನುದಾನ ಕೊಡಿ ಎಂದು ಗೋಗರೆದರೂ ಮುಖ್ಯಮಂತ್ರಿಯವರು ಸ್ಪಂದಿಸಿಲ್ಲ. ಇದೀಗ, ಒಂದು ಕ್ಷೇತ್ರಕ್ಕಷ್ಟೇ ಅನುದಾನ ಮಂಜೂರು ಮಾಡಿದ್ದಾರೆ. ವಿಧಾನಸೌಧದ ಎದುರು ಧರಣಿ ಕುಳಿತು ಅನುದಾನಕ್ಕಾಗಿ ಹೋರಾಟ ನಡೆಸುತ್ತೇನೆ.

ಆರ್.ಮಂಜುನಾಥ್, ಜೆಡಿಎಸ್ ಶಾಸಕ (ದಾಸರಹಳ್ಳಿ ಕ್ಷೇತ್ರ)

ಲಿಂಗಾಯತ ಸ್ವತಂತ್ರ ಧರ್ಮದ ಹೋರಾಟ ನಿಂತಿಲ್ಲ: ಜಾಮದಾರ

ಬೆಳಗಾವಿ: 'ಲಿಂಗಾಯತ ಸ್ವತಂತ್ರ ಧರ್ಮದ ಮಾನ್ಯತೆಗಾಗಿ ಹೋರಾಟ ನಿಂತಿಲ್ಲ. ಕೋವಿಡ್ ಕಾರಣದಿಂದಾಗಿ ಸಕ್ರಿಯವಾಗಿ ಕೆಲಸ ಮಾಡಲಾಗಿರಲಿಲ್ಲ. ಇನ್ಮುಂದೆ ಚಟುವಟಿಕೆ ತೀವ್ರಗೊಳಿಸುತ್ತೇವೆ' ಎಂದು ಜಾಗತಿಕ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಸ್.ಎಂ. ಜಾಮದಾರ ತಿಳಿಸಿದರು.

ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಮಹಾಸಭಾ ಯಾವುದೇ ಪಕ್ಷದ ಪರ ಅಥವಾ ವಿರುದ್ಧವಾಗಿ ಇಲ್ಲ. ಹೋರಾಟವನ್ನು ಒಂದು ಪಕ್ಷದ ಹೋರಾಟವೆಂದು ಬಿಂಬಿಸಿದ್ದು ತಪ್ಪು. ಅಂತಹ ಕೆಲವು ರಾಜಕಾರಣಿಗಳನ್ನು ಮಹಾಸಭಾದಿಂದ ದೂರ ಇಟ್ಟಿದ್ದೇವೆ' ಎಂದರು.

ಕೇಂದ್ರಕಚೇರಿ ಬೆಳಗಾವಿಗೆ ಸ್ಥಳಾಂತರ: 'ಜಾಗತಿಕ ಲಿಂಗಾಯತ ಮಹಾಸಭಾ ಕೇಂದ್ರ ಕಚೇರಿಯನ್ನು ಬೆಂಗಳೂರಿನಿಂದ ಬೆಳಗಾವಿಗೆ ಸ್ಥಳಾಂತರಿಸಲಾಗಿದೆ. ನೂತನ ಕಚೇರಿಯ ಉದ್ಘಾಟನಾ ಸಮಾರಂಭ ನ.20ರಂದು ಸಂಜೆ 4ಕ್ಕೆ ಹಮ್ಮಿಕೊಳ್ಳಲಾಗಿದೆ. ನ.21ರಂದು ಬೆಳಿಗ್ಗೆ 11ಕ್ಕೆ 3ನೇ ಸರ್ವ ಸಾಮಾನ್ಯ ಸಭೆ ನಡೆಯಲಿದ್ದು, ಮುಂದಿನ ಹೋರಾಟದ ಬಗ್ಗೆ ಚರ್ಚಿಸಿ ನಿರ್ಧರಿಸಲಾಗುವುದು' ಎಂದು ತಿಳಿಸಿದರು.

'ಜೆಡಿಎಸ್ ಶಾಸಕರ ಹೈಜಾಕ್ ಮಾಡುತ್ತಿರುವ ಮಾಜಿ ಸಿ.ಎಂ'

ಬೆಂಗಳೂರು: 'ಮುಂದಿನ ವಿಧಾನಸಭೆ ಚುನಾವಣೆಯೊಳಗೆ ನಮ್ಮ ಪಕ್ಷ ಮುಗಿಸಲೇಬೇಕೆಂಬ ದುಷ್ಟ ಪ್ರಯತ್ನ ನಡೆಸುತ್ತಿರುವ ಮಾಜಿ ಮುಖ್ಯಮಂತ್ರಿಯೊಬ್ಬರು ನಮ್ಮ ಶಾಸಕರು, ಮುಖಂಡರನ್ನು ಹೈಜಾಕ್ ಮಾಡಲು ಬ್ರೈನ್ ವಾಶ್ ಮಾಡುತ್ತಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಆರೋಪ ಮಾಡಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮತ್ತೊಮ್ಮೆ ಮುಖ್ಯಮಂತ್ರಿಯಾಗಬೇಕೆಂಬ ಕನಸು ಕಾಣುತ್ತಿರುವವರೊಬ್ಬರು ನಮ್ಮ ಪಕ್ಷದ ನಾಯಕರಿಗೆ ಪದೇ ಪದೇ ಕರೆ ಮಾಡಿ ಬ್ರೈನ್ ವಾಶ್ ಮಾಡುತ್ತಿದ್ದಾರೆ. ಒಬ್ಬರಿಗೆ 11 ಬಾರಿ ಕರೆ ಮಾಡಿದ್ದ ಅವರು, ಏನು ತೀರ್ಮಾನ ಮಾಡಿದ್ದೀರಿ ಎಂದು ಕೇಳುತ್ತಿದ್ದಾರೆ. ದೂರವಾಣಿ ಕರೆಯ ಪಟ್ಟಿ ಹಾಗೂ ಕಾಲ್ ರೆಕಾರ್ಡ್ ಎರಡೂ ತಮ್ಮ ಬಳಿ ಇವೆ' ಎಂದರು.

'ಹಳೆ ಮೈಸೂರು ಭಾಗದ ಕ್ಷೇತ್ರಗಳಲ್ಲಿ ತಮ್ಮದೇ ಬಲ ಇಟ್ಟುಕೊಂಡಿರುವ ಶಾಸಕರು ಹಾಗೂ 2018ರ ಚುನಾವಣೆಯಲ್ಲಿ ಕಡಿಮೆ ಅಂತರದಲ್ಲಿ ಸೋತಿದ್ದ ಅಭ್ಯರ್ಥಿಗಳನ್ನು ಅವರು ಗುರಿಯಾಗಿಸಿಕೊಂಡಿದ್ದಾರೆ' ಎಂದು ಹೇಳಿದರು.

ಸಾರ್ವಜನಿಕ ಹಿತಾಸಕ್ತಿ ಅರ್ಜಿ • ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಸಿದ್ಧಪಡಿಸಲಾದ ವರದಿ

ಜಾತಿಗಣತಿ: ಏಕಕಾಲಕ್ಕೆ ಹೈಕೋರ್ಟ್ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಜಿ ಮುಖ್ಯಮಂತ್ರಿ ಯನ್ನು ಅನುಷ್ಠಾನಗೊಳಿಸಲು ನಿರ್ದೇಶಿಸಬೇಕು' ಎಂದು ಕೋರಲಾದ ಮತ್ತು 'ಈ ಜಾತಿಗಣತಿ ವರದಿ ಅಸಾಂವಿಧಾನಿಕ' ಎಂದು ಆಕ್ಷೇಪಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ಮಧ್ಯಂತರ ಅರ್ಜಿಗಳನ್ನು, ಹೈಕೋರ್ಟ್ ಏಕಕಾಲಕ್ಕೆ ವಿಚಾರಣೆಗೆ ನಿಗದಿಪಡಿಸಿದೆ.

'ವರದಿ ಅನುಷ್ಠಾನ ಕೋರಿ ಮುಖ್ಯಮಂತ್ರಿ ಚಂದ್ರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ನಮ್ಮನ್ನು ಪ್ರತಿವಾದಿಗಳನ್ನಾಗಿ ಸೇರ್ಪಡೆ ಮಾಡಿಕೊಳ್ಳಬೇಕು' ಎಂದು ಅಖಿಲ ಭಾರತ ವೀರಶೈವಮಹಾಸಭಾದ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯ ಬಿ.ಎಸ್.ನಟರಾಜ್ ಹಾಗೂ ಒಕ್ಕಲಿಗರ ಮುಖಂಡ ಹಾಸನದ ಉದ್ಯಮಿ ಕೃಷ್ಣೇಗೌಡ ಸಲ್ಲಿಸಿರುವ ಮಧ್ಯಂತರ ಅರ್ಜಿಗಳ ವಿಚಾರಣೆ ಗುರುವಾರ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ಪೀಠದ ಮುಂದೆ ನಿಗದಿಯಾಗಿತ್ತು.



ಏತನ್ಮಧ್ಯೆ, 2015ರಲ್ಲಿ ಜಾತಿ ಗಣತಿಯನ್ನು ಪ್ರಶ್ನಿಸಿ ಬೀದರ್‌ನ ಶಿವರಾಜ ಕಣಶೆಟ್ಟಿ ಹಾಗೂ ಇತರರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೂ ಇದೇ ಪ್ರಕರಣಕ್ಕೆ ಸಂಬಂಧಿಸಿದ್ದಾಗಿದೆ ಎಂಬ ಕಾರಣದಿಂದ ಎಲ್ಲ ಅರ್ಜಿಗಳನ್ನೂ ಒಟ್ಟಿಗೇ ವಿಚಾರಣೆ ನಡೆಸುವುದಾಗಿ ನ್ಯಾಯಪೀಠ ತಿಳಿಸಿತು.

ಮಧ್ಯಂತರ ಅರ್ಜಿದಾರರ ಪರ ಹಾಜರಾಗಿದ್ದ ಹಿರಿಯ ವಕೀಲ ಗಂಗಾಧರ ಗುರುಮಠ ಹಾಗೂ ಅಭಿಷೇಕ ಕುಮಾರ್ ಅವರನ್ನು ನ್ಯಾಯಪೀಠ, 'ಆಯೋಗದ ಪರ ಯಾರು ಹಾಜರಾಗುತ್ತಿದ್ದಾರೆ' ಎಂದು ಪ್ರಶ್ನಿಸಿತು. ಇದಕ್ಕೆ ಉತ್ತರಿಸಿದ ವಕೀಲರು, 'ವಿಜಯಸಿಂಹ ರೆಡ್ಡಿ ಹಾಜರಾಗುತ್ತಿದ್ದಾರೆ' ಎಂದರು.

ಆಕ್ಷೇಪಗಳೇನು?: 'ಸಂವಿಧಾನದ 7ನೇ ಪರಿಚ್ಛೇದದ ಸೂಚಿತಪಟ್ಟಿ 1ರ 69ನೇ ಪ್ರವೇಶದ ಅನುಸಾರ ರಾಜ್ಯ ಸರ್ಕಾರಕ್ಕೆ ಜಾತಿ ಗಣತಿ ನಡೆಸುವ ಅಧಿಕಾರವಿಲ್ಲ. ಇದರ ಅಧಿಕಾರ ಏನಿದ್ದರೂ ಕೇಂದ್ರ ವ್ಯಾಪ್ತಿಗೆ ಒಳಪಟ್ಟಿದೆ' ಎಂಬುದು ಮಧ್ಯಂತರ ಅರ್ಜಿದಾರರ ಪ್ರಮುಖ ಆಕ್ಷೇಪ.

ಕೇಂದ್ರದ ಪ್ರಮಾಣ ಪತ್ರದಲ್ಲೇನಿದೆ?

'ಜಾತಿಗಣತಿಯ ಸಂವಿಧಾನ ಬದ್ಧತೆ ಪ್ರಶ್ನಿಸಿ ಶಿವರಾಜ ಕಣಶೆಟ್ಟಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು 2016ರ ಆಗಸ್ಟ್‌ನಲ್ಲಿ ಹೈಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿದೆ.

'ರಾಜ್ಯ ಸರ್ಕಾರವು ಜಾತಿ ಜನಗಣತಿ ನಡೆಸಿದರೆ ಅದು ಸಂವಿಧಾನದ 245 ಮತ್ತು 246ನೇ ಪರಿಚ್ಛೇದದ ಸ್ಪಷ್ಟ ಉಲ್ಲಂಘನೆಯಾಗುತ್ತದೆ ಮತ್ತು ಅಧಿಕಾರ ದುರುಪಯೋಗ ಮಾಡಿದಂತೆಯೂ ಆಗುತ್ತದೆ. ಈ ಕುರಿತು ಅರ್ಜಿದಾರರ ವಾದ ಸರಿಯಿದೆ. ಹೀಗಾಗಿ ಅರ್ಜಿಯನ್ನು ಪುರಸ್ಕರಿಸಬಹುದು' ಎಂದು ವಿವರಿಸಿದೆ.

'ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು 2015ರ ಏಪ್ರಿಲ್ 11ರಿಂದ ಜಾತಿ ಜನ ಗಣತಿ ಆರಂಭಿಸಿತ್ತು. 'ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸಿರುವುದು ಜಾತಿ ಜನಗಣತಿ ಅಲ್ಲ. ಬದಲಿಗೆ, ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ' ಎಂದು ಕೋರ್ಟ್‌ಗೆ ತಿಳಿಸಿತ್ತು.

ಪೊಲೀಸ್ ಹುದ್ದೆ ಭರ್ತಿ ವಿಳಂಬ: ತರಾಟೆ

ಬೆಂಗಳೂರು: 'ರಾಜ್ಯದಲ್ಲಿ ಖಾಲಿಯಿರುವ ಸಬ್ ಇನ್‌ಸ್ಪೆಕ್ಟರ್ ಮತ್ತು ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳ ಭರ್ತಿ ಪ್ರಕ್ರಿಯೆ ಪೂರ್ಣಗೊಳಿಸಲು 2022ರ ಜುಲೈ ಅಂತ್ಯದವರೆಗೆ ಸಮಯಾವಕಾಶ ನೀಡಬೇಕು' ಎಂಬ ಸರ್ಕಾರದ ಕೋರಿಕೆಯನ್ನು ಖಡಾಖಂಡಿತವಾಗಿ ನಿರಾಕರಿಸಿರುವ ಹೈಕೋರ್ಟ್, 'ಇದೇನಾ ಸರ್ಕಾರದ ಕಾರ್ಯ ವೈಖರಿ' ಎಂದು ತರಾಟೆಗೆ ತೆಗೆದುಕೊಂಡಿದೆ.

ಈ ಕುರಿತ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಗುರುವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ, 'ಕನಿಷ್ಠ ಕಾಲಮಿತಿಯೊಳಗೆ ಈ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಒಂದು ವಾರದಲ್ಲಿ ಸ್ಪಷ್ಟಪಡಿಸಿ' ಎಂದು ಕಟ್ಟುನಿಟ್ಟಿನ ತಾಕೀತು ಮಾಡಿದೆ.

ವಿಚಾರಣೆ ವೇಳೆ ಸರ್ಕಾರಿ ವಕೀಲರು ಪ್ರಮಾಣ ಪತ್ರ ಸಲ್ಲಿಸಿ, 'ಒಟ್ಟು 1,142 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಮತ್ತು 4,460 ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳು ಖಾಲಿಯಿವೆ. 2022ರ ಜುಲೈ ಅಂತ್ಯದೊಳಗೆ ಇವುಗಳನ್ನು ಭರ್ತಿ ಮಾಡಲಾಗುವುದು' ಎಂದರು.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ನ್ಯಾಯಪೀಠ, 'ಈ ಹುದ್ದೆಗಳ ಭರ್ತಿ ಪ್ರಕ್ರಿಯೆ ಪೂರ್ಣಗೊಳಿಸಲು ಇನ್ನೂ ಎಂಟು ತಿಂಗಳು ಏಕೆ' ಎಂದು ಖಾರವಾಗಿ ಪ್ರಶ್ನಿಸಿತು.

ಸರ್ಕಾರಿ ವಕೀಲರು, 'ಒಟ್ಟಾರೆ 16 ಸಾವಿರ ಹುದ್ದೆ ಖಾಲಿಯಿದ್ದವು. ಇವುಗಳಲ್ಲಿ ಭಾಗಶಃ ಭರ್ತಿ ಮಾಡಲಾಗಿದೆ. ಕೋವಿಡ್ ಪರಿಸ್ಥಿತಿ ಎದುರಾದ ಕಾರಣ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ವಿಳಂಬವಾಗಿದೆ' ಎಂದು ಸಮಜಾಯಿಷಿ ನೀಡಲು ಮುಂದಾದರು.

ಆದರೆ, ಇದನ್ನು ಒಪ್ಪದ ನ್ಯಾಯಪೀಠ, '2019ರಲ್ಲಿಯೇ ಮೂರು ತಿಂಗಳ ಕಾಲಾವಕಾಶ ಪಡೆದಿದ್ದಿರಿ. ಈಗಾಗಲೇ ಎರಡು ವರ್ಷ ತೆಗೆದುಕೊಳ್ಳಲಾಗಿದೆ. ಈಗಲೂ ಎಂಟು ತಿಂಗಳ ಕಾಲಾವಕಾಶ ಬೇಕು ಎಂದು ಕೇಳುತ್ತಿದ್ದೀರಿ. ಈ ಬಗ್ಗೆ ಒಂದು ವಾರದಲ್ಲಿ ಸ್ಪಷ್ಟಪಡಿಸಿ' ಎಂದು ವಿಚಾರಣೆ ಮುಂದೂಡಿದೆ.

ಸುದ್ದಿ 2 ನಿಮಿಷ

ಕಸಾಪ ಮೇಲೆ ಬಿಜೆಪಿ ಆಕ್ರಮಣ: ಆಕ್ಷೇಪ

ಬೆಂಗಳೂರು: ಇದುವರೆಗೂ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಗಳಲ್ಲಿ ಯಾವುದೇ ರಾಜಕೀಯ ಪಕ್ಷವು ನೇರ ಹಸ್ತಕ್ಷೇಪ ಮಾಡಿರಲಿಲ್ಲ. ಈ ಬಾರಿ ಸಾಂಸ್ಕೃತಿಕ ಕ್ಷೇತ್ರದ ಮೇಲೆ ಆಕ್ರಮಣ ಮಾಡಿರುವ ಬಿಜೆಪಿ ಎಲ್ಲವನ್ನೂ ಹಾಳುಗೆಡವಲು ಹೊರಟಿದೆ' ಎಂದು ಸಾಹಿತಿಗಳು, ಲೇಖಕರು ಆಕ್ಷೇಪಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಪ್ರೊ.ಎಸ್.ಜಿ.ಸಿದ್ದರಾಮಯ್ಯ, ಡಾ.ವಿಜಯಾ, ಡಾ.ವಸುಂಧರಾ ಭೂಪತಿ, ಡಾ.ಕೆ.ಷರೀಫಾ, ನಾ.ದಿವಾಕರ, ಡಾ.ಬಂಜಗೆರೆ ಜಯಪ್ರಕಾಶ್, ವಿಮಲಾ.ಕೆ.ಎಸ್., ನೀಲಾ. ಕೆ., ಟಿ.ಸುರೇಂದ್ರ ರಾವ್ ಮೊದಲಾದವರು 'ರಾಜಕೀಯ ಪಕ್ಷಗಳ ನೇರ ಭಾಗವಹಿಸುವಿಕೆಯನ್ನು ವಿರೋಧಿಸುತ್ತೇವೆ' ಎಂದು ಮನವಿ ಮಾಡಿದ್ದಾರೆ.

'ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಿಗೆ ಸಮಾನ ಅವಕಾಶದೊಂದಿಗೆ ಸಮಸ್ತ ಜನ ಸಮುದಾಯಗಳನ್ನು ಒಳಗೊಂಡು ಕೆಲಸ ಮಾಡುತ್ತಿರುವ ಕಸಾಪ, ಸಮಾಜಮುಖಿ ಕನ್ನಡ ಸಾಹಿತ್ಯ ಪರಂಪರೆಯನ್ನು ಪೋಷಿಸುತ್ತ ಬಂದಿದೆ. ಇಂತಹ ಹೊತ್ತಿನಲ್ಲಿ ಇದೀಗ ಚುನಾವಣೆಯಲ್ಲಿ ಆಡಳಿತಾರೂಢ ರಾಜಕೀಯ ಪಕ್ಷದ ನೇರ ಪ್ರವೇಶ ದಿಗ್ಭ್ರಮೆ ಹುಟ್ಟಿಸಿದೆ ಅಷ್ಟೇ ಅಲ್ಲ, ಒಂದು ದುಷ್ಟ ಬೆಳವಣಿಗೆಯಾಗಿದೆ' ಎಂದವರು ಹೇಳಿದ್ದಾರೆ.

ಮಹೇಶ್ ಜೋಶಿಯವರು ಒಬ್ಬ ಸಾಂಸ್ಕೃತಿಕ ಮನಸಿನ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಭಾಗವಹಿಸಿದ್ದರೆ ಯಾರೂ ವಿರೋಧಿಸುತ್ತಿರಲಿಲ್ಲ. ಚುನಾವಣೆಯ ಪ್ರಾರಂಭದಲ್ಲಿ ಅವರು ಹಾಗೆಯೇ ನಡೆದುಕೊಂಡಿದ್ದರಿಂದ ಯಾರೂ ಚಕಾರವೆತ್ತಿರಲಿಲ್ಲ. ಆದರೆ, ಈಗ ಸಾಂಸ್ಕೃತಿಕ ಸ್ವಾಯತ್ತ ಸಂಸ್ಥೆಯಾದ ಕಸಾಪಕ್ಕೆ ಆಳುವ ಪಕ್ಷದ ಬೆಂಬಲವನ್ನು ನೇರವಾಗಿ ಘೋಷಿಸಿಕೊಂಡು ಚುನಾವಣೆಗೆ ಹೊರಟಿರುವುದು ಖಂಡನೀಯ. ಕಸಾಪದ ಮೂಲ ಆಶಯಕ್ಕೆ ವಿರುದ್ಧವಾಗಿ ನಡೆ ಇಡಲು ಹೊರಟಿರುವುದರಿಂದ ಅವರು ಅಧ್ಯಕ್ಷ ಪದವಿಗೆ ಸ್ಪರ್ಧಿಸಲು ನೈತಿಕ ಅಧಿಕಾರವನ್ನು ಕಳೆದುಕೊಂಡಿದ್ದಾರೆ' ಎಂದು ಅವರೆಲ್ಲ ಪ್ರತಿಪಾದಿಸಿದ್ದಾರೆ.

'ಮಹೇಶ್ ಜೋಶಿ ಅವರು ಕೋಮುವಾದಿ ಪಕ್ಷ, ಸಂಘಟನೆಗಳ ನೇರ ಬೆಂಬಲ ಪಡೆಯಲು ಮುಂದಾಗಿರುವುದನ್ನು ಖಂಡಿಸುವುದು ಅಲ್ಲದೆ, ಅವರಿಗೆ ಚುನಾವಣೆಯಲ್ಲಿ ಮತ ನೀಡದಿರುವಂತೆ ಎಲ್ಲ ಸಾಹಿತ್ಯಕ ಮನಸುಗಳಲ್ಲಿ ವಿನಂತಿಸಿಕೊಳ್ಳುತ್ತೇವೆ' ಎಂದು ಅವರು ತಿಳಿಸಿದ್ದಾರೆ.

ತಲೆಮರೆಸಿಕೊಂಡಿದ್ದ ಶಂಕಿತ ಉಗ್ರ ಸೆರೆ

ಬೆಂಗಳೂರು: ಶಂಕಿತ ಉಗ್ರ ಜುಹೇಬ್ ಹಮೀದ್ ಶಕೀಲ್ ಮನ್ನಾ (32) ಎಂಬಾತನನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಅಧಿಕಾರಿಗಳು ಬಂಧಿಸಿದ್ದಾರೆ.

ದಕ್ಷಿಣ ಭಾರತದ ಯುವಕರನ್ನು ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರ ಸಂಘಟನೆಗೆ ಸೇರಿಸಿ ಭಯೋತ್ಪಾದನಾ ಕೃತ್ಯ ಎಸಗಲು ಸಂಚು ರೂಪಿಸಿದ್ದ ಪ್ರಕರಣದಲ್ಲಿ ಈತ ತಲೆಮರೆಸಿಕೊಂಡಿದ್ದ. ಹೋದ ತಿಂಗಳು ಮೊಹಮ್ಮದ್ ತೌಕೀರ್ (33) ಎಂಬಾತನನ್ನು ಬಂಧಿಸಿದ್ದ ಅಧಿಕಾರಿಗಳು ಇದೀಗ ಜುಹೇಬ್‌ನನ್ನೂ ವಶಕ್ಕೆ ಪಡೆದಿದ್ದಾರೆ. 'ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ ಜುಹೇಬ್, ನಗರದ ಮುಸ್ಲಿಂ ಯುವಕರನ್ನು ತರಬೇತಿಗಾಗಿ ಸಿರಿಯಾಗೆ ಕಳುಹಿಸಲು ಆರ್ಥಿಕ ನೆರವು ನೀಡುತ್ತಿದ್ದ. ಇದಕ್ಕಾಗಿ ಈಗಾಗಲೇ ಬಂಧಿತರಾಗಿರುವ ನಾಲ್ವರು ಶಂಕಿತ ಉಗ್ರರ ಜೊತೆಗೂಡಿ 'ಹಿಜ್ಬ್ ಉತ್ ತಹ್ರೀರ್' ಸಂಘಟನೆ ಕಟ್ಟಿಕೊಂಡಿದ್ದ. ಈ ಗುಂಪಿನವರು 'ಕುರಾನ್ ಸರ್ಕಲ್' ಹೆಸರಿನಲ್ಲಿ ಭಯೋತ್ಪಾದನಾ ಚಟುವಟಿಕೆ ನಡೆಸುತ್ತಿದ್ದರು. ಸಿರಿಯಾದ ಐಸಿಸ್ ಭಯೋತ್ಪಾದನಾ ಸಂಘಟನೆಯ ನಾಯಕರ ಜೊತೆಗೂ ಸಂಪರ್ಕ ಹೊಂದಿದ್ದರು. ಅವರಿಂದಲೂ ಹಣಕಾಸಿನ ನೆರವು ಪಡೆಯುತ್ತಿದ್ದರು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ನಗರದ ಮುಸ್ಲಿಂ ಯುವಕರನ್ನು ಸಂಪರ್ಕಿಸುತ್ತಿದ್ದ ಇವರು, ಧರ್ಮ ಬೋಧನೆ ನೆಪದಲ್ಲಿ ಐಸಿಸ್ ಬಗ್ಗೆ ಒಲವು ಮೂಡಿಸುತ್ತಿದ್ದರು. ಹಣಕಾಸಿನ ನೆರವು ನೀಡಿ ತರಬೇತಿಗಾಗಿ ಸಿರಿಯಾಗೂ ಕಳುಹಿಸುತ್ತಿದ್ದರು.' ಎಂದಿದ್ದಾರೆ.

ಲಂಚ: ಆಯುಷ್ ರಿಜಿಸ್ಟ್ರಾರ್ ಬಂಧನ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾರಂಪರಿಕ ವೈದ್ಯಕೀಯ ವೃತ್ತಿ ಮುಂದುವರಿಸಲು ಪ್ರಮಾಣಪತ್ರ ನೀಡುವುದಕ್ಕಾಗಿ ₹ 30,000 ಲಂಚ ಪಡೆದ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿ ರಿಜಿಸ್ಟ್ರಾರ್ ಡಾ. ಶಮ್ಸುದ್ದೀನ್ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಗುರುವಾರ ಬಂಧಿಸಿದೆ.

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಹೊಸಕೆರೆ ಗ್ರಾಮದ ವ್ಯಕ್ತಿಯೊಬ್ಬರು 1992ರಿಂದಲೂ ಪಾರಂಪರಿಕ ವೈದ್ಯ ವೃತ್ತಿ ಮಾಡುತ್ತಿದ್ದಾರೆ. ನೋಂದಣಿಯನ್ನು ನವೀಕರಿಸುವುದಕ್ಕಾಗಿ ಆಯುಷ್ ಮತ್ತು ಯುನಾನಿ ವೈದ್ಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು. ₹ 1.5 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದ ರಿಜಿಸ್ಟ್ರಾರ್, ₹ 1.2 ಲಕ್ಷವನ್ನು ಮುಂಗಡವಾಗಿ ಪಡೆದುಕೊಂಡಿದ್ದರು ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ನೋಂದಣಿ ಪ್ರಮಾಣಪತ್ರ ನೀಡಲು ಬಾಕಿ ಇರುವ ₹ 30,000 ನೀಡುವಂತೆ ಶಮ್ಸುದ್ದೀನ್ ಒತ್ತಾಯಿಸಿದ್ದರು. ಈ ಕುರಿತು ಅರ್ಜಿದಾರರು ಎಸಿಬಿ ಬೆಂಗಳೂರು ನಗರ ಘಟಕದ ಕಚೇರಿಗೆ ದೂರು ನೀಡಿದ್ದರು. ಗುರುವಾರ ಮಂಡಳಿ ಕಚೇರಿಯಲ್ಲೇ ಲಂಚ ಪಡೆದ ರಿಜಿಸ್ಟ್ರಾರ್ ಅವರನ್ನು ಹಣದ ಸಮೇತ ಬಂಧಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ನಿಮ್ಹಾನ್ಸ್‌ಗೆ ದಾಖಲಿಸಿದರೂ ಪ್ರಯೋಜನವಿಲ್ಲ: ಆರಗ ಜ್ಞಾನೇಂದ್ರ



ಬೆಂಗಳೂರು: 'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ನಿಮ್ಹಾನ್ಸ್‌ಗೆ ದಾಖಲಿಸಿ, ಚಿಕಿತ್ಸೆ ನೀಡಿದರೂ ಪ್ರಯೋಜನ ಆಗುವುದಿಲ್ಲ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದಾರೆ.

'ಗೃಹ ಸಚಿವರಿಗೆ ಮತಿಭ್ರಮಣೆಯಾಗಿದೆ' ಎಂಬ ಶಿವಕುಮಾರ್ ಹೇಳಿಕೆ ಕುರಿತು ಪ್ರತಿಕ್ರಿಯೆ ನೀಡಿರುವ ಅವರು, 'ಸತ್ಯ ಯಾವಾಗಲೂ ಕಹಿಯಾಗಿರುತ್ತದೆ. ಸತ್ಯವನ್ನು ಅರಗಿಸಿಕೊಳ್ಳಲು ಕಾಂಗ್ರೆಸ್ ನಾಯಕರಿಗೆ ಆಗುತ್ತಿಲ್ಲ. ಶಿವಕುಮಾರ್ ತಮ್ಮ ವ್ಯಕ್ತಿತ್ವಕ್ಕೆ ತಕ್ಕಂತೆ ಮಾತನಾಡಿದ್ದಾರೆ' ಎಂದಿದ್ದಾರೆ.

ಸೆಲ್ಫಿ: ರೈಲಿನಿಂದ ಆಯತಪ್ಪಿ ಬಿದ್ದು ಯುವಕ ಮರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲಿನಲ್ಲಿ ಪ್ರಯಾಣಿಸುವ ವೇಳೆ ಬೋಗಿಯೊಂದರ ಬಾಗಿಲಲ್ಲಿ ನಿಂತು ಸೆಲ್ಫಿ ತೆಗೆದುಕೊಳ್ಳುತ್ತಿದ್ದ ಯುವಕನೊಬ್ಬ ಆಯತಪ್ಪಿ ಬಿದ್ದು ಮೃತಪಟ್ಟಿದ್ದಾನೆ.

ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕು ಅಣ್ಣೆಚಕ್ಕನಹಳ್ಳಿ ಗ್ರಾಮದ ಅಭಿಷೇಕ್ (19) ಮೃತ ಯುವಕ. ಉಪ್ಪಾರಪೇಟೆ ಠಾಣೆಯ ಪೊಲೀಸರು ನದಿಯಲ್ಲಿ ಕೊಚ್ಚಿಹೋಗಿದ್ದ ಯುವಕನ ಶವ ಪತ್ತೆಹಚ್ಚಿದ್ದಾರೆ.

'ಗಾಂಧಿನಗರದ ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ಅಭಿಷೇಕ್, ಇದೇ 6ರಂದು ಊರಿಗೆ ಹೋಗುವುದಾಗಿ ತಿಳಿಸಿದ್ದ. ಎರಡು ದಿನವಾದರೂ ಆತ ಊರಿಗೆ ಹೋಗಿರಲಿಲ್ಲ. ಕೆಲಸದ ಸ್ಥಳಕ್ಕೂ ಮರಳಿರಲಿಲ್ಲ. ಹೀಗಾಗಿ ಆತನ ಸಂಬಂಧಿ ಮಂಜೇಗೌಡ (34) ಇದೇ 8ರಂದು ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.



ಅಭಿಷೇಕ್

'ಊರಿನಲ್ಲಿ ಅಂಕಲಿಂಗೇಶ್ವರ ದೇವಸ್ಥಾನದ ಉದ್ಘಾಟನೆಗಾಗಿ ನಾಲ್ವರು ಸ್ನೇಹಿತರನ್ನು ಆಹ್ವಾನಿಸಿದ್ದ. ಸ್ನೇಹಿತರೆಲ್ಲಾ ಇದೇ 6ರ ರಾತ್ರಿ 10 ಗಂಟೆ ಸುಮಾರಿಗೆ ಮೆಜೆಸ್ಟಿಕ್‌ಗೆ ಬಂದಿದ್ದರು. ಪಾಂಡವಪುರಕ್ಕೆ ತೆರಳಲು ರಾತ್ರಿ 12 ಗಂಟೆಗೆ ರೈಲು ಏರಿದ್ದರು. 2 ಗಂಟೆ ಸುಮಾರಿಗೆ ಎಲ್ಲರೂ ತಾವು ಪ್ರಯಾಣಿಸುತ್ತಿದ್ದ ಬೋಗಿಯ ಬಾಗಿಲ ಬಳಿ ಬಂದು ಮೊಬೈಲ್‌ನಲ್ಲಿ ಭಾವಚಿತ್ರ ಸೆರೆಹಿಡಿದುಕೊಳ್ಳಲು ಮುಂದಾಗಿದ್ದರು. ಮೃತ ಯುವಕ ಕಂಬಿಯನ್ನು ಹಿಡಿದು ಹೊರಕ್ಕೆ ಬಾಗಿ ಸೆಲ್ಫಿ ತೆಗೆದುಕೊಳ್ಳಲು ಯತ್ನಿಸಿದ್ದಾನೆ. ಈ ವೇಳೆ ಸೇತುವೆಯ ಕಂಬಿ ಬಡಿದು ಕೆಳಗಿದ್ದ ನದಿಗೆ ಬಿದ್ದಿದ್ದಾನೆ' ಎಂದು ಮಾಹಿತಿ ನೀಡಿದ್ದಾರೆ.

'ಪಾಂಡವಪುರ ನಿಲ್ದಾಣ ತಲುಪಿದ ಕೂಡಲೇ ರೈಲಿನಿಂದ ಇಳಿದ ಯುವಕರು ಹಿಂದಕ್ಕೆ ಬಂದು ಅಭಿಷೇಕ್‌ಗಾಗಿ ಹುಡುಕಿದ್ದಾರೆ. ಆತನ ಪತ್ತೆಯಾಗದ್ದರಿಂದ ಗಾಬರಿಗೊಂಡು ಇಬ್ಬರು ತಮ್ಮ ಊರಿಗೆ ತೆರಳಿದ್ದಾರೆ. ಮತ್ತಿಬ್ಬರು ಬೆಂಗಳೂರಿಗೆ ಮರಳಿದ್ದರು' ಎಂದಿದ್ದಾರೆ.

'ಅಭಿಷೇಕ್ ಯಾರೆಲ್ಲರ ಜೊತೆ ಸಂಪರ್ಕದಲ್ಲಿದ್ದ ಎಂಬ ಬಗ್ಗೆ ಮಾಹಿತಿ ಕಲೆಹಾಕಲಾಗಿತ್ತು. ಆತ ನಾಲ್ವರ ಜೊತೆ ಊರಿಗೆ ಹೋಗಿದ್ದ ವಿಚಾರ ಗೊತ್ತಾಗಿತ್ತು. ಅವರನ್ನು ಠಾಣೆಗೆ ಕರೆಸಿ ವಿಚಾರಿಸಿದಾಗ ನಡೆದಿದ್ದನ್ನೆಲ್ಲಾ ವಿವರಿಸಿದ್ದರು. ಅವರನ್ನು ಕರೆದುಕೊಂಡು ಘಟನಾ ಸ್ಥಳಕ್ಕೆ ಹೋಗಿ ಸ್ಥಳೀಯ ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ ಹಾಗೂ ಮೀನುಗಾರರ ಸಹಕಾರದೊಂದಿಗೆ ಐದು ದಿನ ನದಿಯ ಸುತ್ತಮುತ್ತ ಹುಡುಕಾಟ ನಡೆಸಲಾಗಿತ್ತು. ಸತತ ಮೂರು ದಿನ ಮಳೆಯಾಗಿದ್ದರಿಂದ ನದಿಯಲ್ಲಿ ನೀರಿನ ಹರಿವು ಹೆಚ್ಚಿತ್ತು. ಹೀಗಾಗಿ ಯುವಕನ ದೇಹ ಕೊಚ್ಚಿಕೊಂಡು ಹೋಗಿತ್ತು. ಇದೇ 14ರಂದು ಶ್ರೀರಂಗಪಟ್ಟಣ ಠಾಣೆ ವ್ಯಾಪ್ತಿಯಲ್ಲಿ ಮೃತದೇಹ ಪತ್ತೆಯಾಗಿತ್ತು' ಎಂದಿದ್ದಾರೆ.

ಪ್ರಧಾನಿಗೆ ಬರೆದ ಪತ್ರದಲ್ಲಿ ಪ್ರಮುಖರ ಹೆಸರು: ಡಿಕೆಶಿ

ಬೆಂಗಳೂರು: ಬಿಟ್ ಕಾಯಿನ್ ಹಗರಣದ ಬಗ್ಗೆ ಪ್ರಧಾನಿ ಅವರಿಗೆ ಕಳಿಸಲಾಗಿರುವ ಪತ್ರದಲ್ಲಿ ಮುಖ್ಯಮಂತ್ರಿ ಕುಟುಂಬದ ಸದಸ್ಯರು, ಹಲವು ಸಚಿವರು, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು, ಸಂಸದರು ಶಾಮೀಲಾಗಿದ್ದಾರೆ ಎಂದು ಆರೋಪಿಸಲಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಬಿಟ್ ಕಾಯಿನ್ ಹಗರಣದ ಬಗ್ಗೆ ಕಾಂಗ್ರೆಸ್‌ನವರ ವಿರುದ್ಧ ಟೀಕೆ ಮಾಡುವ ಬದಲು, ಪ್ರಧಾನಿಗೆ ಕಳಿಸಲಾದ ದೂರಿನ ಬಗ್ಗೆ ಸ್ವಯಂ ಪ್ರೇರಣೆಯಿಂದ ಮೊಕದ್ದಮೆ ದಾಖಲಿಸಲಿ ಎಂದು ಒತ್ತಾಯಿಸಿದರು.



'ಬಿಟ್ ಕಾಯಿನ್ ಹ್ಯಾಕಿಂಗ್ ಪ್ರಕರಣದ ಆರೋಪಿ ಶ್ರೀಕಿಯನ್ನು ಬಳಸಿಕೊಂಡು ಯುವ ಕಾಂಗ್ರೆಸ್ ಚುನಾವಣೆಯಲ್ಲಿ ಅಕ್ರಮ ಎಸಗಲಾಗಿದೆ. ಮೊಹಮ್ಮದ್ ನಲಪಾಡ್ ಪರ ನಕಲಿ ಮತದಾನ ಮಾಡಿಸಲಾಗಿದೆ ಎಂದು ಕಾಂಗ್ರೆಸ್ ನಾಯಕರು ಮಾಹಿತಿ ನೀಡಿದ್ದಾರೆ. ಈ ಬಗ್ಗೆ ದೂರು ಬಂದರೆ ತನಿಖೆ ನಡೆಸುತ್ತೇವೆ' ಎಂದು ಸಚಿವ ಜ್ಞಾನೇಂದ್ರ ಹೇಳಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, ಯುವ ಕಾಂಗ್ರೆಸ್ ಚುನಾವಣೆ ನಡೆದಾಗ ಶ್ರೀಕಿ ಜೈಲಿನಲ್ಲಿಯೇ ಇದ್ದ. ಪೊಲೀಸರ ಕಣ್ಗಾವಲಿನಲ್ಲೇ ಇದ್ದ ಆತನಿಗೆ ಲ್ಯಾಪ್‌ಟಾಪ್ ಅಥವಾ ಕಂಪ್ಯೂಟರ್ ಒದಗಿಸಿ ಹ್ಯಾಕಿಂಗ್ ಮಾಡಿಸಿದವರು ಯಾರು? ಕಾಂಗ್ರೆಸ್‌ನವರು ಮಾಡಿಸಲು ಸಾಧ್ಯವೇ ಎಂದೂ ಪ್ರಶ್ನಿಸಿದರು.

ಜ್ಞಾನೇಂದ್ರ ಅವರಿಗೆ ಸಾಮಾನ್ಯ ಜ್ಞಾನವೇ ಇಲ್ಲ. ಏನು ಮಾತನಾಡುತ್ತಿದ್ದೇನೆ ಎಂಬ ಪರಿವೆಯೂ ಇಲ್ಲ. ಅವರನ್ನು ಮೊದಲು ನಿಮ್ಹಾನ್ಸ್‌ಗೆ ದಾಖಲಿಸಿ ಚಿಕಿತ್ಸೆ ಕೊಡಿಸಬೇಕು ಎಂದು ಡಿಕೆಶಿ ಹೇಳಿದರು.

ಬೆಂಗಳೂರಿನಲ್ಲಿ ಜರ್ಮನ್ ವಹಿವಾಟು ಕಚೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಮತ್ತು ಜರ್ಮನಿಯ ನಾರ್ತ್ ರಿನೆ-ವೆಸ್ಟ್ ಫಾಲಿಯಾ ಪ್ರಾಂತ್ಯದ ನಡುವೆ ತಂತ್ರಜ್ಞಾನ ಸಹಭಾಗಿತ್ವವನ್ನು ಮತ್ತಷ್ಟು ವಿಸ್ತರಿಸುವ ಉದ್ದೇಶದಿಂದ ಬೆಂಗಳೂರಿನಲ್ಲಿ ಪೂರ್ಣ ಪ್ರಮಾಣದ ಕಚೇರಿಯನ್ನು 2022ರ ಆರಂಭದಲ್ಲಿ ಅಧಿಕೃತವಾಗಿ ಆರಂಭಿಸಲಾಗುವುದು ಎಂದು ಆ ಪ್ರಾಂತ್ಯದ ಆರ್ಥಿಕ, ನಾವೀನ್ಯ, ಡಿಜಿಟಲೀಕರಣ ಮತ್ತು ಇಂಧನ ಸಚಿವ ಆಂಡ್ರಿಯಾಸ್ ಪಿಂಕ್ವರ್ಟ್ ಪ್ರಕಟಿಸಿದರು.

ಇದು ಭಾರತ ಮತ್ತು ಜರ್ಮನಿಯ ಕಂಪನಿಗಳಿಗೆ ಹೆಬ್ಬಾಗಿಲಾಗಲಿದೆ ಎಂದು ಬೆಂಗಳೂರು ತಂತ್ರಜ್ಞಾನ ಶೃಂಗದಲ್ಲಿ ವರ್ಚುವಲ್ ಭಾಷಣದಲ್ಲಿ ಈ ವಿಷಯ ತಿಳಿಸಿದರು.

‘ಭಾರತದ ನವೋದ್ಯಮ ಮತ್ತು ಇತರ ಕಂಪನಿಗಳಿಗೆ ತಮ್ಮ ಪ್ರಾಂತ್ಯಕ್ಕೆ ಮುಕ್ತ ಸ್ವಾಗತವಿದೆ. ಭಾರತದಲ್ಲಿ ಬೆಂಗಳೂರು ಮತ್ತು ಕರ್ನಾಟಕ ಹೇಗೆ ತಂತ್ರಜ್ಞಾನದ ತೊಟ್ಟಿಲಾಗಿದೆಯೋ ಹಾಗೆ ಜರ್ಮನಿಯಲ್ಲಿ ನಮ್ಮ ಪ್ರಾಂತ್ಯವು ತಾಂತ್ರಿಕ ನೆಲೆಯಾಗಿದೆ’ ಎಂದು ಅವರು ಹೇಳಿದರು.

ಲಸಿಕೆ–ಉತ್ಕೃಷ್ಟತೆಯತ್ತ ಹೊರಳುವ ಸಮಯ

ಲಸಿಕೆ ಅಭಿವೃದ್ಧಿ ತಾಣವಾಗುವತ್ತ ಭಾರತ: ಅಭಿಮತ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ‘ಲಸಿಕೆ ಉತ್ಪಾದನೆ ಕ್ಷೇತ್ರದಲ್ಲಿ ಭಾರತದ ಸಾಧನೆ ಗಮನಾರ್ಹ. ಅಗಾಧ ಪ್ರಮಾಣದಲ್ಲಿ ಲಸಿಕೆ ಉತ್ಪಾದಿಸುವ ಸಾಮರ್ಥ್ಯವನ್ನು ಸಿದ್ಧಿಸಿಕೊಂಡಿರುವ ನಾವು ದೇಸಿ ತಂತ್ರಜ್ಞಾನ ಬಳಸಿಯೇ ಉತ್ಕೃಷ್ಟ ಲಸಿಕೆ ಅಭಿವೃದ್ಧಿಪಡಿಸುವತ್ತ ಚಿತ್ತ ಹರಿಸಬೇಕಿದೆ’ ಎಂದು ಲಸಿಕೆಗಳ ಉತ್ಪಾದನೆಯಲ್ಲಿ ತೊಡಗಿರುವ ವಿವಿಧ ಸಂಸ್ಥೆಗಳ ಪ್ರಮುಖರು ಅಭಿಪ್ರಾಯಪಟ್ಟರು.

‘ಬೆಂಗಳೂರು ತಂತ್ರಜ್ಞಾನ ಶೃಂಗ 2021’ದಲ್ಲಿ ಗುರುವಾರ ‘ಲಸಿಕೆ ಕ್ಷೇತ್ರದಲ್ಲಿ ಭಾರತದ ನಾಯಕತ್ವ’ ಕುರಿತ ಸಂವಾದದಲ್ಲಿ ಅವರು ಅಭಿಪ್ರಾಯ ಹಂಚಿಕೊಂಡರು.

ಎಪಿಐ ಆ್ಯಂಡ್ ಕಸ್ಟಮ್ ಫಾರ್ಮಸ್ಯುಟಿಕಲ್ಸ್ ಸರ್ವೀಸಸ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ದೀಪಕ್ ಸಪ್ರಾ, ‘ಭಾರತವನ್ನು ಲಸಿಕೆ ಉತ್ಪಾದನೆಯ ಪ್ರಮುಖ ತಾಣವನ್ನಾಗಿ ರೂಪಿಸಬೇಕಿದೆ. ಅಗಾಧ ಸಂಖ್ಯೆಯಲ್ಲಿ ಲಸಿಕೆ ಉತ್ಪಾದಿಸುವ ಸಾಮರ್ಥ್ಯ ಹೊಂದಿರುವ ನಾವು ಉತ್ಕೃಷ್ಟ ಲಸಿಕೆಯನ್ನು ಸಂಪೂರ್ಣ ದೇಸಿ ತಂತ್ರಜ್ಞಾನ ಬಳಸಿಯೇ ಅಭಿವೃದ್ಧಿ ಪಡಿಸುವಂತಾಗಬೇಕು. ಇದಕ್ಕಾಗಿ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗೆ ಒತ್ತು ನೀಡಬೇಕು’ ಎಂದರು.

> **ಎಲ್ಲ ಸಂಶೋಧನೆಗಳಿಗೂ ಪಾಶ್ಚಾತ್ಯರತ್ತ ನೋಡಬಾರದು. ಭಾರತದಲ್ಲೂ ಇದನ್ನು ಸಾಧಿಸಬಹುದು ಎಂಬುದನ್ನು ಕೊವ್ಯಾಕ್ಸಿನ್ ಲಸಿಕೆ ಅಭಿವೃದ್ಧಿಪಡಿಸಿದ ಯಶೋಗಾಥೆ ಇಡೀ ಜಗತ್ತಿಗೆ ತೋರಿಸಿ ಕೊಟ್ಟಿದೆ**
> **ಅತಿನ್ ತೋಮರ್,** ಸಿಇಒ ಮತ್ತು ಸಹ ಸಂಸ್ಥಾಪಕ ಯಾಪನ್ ಬಯೊಪ್ರೈವೇಟ್ ಲಿ.

ನೋವೋರ್ಝೈಮ್ಸ್‌ನ ಪ್ರಾದೇಶಿಕ ಅಧ್ಯಕ್ಷ ಡಾ.ಕೃಷ್ಣಮೋಹನ್ ಪಿ., ‘ಕೊವ್ಯಾಕ್ಸಿನ್‌ನ ಅಭಿವೃದ್ಧಿಪಡಿಸಿದ ಅನುಭವ ಅವಿಸ್ಮರಣೀಯ. ನಾವು 2020ರ ಮೇನಲ್ಲಿ ಈ ಸವಾಲಿನ ಕಾರ್ಯಕ್ಕೆ ಅಡಿ ಇಟ್ಟೆವು. ಮುಂದಿನ ಜನವರಿಯಲ್ಲಿ ಲಸಿಕೆಯು ಪ್ರಯೋಗಕ್ಕೆ ಸಿದ್ಧವಾಗಿತ್ತು. ಈ ಕುರಿತ 10 ಸಂಶೋಧನಾ ಪ್ರಬಂಧಗಳು ಪ್ರತಿಷ್ಠಿತ ವೈಜ್ಞಾನಿಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇದರ ಮೂರನೇ ಹಂತದ ಪ್ರಯೋಗಗಳ ದಾಖಲೆಗಳೂ ಶೀಘ್ರವೇ ಬಿಡುಗಡೆಯಾಗಲಿವೆ’ ಎಂದರು.

ಅರಬಿಂದೋ ಫಾರ್ಮಾದ ಹಿರಿಯ ಉಪಾಧ್ಯಕ್ಷೆ ಡಾ.ದಿವ್ಯಾ ಬಿಜಲ್ವಾನ್, ‘ದೇಶದಲ್ಲಿ ವಿಜ್ಞಾನ ಪ್ರತಿಭೆಗಳಿಗೇನೂ ಕೊರತೆ ಇಲ್ಲ. ಆದರೆ, ಅಂತಹವರನ್ನು ಗುರುತಿಸಿ, ಮನ್ನಣೆ ನೀಡುವ ವಾತಾವರಣ ನಮ್ಮಲ್ಲಿಲ್ಲ. ಇದರ ಬಗ್ಗೆ ಲಸಿಕೆ ಮತ್ತು ಔಷಧ ಕಂಪನಿಗಳು ಆತ್ಮಾವಲೋಕನ ಮಾಡಿಕೊಳ್ಳಬೇಕು’ ಎಂದರು.

ವರ್ಕ್ ಫ್ರಂ ಹೋಂ ಬಳಿಕ ಸೈಬರ್ ಭದ್ರತೆ ಬಗ್ಗೆ ಹೆಚ್ಚಿದೆ ಸವಾಲು

ಸೈಬರ್ ಭದ್ರತೆ: ಜಾಗೃತಿಯೂ ಅವಶ್ಯ

• ಅವಿನಾಶ್ ಬಿ.

ಬೆಂಗಳೂರು: ಮನೆಯಿಂದಲೇ ಕೆಲಸ ನಿರ್ವಹಿಸುವಂತಾದ ಕೋವಿಡ್ ಕಾಲದಲ್ಲಿ ಸೈಬರ್ ದಾಳಿಗಳೂ ಹೆಚ್ಚಾದವು. ಕಂಪನಿಯೊಳಗಿನ ನೆಟ್‌ವರ್ಕ್‌ನಲ್ಲಿದ್ದ ವ್ಯವಸ್ಥೆಗಳು ಮುಕ್ತ ಪರಿಸರಕ್ಕೆ ಬಂದಿದ್ದೇ ಇದಕ್ಕೆ ಕಾರಣ. ಸೈಬರ್ ಸುರಕ್ಷತೆಯ ಬಗ್ಗೆ ತಮ್ಮ ಉದ್ಯೋಗಿಗಳನ್ನು ತಜ್ಞರನ್ನಾಗಿ ರೂಪಿಸುವುದಷ್ಟೇ ಅಲ್ಲದೆ, ಅಂತಿಮ ಹಂತದ ಬಳಕೆದಾರರಿಗೂ ತರಬೇತಿ ನೀಡಬೇಕಾಗಿದೆ...

ಬೆಂಗಳೂರು ಟೆಕ್ ಶೃಂಗದಲ್ಲಿ ಗುರುವಾರ "ಡಿಜಿಟಲ್ ವಿಶ್ವಾಸಾರ್ಹತೆಯ ಖಾತರಿ: ಹೊಸ ಜೀವನ ಪದ್ಧತಿಯಲ್ಲಿ ಸೈಬರ್ ಭದ್ರತೆಯ ಅನಿವಾರ್ಯತೆ" ಕುರಿತ ಸಂವಾದ ಗೋಷ್ಠಿಯಲ್ಲಿ ಈ ಅಂಶ ಪ್ರಧಾನವಾಗಿ ಚರ್ಚೆಗೀಡಾಯಿತು.

ಈಗ ಸೈಬರ್ ಸುರಕ್ಷತೆ ಎಂಬುದು ಕೇವಲ ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿಷಯವಾಗುಳಿದಿಲ್ಲ. ಉದ್ಯಮದ ಯಶಸ್ಸು ಸೈಬರ್ ಭದ್ರತೆಯನ್ನು



ಅವಲಂಬಿಸಿದೆ ಮತ್ತು ಅದರ ವ್ಯಾಪ್ತಿಯು ವಿಸ್ತಾರವಾಗಿರುವುದು ಧನಾತ್ಮಕ ಬೆಳವಣಿಗೆ ಎಂದು ಇಸ್ರೇಲ್‌ನ ಚೆಕ್ ಪಾಯಿಂಟ್ ಸಿಇಒ ಗಿಲ್ ಶ್ವೆಡ್ ಅಭಿಪ್ರಾಯಪಟ್ಟರು.

ಸೈಬರ್ ಭದ್ರತೆ ಎಂಬುದು ವ್ಯವಸ್ಥೆಯ ದತ್ತಾಂಶವು ಕನಿಷ್ಠ ಹದಿನೈದರಷ್ಟು ಬೇರೆ ಅಪ್ಲಿಕೇಶನ್‌ಗಳಿಗೆ ಸಂಪರ್ಕಗಳನ್ನು ಒಳಗೊಂಡಿರುವ ವಿಚಾರ. ಪ್ರತಿಯೊಂದು ಕೊಂಡಿಯ ಬಗ್ಗೆಯೂ ಎಚ್ಚರಿಕೆ ವಹಿಸಬೇಕಿದೆ. ಯಾವುದೇ ಸಡಿಲ ಭಾಗದಲ್ಲಿ ಮಾಹಿತಿಗೆ ಕನ್ನ ಹಾಕಬಹುದಾಗಿದೆ. ಇದು ಕಂಪ್ಯೂಟರ್ ಅಥವಾ ಸಿಸ್ಟಂಗಳನ್ನು ಮಾತ್ರವೇ ಅಲ್ಲ; ಸಂಸ್ಥೆಯ ವಿಶ್ವಾಸಾರ್ಹತೆ ಮತ್ತು ಅದರ ಯಶಸ್ಸಿನ ಮೇಲೆ ನೇತ್ಯಾತ್ಮಕ ಪರಿಣಾಮಕ್ಕೆ ಕಾರಣವಾಗಬಹುದು ಎಂದು ಸಂವಾದ ಗೋಷ್ಠಿ ನಿರ್ವಹಿಸಿದ ಇನ್ಫೋಸಿಸ್ ಸೈಬರ್ ಭದ್ರತಾ ವಿಭಾಗದ ಮುಖ್ಯಸ್ಥ ವಿಶಾಲ್ ಸಾಲ್ವಿ ಹೇಳಿದರು.

ವಿಶ್ವಾಸಾರ್ಹತೆ: ಸ್ಟಾರ್ ಬಕ್ಸ್ ಕಥೆ

ಬದಲಾದ ಯುಗದಲ್ಲಿ ಕಂಪನಿಗಳು ವಿಶ್ವಾಸಾರ್ಹತೆ ವೃದ್ಧಿಗೆ ಯಾವ ರೀತಿ ಮುಂದಾಗುತ್ತಿವೆ ಎಂಬುದರ ಬಗ್ಗೆ ಗೋಷ್ಠಿಯಲ್ಲಿ ಇಂಟರ್ ಬ್ರ್ಯಾಂಡ್ ಇಂಡಿಯಾ ಎಂಡಿ ಆಶಿಶ್ ಮಿಶ್ರಾ ಅವರು ಮೂರು ವರ್ಷಗಳ ಹಿಂದೆ ಅಮೆರಿಕದಲ್ಲಿ ನಡೆದ ಘಟನೆಯನ್ನು ಉದಾಹರಿಸಿದರು.

ಅಮೆರಿಕದ ಅತಿದೊಡ್ಡ ಕಾಫಿ ಹೌಸ್ 'ಸ್ಟಾರ್ ಬಕ್ಸ್'ನ ಫಿಲಡೆಲ್ಫಿಯಾದ ಮಳಿಗೆಗೆ ಬಂದ ಇಬ್ಬರು, ಕೆಫೆಯ ಶೌಚಾಲಯ ಬಳಸಲು ಅವಕಾಶ ಕೇಳಿದರು. ಅವರು ಗ್ರಾಹಕರಲ್ಲದಿರುವುದರಿಂದ ಸಿಬ್ಬಂದಿ ತಡೆದರು. ಮಾತಿಗೆ ಮಾತು ಬೆಳೆದು, ಪೊಲೀಸರನ್ನು ಕರೆಸಿ ಇಬ್ಬರನ್ನು ಬಂಧಿಸಲಾಯಿತು.

ಆದರೆ, ಇದು ಸೋಷಿಯಲ್ ಮೀಡಿಯಾದಲ್ಲಿ ಭಾರಿ ಸದ್ದು ಮಾಡಿ, ಸ್ಟಾರ್ ಬಕ್ಸ್ ವಿರುದ್ಧ ಜನಾಂಗೀಯ ತಾರತಮ್ಯದ ಬಗ್ಗೆ ಜನಾಕ್ರೋಶವೆದ್ದಿತು. ಕೊನೆಗೆ ಸ್ಟಾರ್ ಬಕ್ಸ್ ಸಿಇಒ ಕೆವಿನ್ ಜಾನ್ಸನ್ ಕ್ಷಮೆ ಕೇಳಿದರು. ಅಷ್ಟಕ್ಕೇ ನಿಲ್ಲಲಿಲ್ಲ. ಗ್ರಾಹಕರ ಬಗೆಗಿನ ಧೋರಣೆಯನ್ನು ಬದಲಿಸುವಂತೆ ಹೊಸ ನೀತಿಯನ್ನೇ ಕಂಪನಿಯು ಜಾರಿಗೆ ತಂದಿತು. ಖರೀದಿ ಮಾಡದವರೂ ಗ್ರಾಹಕರೇ ಎಂದು ಸ್ಟಾರ್ ಬಕ್ಸ್ ಪರಿಗಣಿಸಿತು. ಈ ಬಗ್ಗೆ ಸಿಬ್ಬಂದಿಗೆ ತರಬೇತಿಗಾಗಿಯೇ ಎಲ್ಲ ಸ್ಟಾರ್ ಬಕ್ಸ್ ಕೆಫೆಗಳನ್ನು ಮೂರು ದಿನ ಮುಚ್ಚಲಾಗಿತ್ತು ಎಂದು ಅವರು ಹೇಳಿದರು.

‘ಯಾಕಾಗಿ ಐಪಿಒ, ಮಾರುಕಟ್ಟೆ ಮೇಲಿರಲಿ ಗಮನ’

• ವಿಶ್ವನಾಥ ಎಸ್.

ಬೆಂಗಳೂರು: ಐಪಿಒ (ಆರಂಭಿಕ ಸಾರ್ವಜನಿಕ ಹೂಡಿಕೆ) ಮೂಲಕ ಬಂಡವಾಳ ಮಾರುಕಟ್ಟೆ ಪ್ರವೇಶಿಸಲು ನವೋದ್ಯಮಗಳಿಗೆ ಉತ್ತಮ ಅವಕಾಶಗಳಿದ್ದರೂ, ಯಾಕಾಗಿ ಐಪಿಒ, ಮಾರುಕಟ್ಟೆಯಲ್ಲಿ ಏನಾಗುತ್ತಿದೆ ಎನ್ನುವ ಅಂಶಗಳು ತಿಳಿದಿರಬೇಕು ಎಂದು ತಜ್ಞರು ಕಿವಿಮಾತು ಹೇಳಿದರು.

‘ನವೋದ್ಯಮಗಳಿಗೆ ಐಪಿಒ ಅವಕಾಶಗಳು ಮತ್ತು ಸವಾಲುಗಳು’ ವಿಷಯದ ಕುರಿತು ಗುರುವಾರ ಸಂವಾದ ನಡೆಯಿತು. ‘ಗ್ರೋಥ್‌ಸ್ಟೋರಿ’ಯ ಪಾಲುದಾರ ಗಣೇಶ್ ಕೃಷ್ಣನ್ ಅವರು ನಡೆಸಿಕೊಟ್ಟ ಸಂವಾದದಲ್ಲಿ ‘ಐಪಿಒ’ ಕುರಿತು ತಜ್ಞರು ತಮ್ಮ ಅಭಿಪ್ರಾಯ ಹಂಚಿಕೊಂಡರು.

‘ಕಂಪನಿಯ ಬೆಳವಣಿಗೆಗೆ ಐಪಿಒ ಮೂಲಕ ಹೆಚ್ಚಿನ ಅವಕಾಶಗಳು ತೆರೆದುಕೊಳ್ಳುತ್ತವೆ. ಐಪಿಒಗೆ ಮುನ್ನ ಬಹಳ ಎಚ್ಚರಿಕೆಯಿಂದ ಇರಬೇಕು. ಪ್ರತೀ ತ್ರೈಮಾಸಿಕದಲ್ಲಿ ಕಂಪನಿ ಮೌಲ್ಯವನ್ನು ಲೆಕ್ಕ ಹಾಕಲಾಗುತ್ತದೆ. ಕಂಪನಿಯ ಪ್ರತಿ ಹೆಜ್ಜೆಯನ್ನೂ ಹೂಡಿಕೆದಾರರು ಗಮನಿಸುತ್ತಿರುತ್ತಾರೆ. ಸಣ್ಣ ಪ್ರಮಾಣದ ಬದಲಾವಣೆ ಆದರೂ ಅದು ಕಂಪನಿಯ ಮೇಲೆ ಪರಿಣಾಮ ಬೀರುತ್ತದೆ. 5–6 ವರ್ಷಗಳಲ್ಲಿ ವಹಿವಾಟನ್ನು ಅಭಿವೃದ್ಧಿಪಡಿಸಬೇಕು ಎನ್ನುವುದಾದರೆ, ಯಶಸ್ವಿಯಾಗಿ ನೋಂದಣಿ ಆಗುವುದು ಬಹಳ ಮುಖ್ಯ’ ಎಂದು ಐಐಎಫ್‌ಎಲ್ ಅಧ್ಯಕ್ಷ ನಿಪುನ್ ಗೋಯಲ್ ಹೇಳಿದರು.

ತಂತ್ರಜ್ಞಾನ ಆಧಾರಿತ ಕಂಪನಿಗಳು ಸಾರ್ವಜನಿಕರಿಂದ ಬಂಡವಾಳ ಸಂಗ್ರಹಕ್ಕೆ ಹೆಚ್ಚು ಹೆಚ್ಚು ಮುಂದಾಗುತ್ತಿವೆ. ಕೋವಿಡ್‌ನಿಂದಾಗಿ ಬಹಳಷ್ಟು ಕಂಪನಿಗಳು ಡಿಜಿಟಲೀಕರಣಕ್ಕೆ ಒಳಗಾಗಿವೆ. ಇದರಿಂದಾಗಿ ಹೂಡಿಕೆ ಅವಕಾಶಗಳು ತೆರೆದುಕೊಳ್ಳುತ್ತಿವೆ ಎಂದು ಎಕ್ಸಿಸ್ ಕ್ಯಾಪಿಟಲ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಸಲೀಲ್ ಪಿಟಾಲೆ ತಿಳಿಸಿದರು.

> **ಐಪಿಒಗೆ ಬಂದರೆ ಸಂಪತ್ತು ಮೌಲ್ಯ ಹೆಚ್ಚಿಸಿಕೊಳ್ಳಬಹುದು ಎನ್ನುವುದು ಒಂದು ಭ್ರಮೆ. ಹೀಗೆ ಮಾಡಬೇಕು ಎಂದಾದರೆ ಐಪಿಒಗಿಂತಲೂ ಖಾಸಗಿಯವರಿಗೆ ಮಾರಾಟ ಮಾಡುವುದೇ ಸೂಕ್ತ**
> **ಮನಿಷ್ ಅಗರ್ವಾಲ್**
> ಸಿಇಒ ನಜಾರಾ ಟೆಕ್ನಾಲಜೀಸ್

> **ಸಣ್ಣ ಮೊತ್ತದ ಐಪಿಒ ಇದ್ದರೆ, ಷೇರುಗಳ ಹಂಚಿಕೆಯು ಕಷ್ಟವಾಗುತ್ತದೆ. ಅರ್ಥಪೂರ್ಣವಾದ ಹಂಚಿಕೆ ಆಗಬೇಕು ಎಂದರೆ ₹ 15,000 ಕೋಟಿಗಿಂತ ಹೆಚ್ಚಿನ ಮೊತ್ತದ ಐಪಿಒ ಇರಬೇಕು**
> **ನಿಪುನ್ ಗೋಯಲ್**
> ಐಐಎಫ್‌ಎಲ್ ಅಧ್ಯಕ್ಷ

ಬಿಟಿಎಸ್- 2021: ಸಾಧಕ ಕಂಪನಿಗಳಿಗೆ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂತ್ರಜ್ಞಾನ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿರುವ ಐದು ಕಂಪನಿಗಳಿಗೆ ಸ್ಮಾರ್ಟ್ ಬಯೋ ಪುರಸ್ಕಾರ ಮತ್ತು ಅತ್ಯುತ್ತಮ ಸಾಧನೆ ಮಾಡಿರುವ 15 ನವೋದ್ಯಮಗಳಿಗೆ ಬೆಂಗಳೂರು ಇಂಪ್ಯಾಕ್ಟ್ ಪುರಸ್ಕಾರ ಪ್ರದಾನ ಮಾಡಲಾಯಿತು.

ಬೆಂಗಳೂರು ತಂತ್ರಜ್ಞಾನ ಶೃಂಗದ ಎರಡನೇ ದಿನವಾದ ಗುರುವಾರ ಐಟಿ–ಬಿಟಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಈ ಪ್ರಶಸ್ತಿ ಪ್ರದಾನ ಮಾಡಿದರು.

ಸ್ಮಾರ್ಟ್ ಬಯೋ ಪುರಸ್ಕಾರ ವಿಭಾಗದಲ್ಲಿ ಆಕ್ಸಿಯೋ ಬಯೋಸೊಲ್ಯೂಷನ್ಸ್ ಪ್ರೈ.ಲಿ, (ವರ್ಷದ ನಾವೀನ್ಯತಾ ಕಂಪನಿ- ವರ್ಷದ ಇನ್ನೋವೇಟರ್), ನಿಯೋಡಿಕ್ಸ್ ಬಯೋಟೆಕ್ ಲ್ಯಾಬ್ಸ್ ಪ್ರೈ.ಲಿ. (ಕೋವಿಡ್ ಸಂದರ್ಭದಲ್ಲಿ ಅತ್ಯುತ್ತಮ ಸ್ಟಾರ್ಟಪ್), ಜನನಿ ವೆಂಕಟರಾಮನ್, ಪ್ರವರ್ತಕಿ, ಬಯೋಮೊನೆಟಾ (ವರ್ಷದ ಮಹಿಳಾ ಉದ್ಯಮಿ), ಬಯೋಕಾನ್ ಅಕಾಡೆಮಿ (ಅತ್ಯುತ್ತಮ ಸಾಮಾಜಿಕ ಉದ್ಯಮ), ಹೆಲ್ತ್ ಕ್ಯೂಬ್ (ವರ್ಷದ ಅತ್ಯುತ್ತಮ ಬಯೋಟೆಕ್ ಸ್ಟಾರ್ಟಪ್).

ಬೆಂಗಳೂರು ಇಂಪ್ಯಾಕ್ಟ್ ಪುರಸ್ಕೃತ ಕಂಪನಿಗಳು– ಅಪನಾ, ಬಿಗ್ ಬ್ಯಾಸ್ಕೆಟ್, ಬ್ಲ್ಯಾಕ್ ಬಕ್, ಕಾಯಿನ್ಸ್ ವಿಚ್, ಸಿಆರ್ ಇಡಿ, ಕ್ಯೂರ್ ಫಿಟ್, ಡೈಲಿ ಹಂಟ್, ಗ್ರೋ, ಮೀಶೂ, ಎಂಪಿಎಲ್, ಫೋನ್ ಪೇ, ರೇಜರ್ ಪೇ, ಉಡಾನ್, ಅನ್‌ಅಕಾಡೆಮಿ, ಜೆರೋಡಾ ಮತ್ತು ಝೆಟ್ ವರ್ಕ್.



ಅಪಘಾತದಲ್ಲಿ ನುಜ್ಜುಗುಜ್ಜಾಗಿರುವ ವಾಹನ –ಪ್ರಜಾವಾಣಿ ಚಿತ್ರ

ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಕಾರು: ಮೂವರು ಸಾವು

ಪ್ರಜಾವಾಣಿ ವಾರ್ತೆ

ಯಲಹಂಕ: ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆಯಿಂದ ಬೆಂಗಳೂರಿನತ್ತ ವೇಗವಾಗಿ ಬರುತ್ತಿದ್ದ ಕಾರೊಂದು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಮತ್ತೊಂದು ಬದಿಯಲ್ಲಿ ಸಾಗುತ್ತಿದ್ದ ಜೆಸ್ಟ್ ಕಾರಿನ ಮೇಲೆ ಬಿದ್ದಿದೆ. ಕಾರು ಬಿದ್ದ ರಭಸಕ್ಕೆ ಜೆಸ್ಟ್ ಕಾರಿನಲ್ಲಿದ್ದ ಮಹಿಳೆ ಸೇರಿದಂತೆ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬೆಂಗಳೂರು ಉತ್ತರ ತಾಲ್ಲೂಕಿನ ಬೆಟ್ಟಹಲಸೂರು ಕ್ರಾಸ್‌ನಲ್ಲಿ ಗುರುವಾರ ರಾತ್ರಿ ಘಟನೆ ನಡೆದಿದೆ. ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಕಾರಿನಲ್ಲಿದ್ದ ಇಬ್ಬರ ಸ್ಥಿತಿ ಚಿಂತಾಜನಕವಾಗಿದ್ದು ಅವರನ್ನು ಸ್ಥಳೀಯರು ಆಸ್ಪತ್ರೆಗೆ ರವಾನಿಸಿದ್ದಾರೆ.

‘ವಿಮಾನ ನಿಲ್ದಾಣದಿಂದ ಬೆಂಗಳೂರಿನತ್ತ ಜೈಲೊ ಕಾರು ಅತಿ ವೇಗವಾಗಿ ಬರುತ್ತಿತ್ತು. ಮಳೆಯ ಕಾರಣ ದಾರಿ ಕಾಣದೆ ಚಾಲಕ ರಸ್ತೆ ವಿಭಜಕಕ್ಕೆ ಗುದ್ದಿದ್ದಾನೆ. ಆ ಕಾರು ಮತ್ತೊಂದು ಬದಿಯಲ್ಲಿ ಸಾಗುತ್ತಿದ್ದ ಜೆಸ್ಟ್ ಕಾರಿನ ಮೇಲೆ ಬಿದ್ದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಕಾರು ನುಜ್ಜುಗುಜ್ಜಾಗಿದ್ದರಿಂದ ಅದರಲ್ಲಿದ್ದವರ ದೇಹವನ್ನು ಹೊರ ತೆಗೆಯಲು ಸಾಧ್ಯವಾಗಿರಲಿಲ್ಲ. ಸಂಚಾರ ದಟ್ಟಣೆ ಉಂಟಾಗಬಹುದು ಎಂಬ ಕಾರಣಕ್ಕೆ ಪೊಲೀಸರು ಮೃತದೇಹದೊಂದಿಗೆ ಕಾರನ್ನು ಟೋಯಿಂಗ್ ಮಾಡಿದ್ದರು. ಘಟನೆ ನಡೆದ ಸ್ಥಳದಿಂದ ಒಂದು ಕಿಲೊ ಮೀಟರ್ ದೂರಕ್ಕೆ ತಂದು ಅದರೊಳಗೆ ಸಿಲುಕಿಕೊಂಡಿದ್ದ ದೇಹಗಳನ್ನು ತೆಗೆಯಲು ಹರಸಾಹಸಪಟ್ಟರು’ ಎಂದು ಸ್ಥಳೀಯರೊಬ್ಬರು ಹೇಳಿದ್ದಾರೆ.

‘₹ 2.5 ಲಕ್ಷ ಮೌಲ್ಯದ ಬಿಟ್‌ಕಾಯಿನ್ ವಶದಲ್ಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹ್ಯಾಕರ್ ಶ್ರೀಕೃಷ್ಣ ಭಾಗಿಯಾಗಿದ್ದ ಪ್ರಕರಣದಲ್ಲಿ ಆತನ ನಿಕಟವರ್ತಿ ರಾಬಿನ್ ಖಂಡೇಲ್‌ವಾಲಾ ಎಂಬಾತನಿಂದ ವಶಕ್ಕೆ ಪಡೆದಿದ್ದ ₹2.5 ಲಕ್ಷ ಮೌಲ್ಯದ (ಜಪ್ತಿ ಮಾಡಿದಾಗಿನ ಮೌಲ್ಯ) 0.08 ಬಿಟ್‌ಕಾಯಿನ್ ಹಾಗೂ ಮೂರು ಕ್ರಿಪ್ಟೋ ಕರೆನ್ಸಿಗಳು ಪೊಲೀಸ್ ವ್ಯಾಲೆಟ್‌ನಲ್ಲಿ ಸುರಕ್ಷಿತವಾಗಿವೆ’ ಎಂದು ಬೆಂಗಳೂರು ಪೊಲೀಸ್ ಕಮಿಷನರ್ ಕಮಲ್ ಪಂತ್ ತಿಳಿಸಿದ್ದಾರೆ.

ಪೊಲೀಸ್ ವ್ಯಾಲೆಟ್‌ನಲ್ಲಿದ್ದ ಬಿಟ್‌ಕಾಯಿನ್‌ಗಳು ಕಣ್ಮರೆಯಾಗಿವೆ ಎಂಬ ಆರೋಪಗಳ ಕುರಿತು ಗುರುವಾರ ಪತ್ರಿಕಾ ಹೇಳಿಕೆಯಲ್ಲಿ ಸ್ಪಷ್ಟನೆ ನೀಡಿರುವ ಅವರು, ‘ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಜೊತೆ ವ್ಯವಹರಿಸುತ್ತಿದ್ದ ರಾಬಿನ್ ಖಂಡೇಲ್‌ವಾಲಾ ಖಾತೆಯಿಂದ ಜಪ್ತಿ ಮಾಡಲಾಗಿದ್ದ ಬಿಟ್‌ಕಾಯಿನ್‌ಗಳು ನಾಪತ್ತೆಯಾಗಿವೆ ಎಂಬ ಆರೋಪದಲ್ಲಿ ಹುರುಳಿಲ್ಲ. ಅವುಗಳಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲ’ ಎಂದು ಹೇಳಿದ್ದಾರೆ.

‘ಪಂಚರ ಸಮಕ್ಷಮದಲ್ಲಿ 0.08 ಬಿಟ್‌ಕಾಯಿನ್ ಮತ್ತು ಮೂರು ಕ್ರಿಪ್ಟೋ ಕರೆನ್ಸಿಗಳನ್ನು ಪೊಲೀಸ್ ವ್ಯಾಲೆಟ್‌ಗೆ ವರ್ಗಾಯಿಸಲಾಗಿತ್ತು. ಈ ಬಗ್ಗೆ ನ್ಯಾಯಾಲಯಕ್ಕೂ ಮಾಹಿತಿ ನೀಡಲಾಗಿತ್ತು. ಈ ಕುರಿತು ಪ್ರಕರಣದ ಆರೋಪಪಟ್ಟಿಯಲ್ಲೂ ಉಲ್ಲೇಖಿಸಲಾಗಿತ್ತು’ ಎಂದಿದ್ದಾರೆ.

‘ಯುನೊಕಾಯಿನ್ ಕಂಪನಿಗೆ ಸಂಬಂಧಿಸಿದಂತೆಯೂ ಆರೋಪ ಮಾಡಲಾಗಿತ್ತು. ಯುನೊಕಾಯಿನ್ ಭಾರತದಲ್ಲಿ ನಿಯಮಾನುಸಾರವಾಗಿ ಅನುಮತಿ ಪಡೆದು ಕ್ರಿಪ್ಟೋ ಕರೆನ್ಸಿಯ ವಹಿವಾಟು ನಡೆಸುತ್ತಿರುವ ಕಂಪನಿಯಾಗಿದೆ. ಕಂಪನಿಯ ಖಾತೆಯನ್ನು ಹ್ಯಾಕ್ ಮಾಡಿ, ಸಣ್ಣ ಮೊತ್ತದ ಹಣ ಕೊಳ್ಳೆ ಹೊಡೆಯಲಾಗಿತ್ತು. ಕಂಪನಿಯು ಈ ಪ್ರಕರಣದ ಆರೋಪಿಯಲ್ಲ, ಸಂತ್ರಸ್ತ. ಯುನೊಕಾಯಿನ್ ಕಂಪನಿಯ ವಿಚಾರದಲ್ಲಿ ಯಾವುದೇ ಬಗೆಯ ಹಿತಾಸಕ್ತಿ ಸಂಘರ್ಷವೂ ಇಲ್ಲ’ ಎಂದು ಅವರು ಹೇಳಿದ್ದಾರೆ.

ಇನ್ನೂ ಪತ್ತೆಯಾಗದ ಶ್ರೀಕಿ!



ಬಿಟ್‌ಕಾಯಿನ್ ಹಗರದ ಸೂತ್ರಧಾರ ಎನ್ನಲಾಗಿರುವ ಶ್ರೀಕಿ ಎಲ್ಲಿದ್ದಾನೆ ಎಂಬುದು ಇನ್ನೂ ಗೊತ್ತಾಗಿಲ್ಲ.

‘ಶ್ರೀಕಿ ಇನ್ನೂ ಪತ್ತೆಯಾಗಿಲ್ಲ. ಆತನ ಜೀವಕ್ಕೆ ಅಪಾಯವಿರುವುದಾಗಿ ಹೇಳಲಾಗಿತ್ತು. ಹೀಗಾಗಿ ಭದ್ರತೆಗೆಂದು ಮಂಗಳವಾರವೇ ಪೊಲೀಸ್ ಇನ್‌ಸ್ಪೆಕ್ಟರ್‌ವೊಬ್ಬರನ್ನು ನೇಮಿಸಲಾಗಿತ್ತು. ಅವರು ಸತತ ಎರಡು ದಿನ ಶ್ರೀಕಿ ಮನೆಗೆ ಹೋದರೂ ಆತ ಸಿಕ್ಕಿಲ್ಲ. ಆತನ ಮನೆಯವರಿಗೆ ನೀಡಿರುವ ಭದ್ರತೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಕಮಿಷನರ್ ಕಮಲ್ ಪಂತ್ ‘ಪ್ರಜಾವಾಣಿ’ಗೆ ತಿಳಿಸಿದರು.

ಕೋವಿಡ್ ಪ್ರಕರಣ ಮತ್ತೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಮತ್ತಷ್ಟು ಹೆಚ್ಚಳವಾಗಿದ್ದು, 313 ಮಂದಿ ಸೋಂಕಿತರಾಗಿರುವುದು ಗುರುವಾರ ದೃಢಪಟ್ಟಿದೆ. 8 ದಿನಗಳಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಒಂದು ದಿನದ ಅವಧಿಯಲ್ಲಿ 86 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.36 ರಷ್ಟು ವರದಿಯಾಗಿದೆ. ನಾಲ್ಕು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 12 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೆಳಗಾವಿ ಸೇರಿದಂತೆ 13 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರಿನಲ್ಲಿ 179 ಮಂದಿ ಸೋಂಕಿತರಾಗಿದ್ದಾರೆ. ಮೈಸೂರಿನಲ್ಲಿ ಪ್ರಕರಣಗಳ ಸಂಖ್ಯೆ ದಿಢೀರ್ ಏರಿಕೆಯಾಗಿದ್ದು, ಅಲ್ಲಿ 51 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.92 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಇಬ್ಬರು, ರಾಮನಗರ ಹಾಗೂ ಉತ್ತರ ಕನ್ನಡದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 1.27 ರಷ್ಟು ದೃಢಪಟ್ಟಿದೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,54,642 ▲ ಒಟ್ಟು ಪ್ರಕರಣಗಳು
(12,54,463 ನಿನ್ನೆಯ ವಿವರ)

6,051 ▼	12,32,272 ▲	16,318 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	179 ▼
ಗುಣಮುಖ	236 ▼
ಸಾವು	02

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

‘ಬಟ್ಟೆ ಬಿಚ್ಚಿ ತಿರುಗಾಡುವವರಿಗೆ ಗಾಂಧಿ ಮೌಲ್ಯವೇನು ಗೊತ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೊಟ್ಟೆಪಾಡಿಗಾಗಿ ಬಟ್ಟೆಬಿಚ್ಚಿ ತಿರುಗಾಡುವವರಿಗೆ ಗಾಂಧಿ ಮೌಲ್ಯಗಳ ಬಗ್ಗೆ ಏನು ಗೊತ್ತಿದೆ’ ಎಂದು ಶಾಸಕ ರಮೇಶ್ ಕುಮಾರ್ ಕಿಡಿಕಾರಿದರು.



ರಮೇಶ್ ಕುಮಾರ್

ಸ್ವಾತಂತ್ರ್ಯ ಭಾರತದ 75 ವರ್ಷಗಳ ಸಂಭ್ರಮಾಚರಣೆ ಪ್ರಯುಕ್ತ ನಗರದಲ್ಲಿ ಬೆಂಗಳೂರು ಉತ್ತರ, ದಕ್ಷಿಣ ಮತ್ತು ಕೇಂದ್ರ ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಗುರುವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ‘ಮಹಾತ್ಮ ಗಾಂಧೀಜಿ ಬಗ್ಗೆ ಹಗುರವಾಗಿ ಮಾತನಾಡುವವರು ಮನುಷ್ಯರಾ ಅಥವಾ ನರ ರಾಕ್ಷಸರಾ? ನಿಮಗೆ ನೀವೇ ಪ್ರಶ್ನೆ ಹಾಕಿಕೊಳ್ಳಿ. ಅವರ ನಡತೆಯಿಂದ ಮಹಾತ್ಮ ಎನ್ನುವ ಬಿರುದು ಬಂದಿದೆ. ಇದು ಸಮಾಜ ನೀಡಿದ ಗೌರವ’ ಎಂದು ಹೇಳಿದರು.

‘ಗಾಂಧಿ ಅವರು ರಾಮಭಕ್ತ. ಗಾಂಧೀಜಿಗಿಂತ ದೊಡ್ಡ ರಾಮಭಕ್ತ ಈ ದೇಶದಲ್ಲಿ ಯಾರಿದ್ದಾರೆ? ಆದರೆ, ಗಾಂಧಿ ಅವರನ್ನು ಈಗ ರಾಮನಿಂದ ದೂರ ಮಾಡಲಾಗಿದೆ. ನಾಥೂರಾಮ್ ಗೋಡ್ಸೆಯನ್ನು ಆರಾಧಿಸುವ ವಾತಾವರಣ ಸೃಷ್ಟಿಸಲಾಗಿದೆ. ಇತಿಹಾಸವನ್ನು ಮುಚ್ಚಿಡುವ ಪ್ರಯತ್ನ ಮಾಡಲಾಗುತ್ತಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆರ್‌ಎಸ್‌ಎಸ್ ಮತ್ತು ಹಿಂದೂ ಮಹಾಸಭಾ ಧೋರಣೆಗಳನ್ನು ಟೀಕಿಸಿದ ಅವರು, ‘ಭಾರತ ಬಿಟ್ಟು ತೊಲಗಿ ಚಳವಳಿ ನಡೆಯುವಾಗ ನೀವು ಎಲ್ಲಿಗೆ ಹೋಗಿದ್ದೀರಿ? ಆಗ ಹಿಂದೂ ಮಹಾಸಭಾ ಇರಲಿಲ್ವಾ? ಆರ್‌ಎಸ್‌ಎಸ್ ಇರಲಿಲ್ವಾ? ಕಸ್ತೂರ್ ಬಾ ಮೃತಪಟ್ಟಾಗ ನಿಮಗೆ ದುಃಖ ಆಗಲಿಲ್ವಾ? ಈಗ ಎಂಥ ದೇಶಭಕ್ತಿ, ಮಹಾನ್ ದೇಶಭಕ್ತಿ ನಿಮ್ಮದು. ಭಾರತ್ ಮಾತಾಕೀ ಜೈ ಎಂದು ಈಗ ಹೇಳುತ್ತೀರಿ. ಯಾವ ಭಾರತ ಮಾತೆ, ಅಂಬಾನಿ ಮಾತೆಯಾ? ಅದಾನಿ ಮಾತೆಯಾ ಅಥವಾ ಭಗತ್ ಸಿಂಗ್ ಭಾರತ್ ಮಾತೆಯಾ’ ಎಂದು ಪ್ರಶ್ನಿಸಿದರು.

‘ಈಗ ನರಿಗಳು ಬಂದು ಕುರ್ಚಿಯಲ್ಲಿ ಕುಳಿತಿವೆ. ನಾವು ಸಿಂಹದ ಮರಿಗಳು, ನರಿಗಳಿಗೆ ಅಂಜುವುದು ಬೇಡ. ಧೈರ್ಯದಿಂದ ಮುನ್ನುಗ್ಗೋಣ’ ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಬೆಳಗಾವಿ ಜಿಲ್ಲೆಯ ಬೈಲೂರಿನ ನಿಷ್ಕಲ ಮಂಟಪದ ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ ಇದ್ದರು.

ರಾಸಾಯನಿಕ ವಿಜ್ಞಾನಿ ಜುಂಜಪ್ಪ ನಿಧನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಸಾಯನಿಕ ವಿಜ್ಞಾನಿ ಪ್ರೊ. ಹಿರಿಯಕ್ಕನವರ ಜುಂಜಪ್ಪ(85) ಅವರು ನ.16ರಂದು ನಗರದಲ್ಲಿ ನಿಧನರಾದರು. ಪತ್ನಿ ಪ್ರೊ. ಇಲಾ, ಮಗಳು ದೀಪು ಅವರನ್ನು ಅಗಲಿದ್ದು, ಹೆಬ್ಬಾಳದ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನ ಆಲದಗೆರೆಯ ಜುಂಜಪ್ಪ ಅವರು, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರೊ. ಸಿದ್ದಪ್ಪ ಅವರ ಮಾರ್ಗದರ್ಶನದಲ್ಲಿ ಪಿಎಚ್‌ಡಿ ಪದವಿ ಪಡೆದರು. ನಂತರ ಕಾನ್ಪುರದ ಐಐಟಿಯಲ್ಲಿ ಪ್ರೊ. ಎಂ.ವಿ.ಜಾರ್ಜ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿದರು. ಲಖನೌದಲ್ಲಿ ವಿಜ್ಞಾನಿಯಾಗಿ ವೃತ್ತಿ ಜೀವನ ಆರಂಭಿಸಿದರು. ನಂತರ ಶಿಲ್ಲಾಂಗ್‌ನಲ್ಲಿರುವ ‘ನಾರ್ತ್ ಈಸ್ಟರ್ನ್ ಹಿಲ್ ಯೂನಿವರ್ಸಿಟಿ’ಯ ರಸಾಯನ ವಿಜ್ಞಾನ ವಿಭಾಗದ ಸ್ಥಾಪಕ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾದ ಬಳಿಕ ಬೆಂಗಳೂರಿನ ಯಲಹಂಕದಲ್ಲಿ ವಾಸವಿದ್ದರು.

ನಿವೃತ್ತಿಯ ನಂತರವೂ ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ(ಐಎನ್‌ಎಸ್‌ಎ) ಫೆಲೋಶಿಪ್ ಅಡಿಯಲ್ಲಿ 82 ವರ್ಷ ವಯಸ್ಸಿನ ತನಕವೂ ಸಂಶೋಧನೆಯಲ್ಲಿ ಸಕ್ರಿಯರಾಗಿದ್ದರು. ಇತ್ತೀಚೆಗೆ ಎರಡು ವರ್ಷಗಳಿಂದ ವಯೋಸಹಜ ಕಾಯಿಲೆಯಿಂದ ಮನೆಯಲ್ಲಿಯೇ ವಿಶ್ರಾಂತಿ ಪಡೆಯುತ್ತಿದ್ದರು.

ದೇಶ– ವಿದೇಶಗಳ ಪ್ರತಿಷ್ಠಿತ ರಾಸಾಯನಿಕ ವಿಜ್ಞಾನಿಗಳ ಜತೆ ನಿಕಟ ಸಂಪರ್ಕ ಹೊಂದಿದ್ದರು. ರಾಸಾಯನಿಕ ವಿಜ್ಞಾನದಲ್ಲಿ 300ಕ್ಕೂ ಹೆಚ್ಚು ಸಂಶೋಧನ ಲೇಖನಗಳನ್ನು ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ಇವರ ಪತ್ನಿ ಪ್ರೊ.ಇಲಾ ಅವರೂ ರಾಸಾಯನಿಕ ವಿಜ್ಞಾನಿಯಾಗಿದ್ದು, ಇಬ್ಬರು ಜತೆಯಾಗಿ ಸ್ಥಾಪಿಸಿದ ‘ಜುಂಜಪ್ಪ ಇಲಾ ಫೌಂಡೇಷನ್’ ಅಂತರ ರಾಷ್ಟ್ರೀಯ ಮಟ್ಟದಲ್ಲಿ ವಿಶೇಷ ಸ್ಥಾನ ಗಳಿಸಿದೆ.

ಶೇ 90ರಷ್ಟು ಆಧುನಿಕ ಔಷಧಿಗಳು ‘ಹೆಟಿರೋ ಸೈಕ್ಲಿಕ್’ ಅಣು ರಚನೆ ಹೊಂದಿದ್ದು, ಇಂತಹ ರಸಾಯನಿಕ ಸಂಸ್ಕರಣೆ ವಿಧಾನ ಅಭಿವೃದ್ಧಿಪಡಿಸಿರುವುದು ರಾಸಾಯನಿಕ ವಿಜ್ಞಾನ ಕ್ಷೇತ್ರಕ್ಕೆ ಅವರು ನೀಡಿದ ಮಹತ್ತರ ಕೊಡುಗೆ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ‘ಹೆಟರೋ ಸೈಕ್ಲಿಕ್’ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದ ‘ಅಲ್ಲೆನ್ ಕ್ಯಾಟ್ರಿಡ್ಸ್ಕಿ’ ಜತೆಗೂ ಜುಂಜಪ್ಪ ಅವರು ಒಡನಾಡಿಯಾಗಿದ್ದರು.

ರಾಸಾಯನಿಕ ವಿಜ್ಞಾನದ ದಿಗ್ಗಜ ಪ್ರೊ. ನ್ಯೂಮನ್ ಮಾರ್ಗದರ್ಶನದಲ್ಲಿ ಕೂಡ ಸಂಶೋದನೆ ಕೈಗೊಂಡಿದ್ದರು. ಒಟ್ಟು 65 ಸಂಶೋಧನ ವಿದ್ಯಾರ್ಥಿಗಳ ಪಿಎಚ್‌ಡಿ ಪದವಿಗೆ ಮಾರ್ಗದರ್ಶನ ಮಾಡಿದ್ದರು.

ಮೂವರು ಐಪಿಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಮೂವರು ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ಕೆ.ರಾಮರಾಜನ್- ಡಿಸಿಪಿ, ಕಮಾಂಡ್ ಸೆಂಟರ್, ಬೆಂಗಳೂರು ನಗರ, ಸಾಹಿಲ್ ಬಾಗ್ಲಾ- ಎಎಸ್ಪಿ, ಸಿಐಡಿ, ಬೆಂಗಳೂರು, ಹು-ಧಾ ನಗರ (ಕಾನೂನು-ಸುವ್ಯವಸ್ಥೆ) ಹೆಚ್ಚುವರಿ ಉಸ್ತುವಾರಿ. ಜಿತೇಂದ್ರ ಕುಮಾರ್ ದಯಾಮ-ಎಎಸ್ಪಿ,ಭದ್ರಾವತಿ.

ಸಿಎಆರ್-ಟಿ, ಇಮ್ಯುನೋ ಥೆರಪಿ, ಜೀನ್ ಥೆರಪಿ, ಜೀನ್ ಎಡಿಟಿಂಗ್

ಕ್ಯಾನ್ಸರ್ ಚಿಕಿತ್ಸೆಗೆ ಹೊಸ ತಂತ್ರಜ್ಞಾನ!

● ರವಿಪ್ರಕಾಶ್ ಎಸ್.

BTS2021 ಬೆಂಗಳೂರು ಟೆಕ್ ಸಮಿಟ್
ಪ್ರಜಾವಾಣಿ ವಿಶೇಷ



ಕ್ಯಾನ್ಸರ್ ಕೋಶದ ತ್ರಿಡಿ ಚಿತ್ರ

ಬೆಂಗಳೂರು: ಕ್ಯಾನ್ಸರ್ 'ಭಯಾನಕ', ಅದಕ್ಕೆ ಚಿಕಿತ್ಸೆಯೇ ದುರ್ಲಭ ಎಂಬ ಸ್ಥಿತಿ ಈಗ ಮರೆಯಾಗುತ್ತಿದೆ. ಆಧುನಿಕ ವೈದ್ಯಕೀಯ ತಂತ್ರಜ್ಞಾನವು ಹಲವು ಬಗೆಯ ಕ್ಯಾನ್ಸರ್ ಚಿಕಿತ್ಸೆಗಳಿಗೆ ವರವಾಗಿ ಪರಿಣಮಿಸಿದೆ.



ಗ್ರೆಗ್ ಬಿ ಥಾಮ್ಸನ್

'ಬೆಂಗಳೂರು ತಂತ್ರಜ್ಞಾನ ಶೃಂಗ'ದಲ್ಲಿ ಅಮೆರಿಕದ 'ಮೆಮೊರಿಯಲ್ ಸ್ಲೊವಾನ್ ಕೆಟ್ಟರಿಂಗ್ ಕ್ಯಾನ್ಸರ್ ಸೆಂಟರ್'ನ (ಎಂಎಸ್‌ಕೆಸಿಸಿ) ಅಧ್ಯಕ್ಷ ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಗ್ರೇಗ್ ಥಾಮ್ಸನ್ ವರ್ಚುವಲ್ ಮೂಲಕ ಕ್ಯಾನ್ಸರ್‌ಗೆ ಅತ್ಯಾಧುನಿಕ ಚಿಕಿತ್ಸೆಯ ವಿಧಾನಗಳನ್ನು ವಿವರಿಸಿದರು. ಅವುಗಳು ಹೀಗಿವೆ:

● ಜಗತ್ತಿನ ಯಾವುದೇ ವ್ಯಕ್ತಿ ಕ್ಯಾನ್ಸರ್‌ಗೆ ತುತ್ತಾದರೆ ಅದನ್ನು ಖಚಿತಪಡಿಸಿಕೊಳ್ಳಲು ಎರಡನೇ ಅಭಿಪ್ರಾಯ ಪಡೆಯುವುದು ಅಗತ್ಯ. ಅದಕ್ಕಾಗಿ ಮತ್ತೊಮ್ಮೆ ಬಯಾಪ್ಸಿ ಮಾಡಿಸಬೇಕಿಲ್ಲ. ಮೊದಲ ಪರೀಕ್ಷೆಯ ಡಿಜಿಟಲ್ ಇಮೇಜಿಂಗ್ ಸಾಕು. ಬೆಂಗಳೂರಿನ ವ್ಯಕ್ತಿ ನ್ಯೂಯಾರ್ಕ್‌ನ ಸ್ಲೊವಾನ್ ಕೆಟ್ಟರಿಂಗ್ ಕ್ಯಾನ್ಸರ್ ಸೆಂಟರ್‌ಗೆ ಇದನ್ನು ಕಳುಹಿಸಿ ಅಭಿಪ್ರಾಯ ಪಡೆಯಬಹುದು. ಟೆಲಿಮೆಡಿಸಿನ್ ಮಾದರಿಯಲ್ಲೇ ತಜ್ಞ ವೈದ್ಯರಿಂದ ಅಭಿಪ್ರಾಯ ಪಡೆಯಬಹುದು.

● ಸುಮಾರು 450 ಬಗೆಯ ಕ್ಯಾನ್ಸರ್‌ಗಳಿವೆ. ದೇಹದ ಯಾವುದೇ ಅಂಗಾಂಶಕ್ಕೂ ಕ್ಯಾನ್ಸರ್ ಬರಬಹುದು.

ಕೋಶಗಳ ಅಣುಗಳಲ್ಲಿ ಆಗುವ ರೂಪಾಂತರ ಕ್ಯಾನ್ಸರ್‌ಗೆ ಕಾರಣವಾಗುತ್ತದೆ. ಇವುಗಳಲ್ಲಿ ಬಹುತೇಕ ಕ್ಯಾನ್ಸರ್‌ಗಳಿಗೆ ವಿಕಿರಣ ಚಿಕಿತ್ಸೆ ಅಥವಾ ಕಿಮೋ ಥೆರಪಿ ಅಗತ್ಯವಿಲ್ಲ. ಆರೋಗ್ಯಕರ ಕೋಶಗಳಿಗೆ ಹಾನಿ ಮಾಡದೇ ಕ್ಯಾನ್ಸರ್ ಕೋಶಗಳನ್ನೇ ನಿರ್ದಿಷ್ಟವಾಗಿ ಕೊಲ್ಲುವ ಥೆರಪಿ ಲಭ್ಯವಿದೆ.

● 'ಟಿ ಸೆಲ್' ಥೆರಪಿ ಇದನ್ನು ಕೆಮೆರಿಕ್ ಆ್ಯಂಟಿಜನ್ ರಿಸೆಪ್ಟಾರ್ ಟಿ (ಸಿಎಆರ್-ಟಿ) ಎಂದು ಕರೆಯಲಾಗುತ್ತದೆ. ಇದು ಕೋಶ ಆಧಾರಿತ ಚಿಕಿತ್ಸಾ ವಿಧಾನ. ಇದನ್ನು ನೋವೆಲ್ ಇಮ್ಯುನೊಲಾಜಿಕ್ ಥೆರಪಿ ಎನ್ನಲಾಗುತ್ತದೆ. ವಿವಿಧ ಬಗೆಯ ರೋಗಗಳಿಂದ ರಕ್ಷಿಸುವ ಪ್ರತಿರೋಧಕ ಗುಣವನ್ನು ಟಿ ಕೋಶಗಳು ಹೊಂದಿವೆ. ರೋಗಿಯ ರಕ್ತದಿಂದ ಟಿ ಕೋಶಗಳು ಸಂಗ್ರಹಿಸಿಕೊಂಡು, ಬಳಿಕ ಅದನ್ನು ಜೆನೆಟಿಕಲ್ ಎಂಜಿನಿಯರಿಂಗ್ ಮೂಲಕ ಕೋಶಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಲಾಗುತ್ತದೆ. ಹೀಗೆ ರೂಪಾಂತರಗೊಂಡ ಟಿ ಕೋಶ ವಿಶಿಷ್ಟ ಶಕ್ತಿ ಪಡೆದಿರುತ್ತದೆ. ಅಂದರೆ, ಕ್ಯಾನ್ಸರ್ ಕಣಗಳನ್ನು ಮಾತ್ರ ಪತ್ತೆ ಹಚ್ಚಿ, ದಾಳಿ ಮಾಡಿ ನಾಶಪಡಿಸುತ್ತವೆ.

'ಡಿಜಿಟಲ್ ಇಮೇಜಿಂಗ್ ಮೂಲಕ ಪತ್ತೆ'

● ಡಿಜಿಟಲ್ ಇಮೇಜಿಂಗ್ ಮೂಲಕ ಆರಂಭದ ಹಂತದಲ್ಲಿಯೇ ಕ್ಯಾನ್ಸರ್ ಕೋಶಗಳನ್ನು ಪತ್ತೆ ಮಾಡಬಹುದು. ದೇಶ-ವಿದೇಶಗಳಲ್ಲಿರುವ ತಜ್ಞರು ಏಕಕಾಲದಲ್ಲಿ ವ್ಯಕ್ತಿಯ ಜೀವಕೋಶಗಳ ರಚನೆಯ ವಿಶ್ಲೇಷಣೆ ನಡೆಸಿ, ಅದು ಕ್ಯಾನ್ಸರ್ ಕೋಶವೋ ಅಲ್ಲವೋ ಎಂಬುದನ್ನು ನಿರ್ಧರಿಸಬಹುದು. ಡಿಎನ್‌ಎ ಮತ್ತು ಆರ್‌ಎನ್‌ಎ ರಚನೆಯ ಅಧ್ಯಯನವೂ ಸಾಧ್ಯ. ಡಿಜಿಟಲ್ ಇಮೇಜಿಂಗ್ ಆಧರಿಸಿ ದತ್ತಾಂಶಗಳ ಟಿಪ್ಪಣಿ, ಸಂಗ್ರಹ ಮತ್ತು ಹಂಚಿಕೊಳ್ಳುವ ಮೂಲಕ ಅತಿ ಕಡಿಮೆ ಅವಧಿಯಲ್ಲಿ ತಜ್ಞರು ಖಚಿತ ಅಭಿಪ್ರಾಯಕ್ಕೆ ಬರಬಹುದು.

● ಬೆಂಗಳೂರು ವಿಶ್ವದ ತಂತ್ರಜ್ಞಾನ ನಗರ. ಇಲ್ಲಿ ಲಭ್ಯವಿರುವ ಸಾಫ್ಟ್‌ವೇರ್, ಹಾರ್ಡ್‌ವೇರ್ ತಂತ್ರಜ್ಞರ ನೆರವಿನಿಂದ ವೈದ್ಯಕೀಯ ವಿಜ್ಞಾನದಲ್ಲಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಡೇಟಾ ಸೈನ್ಸ್ ಬಳಸಿಕೊಂಡು, ವಿಶ್ವದಾದ್ಯಂತ ಆರೋಗ್ಯ ಆರೈಕೆಯ ಸಂಪರ್ಕ ವ್ಯವಸ್ಥೆಯನ್ನು (ಕನೆಕ್ಟೆಡ್ ಹೆಲ್ತ್ ಕೇರ್ ಸಿಸ್ಟಂ) ಅಭಿವೃದ್ಧಿಪಡಿಸುವುದು. ಭಾರತದ ಕ್ಯಾನ್ಸರ್ ಕೇಂದ್ರವು ಆಫ್ರಿಕಾದ ಬಡ ದೇಶದ ರೋಗಿಗೆ ಸೇವೆ ಒದಗಿಸಬಹುದಾಗಿದೆ.



ಉಪ್ಪಿಟ್ಟಿನಲ್ಲಿ ಪತ್ತೆಯಾದ ಸತ್ತ ಹಾವಿನ ಮರಿ

ಉಪ್ಪಿಟ್ಟಿನಲ್ಲಿ ಸತ್ತ ಹಾವಿನ ಮರಿ

ಯಾದಗಿರಿ: ತಾಲ್ಲೂಕಿನ ಅಬ್ಬೆ ತುಮಕೂರು ಮಠದ ವಿಶ್ವಾರಾಧ್ಯ ವಿದ್ಯಾವರ್ಧಕ ಸಂಸ್ಥೆಯ ವಸತಿ ನಿಲಯದಲ್ಲಿ ಗುರುವಾರ ಬೆಳಿಗ್ಗೆ ತಯಾರಿಸಿದ ಉಪ್ಪಿಟ್ಟಿನಲ್ಲಿ ಸತ್ತ ಹಾವಿನ ಮರಿ ಪತ್ತೆಯಾಗಿದ್ದು, ಉಪಾಹಾರ ಸೇವಿಸಿದ ಐವರು ವಿದ್ಯಾರ್ಥಿಗಳು ಅಸ್ವಸ್ಥರಾಗಿದ್ದಾರೆ.

ರಾಹುಲ್, ಮಲ್ಲಪ್ಪ, ವಿಶ್ವಕರ್ಣ, ಬಸವರಾಜ ಮತ್ತು ಯುವರಾಜ ಎಂಬ ವಿದ್ಯಾರ್ಥಿಗಳು ತಲೆ ಸುತ್ತು ಮತ್ತು ವಾಂತಿಯಿಂದ ಬಳಲಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

'ಉಪಾಹಾರ ಸೇವಿಸಿದ 56 ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ಮಾಡಲಾಗಿದೆ. ಅವರಲ್ಲಿ ಐವರು ವಿದ್ಯಾರ್ಥಿಗಳು ಅಸ್ವಸ್ಥರಾಗಿದ್ದಾರೆ. ಉಳಿದವರಿಗೆ ಯಾವುದೇ ಸಮಸ್ಯೆ ಇಲ್ಲ' ಎಂದು ಜಿಲ್ಲಾಸ್ಪತ್ರೆಯ ವೈದ್ಯರು ತಿಳಿಸಿದರು

ಶಾಸಕ ವೆಂಕಟರೆಡ್ಡಿ ಮುದ್ನಾಳ ಆಸ್ಪತ್ರೆಗೆ ಭೇಟಿ ನೀಡಿದರು.

ನಿಧನ ವಾರ್ತೆ

ನೀವಣೆ ಗಣೇಶ ಭಟ್




ಹುಬ್ಬಳ್ಳಿ: ವಿದ್ವಾಂಸ ನೀವಣೆ ಗಣೇಶ ಭಟ್ (80) ಬುಧವಾರ ಇಲ್ಲಿನ ಅವರ ಮಗಳ ಮನೆಯಲ್ಲಿ ನಿಧನರಾದರು. ಅವರಿಗೆ ಇಬ್ಬರು ಪುತ್ರಿಯರು ಇದ್ದಾರೆ.

ಅವರು ಮೂಲತಃ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ನೀವಣೆಯವರು.

ಪ್ರಸಿದ್ಧ ಪ್ರವಚನಕಾರರಾಗಿದ್ದ ಅವರು ನೂರಾರು ಭಾಗವತ ಸಪ್ತಾಹ ಮಾಡಿದ್ದರು. ಹರಿದಾಸರಾಗಿ, ಯಕ್ಷಗಾನ ಅರ್ಥಧಾರಿಯಾಗಿ, ಹವ್ಯಾಸಿ ವೇಷಧಾರಿಯಾಗಿ ಸಾಧನೆ ಮಾಡಿದ್ದಾರೆ. ಹಲವು ಪುಸ್ತಕಗಳನ್ನು ಬರೆದಿದ್ದಾರೆ. ಉಡುಪಿಯ ಯಕ್ಷಗಾನ ಕಲಾರಂಗ ಎರಡು ವರ್ಷದ ಹಿಂದೆ ಅವರಿಗೆ 'ಪೆರ್ಲ ಕೃಷ್ಣ ಭಟ್' ಪ್ರಶಸ್ತಿ ನೀಡಿ ಗೌರವಿಸಿದೆ. ಅವರ ಅಂತ್ಯಕ್ರಿಯೆ ಗುರುವಾರ ಸಂಜೆ ನಡೆಯಿತು.




'100' ಚಿತ್ರದಲ್ಲಿ ರಮೇಶ್ ಅರವಿಂದ್


ನಿಧಿ ಹೆಗಡೆ

ಮಲೆನಾಡಿನ 'ನಿಧಿ'

ಚಂದನವನಕ್ಕೆ ಹೊಸ ಭರವಸೆಯ 'ನೀಲಿಹಕ್ಕಿ'ಯಾಗಿ ಕಾಲಿಟ್ಟು ಮಿಂಚಿದ ಶ್ರೀನಿಧಿ ಹೊಸ ಅವಕಾಶಗಳ ಹೊಸ್ತಿಲಿನಲ್ಲಿದ್ದಾರೆ

ಕೃಷ್ಣಿ ಶಿರೂರ

ಗೋವಾದಲ್ಲಿ ನ.20 ರಿಂದ ಆರಂಭವಾಗಲಿರುವ ಪ್ರತಿಷ್ಠಿತ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ಕನ್ನಡದ ನಾಲ್ಕು ಚಿತ್ರಗಳು ಪ್ರದರ್ಶನ ಕಾಣುತ್ತಿವೆ. ಅವುಗಳಲ್ಲಿ ಗಣೇಶ ಹೆಗಡೆ ನಿರ್ದೇಶನದ 'ನೀಲಿ ಹಕ್ಕಿ' ಮತ್ತು ಸಾಗರ್ ಪುರಾಣಿಕ್ ಅವರ ನಿರ್ದೇಶನದ 'ಡೊಳ್ಳು' ಚಿತ್ರಗಳು ಹೊಸ ವಿಚಾರದ, ಹೊಸ ಹೊಳಹು ಇರುವ ಚಿತ್ರಗಳೆನಿಸಿವೆ. ಈ ಎರಡೂ ಚಿತ್ರಗಳ ಮುಖ್ಯ ಭೂಮಿಕೆಯಲ್ಲಿ ನಟಿಸಿರುವ ನಟಿ ಉದಯೋನ್ಮುಖ ಪ್ರತಿಭೆ, ಮಲೆನಾಡಿನ ಕೂಸು ನಿಧಿ ಹೆಗಡೆ.

ಶಿರಸಿ ಸಮೀಪದ ತ್ಯಾಗಲಿಯವರಾಗಿರುವ ನಿಧಿ ನಾಗರಾಜ ಹೆಗಡೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮನಃಶಾಸ್ತ್ರದಲ್ಲಿ ರ‍್ಯಾಂಕ್ ಗಳಿಸಿದವರು. ನಟನೆಯ ಕಿಂಚಿತ್ ಹಿನ್ನೆಲೆಯಿಲ್ಲದಿದ್ದರೂ ಸ್ವಯಂಪ್ರತಿಭೆ, ಸಾಮರ್ಥ್ಯದಿಂದ ಕನ್ನಡ ಚಿತ್ರದಲ್ಲಿ ಭರವಸೆ ಮೂಡಿಸಿರುವ ಸಹಜ ಚೆಲುವೆ.

ಹೈದರಾಬಾದಿನ ಅನ್ನಪೂರ್ಣ ಮಾಧ್ಯಮ ಮತ್ತು ನಟನಾ ಕಾಲೇಜಿನಲ್ಲಿ ಹೆಚ್ಚಿನ ತರಬೇತಿಯನ್ನು ಪಡೆದು ಒಳ್ಳೆಯ ಚಿತ್ರಗಳಲ್ಲಿ ಅಭಿನಯಿಸಿ ಸೈ ಎನಿಸಿಕೊಂಡಿದ್ದಾರೆ.

ಚಿಕ್ಕವಳಿದ್ದಾಗಲೇ ಅಭಿನಯದ ಒಲವು ಹೊಂದಿದ್ದ ನಿಧಿಗೆ 'ಕಡೇಪಕ್ಷ ಪದವಿನಾದ್ರೂ ಮುಗಿಸಿ ನಿನ್ನಿಷ್ಟದ ಸಿನಿಮಾ ಕ್ಷೇತ್ರಕ್ಕೆ ಸೇರು' ಎಂಬುದು ಅಪ್ಪ–ಅಮ್ಮ ಮಾಡಿದ್ದ ತಾಕೀತು. ಹೆತ್ತವರ ಮಾತು ಮೀರದ ಮಗಳು ಮನಃಶಾಸ್ತ್ರದಲ್ಲಿ ಪದವಿ ಓದಿ ರ‍್ಯಾಂಕ್ ಅನ್ನೂ ಗಳಿಸಿದರು. ಅಲ್ಲಿಂದ ಮುಂದೆ ಅವರಿಷ್ಟದಂತೆ ಅಭಿನಯದಲ್ಲಿ ತೊಡಗಿಕೊಂಡರು. ತಾವು ಮುಖ್ಯಭೂಮಿಕೆಯಲ್ಲಿ ಅಭಿನಯಿಸಿರುವ ಎರಡು ಚಿತ್ರಗಳು ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ಪ್ರದರ್ಶನಕ್ಕೆ ಆಯ್ಕೆಯಾಗಿರುವ ಸಂಭ್ರಮ, ಖುಷಿಯನ್ನು ನಿಧಿ 'ಸಿನಿಮಾ ಪುರವಣಿ'ಯೊಂದಿಗೆ ಹಂಚಿಕೊಂಡಿದ್ದಾರೆ.

'ಈಗಾಗಲೇ ಹಲವು ಕಿರುಚಿತ್ರಗಳಲ್ಲಿ ಅಭಿನಯಿಸಿರುವುದರ ಜೊತೆಗೆ ನಿರ್ದೇಶನವನ್ನೂ ಮಾಡಿದ್ದೇನೆ. ಶಿರಸಿ ಪರಿಸರದಲ್ಲಿ ಚಿತ್ರೀಕರಣವಾಗಿರುವ 'ನೀಲಿ ಹಕ್ಕಿ' ಚಿತ್ರ ಈಗಾಗಲೇ ನ್ಯೂಯಾರ್ಕ್ ಚಲನಚಿತ್ರೋತ್ಸವದಲ್ಲೂ ಪ್ರದರ್ಶಿತವಾಗಿದೆ. ರಿಷಬ್ ಶೆಟ್ಟಿ ಅವರ 'ಕಥಾ ಸಂಗಮ' ಚಿತ್ರದಲ್ಲಿ ಲಚ್ಚವ್ವ ಕಥೆಯಲ್ಲಿ ಮುಖ್ಯ ಪಾತ್ರದಲ್ಲೂ ನಟಿಸಿದ ಖುಷಿಯಿದೆ. ಇವುಗಳ ಜೊತೆಗೆ ಹಲವಾರು ಕಿರುಚಿತ್ರಗಳಲ್ಲಿ ಕೂಡ ಅಭಿನಯಿಸಿದ್ದೇನೆ. 'ನುತ್ತಾ' ಅನ್ನುವ ಕಿರುಚಿತ್ರದ ನಟನೆಗೆ ಪೋರ್ಟ್ ಬ್ಲೇರ್ ಚಿತ್ರೋತ್ಸವದಲ್ಲಿ ಉತ್ತಮ ನಟಿ ಪ್ರಶಸ್ತಿ ಪಡೆದಿರುವೆ. ನನ್ನ ಅಭಿನಯದ 'ನಾನ್ ದೇವ್ರು' ಅನ್ನುವ ಕಿರುಚಿತ್ರ, ತೆಲುಗಿನಲ್ಲೂ ಡಬ್ ಆಗಿ ಪ್ರದರ್ಶನ ಕಂಡಿದ್ದು, 24ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಬಾಚಿಕೊಂಡಿದೆ. ಅಷ್ಟೇ ಅಲ್ಲ; 'ಚಿತ್ರ ಭಾರತಿ' ಚಿತ್ರೋತ್ಸವದಲ್ಲಿ ಉತ್ತಮ ನಟಿ ಪ್ರಶಸ್ತಿಯನ್ನು ತಂದು ಕೊಟ್ಟಿದೆ' ಎನ್ನುವಾಗ ನಿಧಿ ಅವರ ಮಾತಿನಲ್ಲಿ ಸಂಭ್ರಮ ಮನೆಮಾಡಿತ್ತು.

ಸಾಮಾಜಿಕ ಜಾಲತಾಣ ಫೇಸ್‌ಬುಕ್ ತನ್ನ ಜಾಹೀರಾತೊಂದರಲ್ಲಿ ನಿಧಿ ಹೆಗಡೆ ಅವರನ್ನು ಬಳಸಿಕೊಂಡಿದೆ. ಸದ್ಯ ಇನ್ನೂ ಹಲವಾರು ಚಿತ್ರಗಳಲ್ಲಿ ನಿಧಿ ನಟಿಸುತ್ತಿದ್ದಾರೆ. ಈಗಾಗಲೇ ಬಿಡುಗಡೆ ಆಗಿರುವುವೆಲ್ಲವೂ ಕಲಾತ್ಮಕ ಚಿತ್ರಗಳೆನಿಸಿದ್ದು, ಮುಂದೆ ಕಮರ್ಷಿಯಲ್ ಸಿನಿಮಾದಲ್ಲೂ ಅಭಿನಯವನ್ನು ಮುಂದುವರಿಸುವ ಬಯಕೆ ನಿಧಿ ಅವರದ್ದು.

ನಿಧಿಯ ಭಾವನಾತ್ಮಕ, ಕಲಾತ್ಮಕ ಅಭಿನಯ ಅವರಿಗೆ ಇನ್ನಷ್ಟು ಅವಕಾಶಗಳಿಗೆ ದಾರಿ ಮಾಡಿಕೊಟ್ಟಿದೆ. ಚಿತ್ರರಂಗದಲ್ಲಿ ಮತ್ತಷ್ಟು ಭರವಸೆಯನ್ನು ಕಟ್ಟಿಕೊಟ್ಟಿದೆ. ❖

ಚಂದನವನದಲ್ಲೀಗ ಚಿತ್ರೋತ್ಸವ

ಅಭಿಲಾಷ್ ಪಿ.ಎಸ್.

ಒಂದೂವರೆ ವರ್ಷದಿಂದ ಮಂಕಾಗಿದ್ದ ರಾಜ್ಯದ ಚಿತ್ರಮಂದಿರಗಳಲ್ಲಿ ಇದೀಗ ಚಿತ್ರೋತ್ಸವದ ವಾತಾವರಣ. ಮತ್ತೆ ಶಿಳ್ಳೆ–ಚಪ್ಪಾಳೆಗಳ ಮಾರ್ದನಿ.

ಕೋವಿಡ್ ಎರಡನೇ ಅಲೆಯ ಬಳಿಕ, ರಾಜ್ಯದಲ್ಲಿ ನಾಡಹಬ್ಬದೊಂದಿಗೆ ಸಿನಿಮಾ ಹಬ್ಬವೂ ಆರಂಭವಾಗಿತ್ತು. 'ಸಲಗ', 'ಕೋಟಿಗೊಬ್ಬ–3' ಹಾಗೂ 'ಭಜರಂಗಿ–2' ಹೀಗೆ ಬಿಗ್‌ಬಜೆಟ್ ಚಿತ್ರಗಳು ಚಿತ್ರಮಂದಿರದತ್ತ ಪ್ರೇಕ್ಷಕರನ್ನು ಮತ್ತೆ ಸೆಳೆದಿದ್ದವು. ನಲುಗಿದ್ದ ಚಿತ್ರರಂಗ ಇದೀಗ ಕ್ರಮೇಣ ಚೇತರಿಸಿಕೊಳ್ಳುತ್ತಿದೆ. ವರ್ಷಾಂತ್ಯದಲ್ಲಿ ಸಾಲು ಸಾಲು ಚಿತ್ರಗಳು ಪ್ರೇಕ್ಷಕರಿಗೆ ಮನರಂಜನೆಯನ್ನುಣಿಸಲು ಸಜ್ಜಾಗಿವೆ.

ಶುಕ್ರವಾರದಂದು(ನ.19) ರಾಜ್ ಬಿ.ಶೆಟ್ಟಿ ನಟಿಸಿ ನಿರ್ದೇಶಿಸಿರುವ 'ಗರುಡ ಗಮನ ವೃಷಭ ವಾಹನ', ರಮೇಶ್ ನಟಿಸಿ ನಿರ್ದೇಶಿಸಿರುವ '100', ಮನು ರವಿಚಂದ್ರನ್ ನಟನೆಯ 'ಮುಗಿಲ್‌ಪೇಟೆ', ನಿರ್ದೇಶಕ ಭಾರತಿ ಶಂಕರ್ ಅವರ 'ನನ್ ಹೆಸ್ರು ಕಿಶೋರ ಏಳ್ ಪಾಸ್ ಎಂಟು' ಸಿನಿಮಾ ತೆರೆ ಕಾಣಲಿವೆ. ನ.26ಕ್ಕೆ ಗೋಲ್ಡನ್ ಸ್ಟಾರ್ ಗಣೇಶ್ ನಟನೆಯ 'ಸಖತ್', ಸುಮಂತ್ ಶೈಲೇಂದ್ರ ನಾಯಕರಾಗಿ ನಟಿಸಿರುವ 'ಗೋವಿಂದ ಗೋವಿಂದ' ಬಿಡುಗಡೆಯಾಗಲಿವೆ.


ರಾಜ್ ಬಿ. ಶೆಟ್ಟಿ

ಡಿಸೆಂಬರ್‌ನಲ್ಲೂ ಪರದೆಯ ಮೇಲೆ ಚಿತ್ರಗಳ ಹಬ್ಬವೇ. ಡಿ.3ಕ್ಕೆ ಶ್ರೀಮುರಳಿ ನಟನೆಯ 'ಮದಗಜ', ಡಿ.10ಕ್ಕೆ ಶರಣ್ ನಟನೆಯ 'ಅವತಾರ ಪುರುಷ', ಡಿ.24ಕ್ಕೆ 'ಡಾಲಿ' ಧನಂಜಯ್ ನಟನೆಯ 'ಬಡವ ರಾಸ್ಕಲ್', ಡಿ.31ಕ್ಕೆ ರಕ್ಷಿತ್ ಶೆಟ್ಟಿ ನಟನೆಯ '777 ಚಾರ್ಲಿ' ಬಿಡುಗಡೆಯಾಗಲಿವೆ. ನಿಖಿಲ್ ಕುಮಾರಸ್ವಾಮಿ ನಟನೆಯ 'ರೈಡರ್', ವಿ.ರವಿಚಂದ್ರನ್ ನಟನೆಯ 'ದೃಶ್ಯ–2', ಪವನ್ ಒಡೆಯರ್ ನಿರ್ದೇಶನದ 'ರೇಮೊ' ಕೂಡಾ ಡಿಸೆಂಬರ್‌ನಲ್ಲೇ ರಿಲೀಸ್ ಆಗುತ್ತಿದ್ದು, ಇವುಗಳ ಬಿಡುಗಡೆ ದಿನಾಂಕ ಇನ್ನೂ ನಿಗದಿಯಾಗಿಲ್ಲ.

'ಕೋವಿಡ್ ಭಯದಿಂದ ಚಿತ್ರರಂಗ ಹೊರಬಂದಿದೆ ಎನ್ನುವುದಕ್ಕೆ ಇಷ್ಟು ಚಿತ್ರಗಳು ತೆರೆ ಕಾಣುತ್ತಿರುವುದು ಸಾಕ್ಷಿಯಾಗಿದೆ. ಇವುಗಳಲ್ಲಿ ಬಹುತೇಕ ಚಿತ್ರಗಳು ನಗರ ಕೇಂದ್ರಿತವಾಗಿವೆ. ಪ್ರಸ್ತುತ ಬಿಡುಗಡೆಯಾಗಿರುವ ಚಿತ್ರಗಳಿಗೆ ಪ್ರೇಕ್ಷಕರ ಸಂಖ್ಯೆ ದಿನದಿಂದ ದಿನಕ್ಕೆ ಇಳಿಕೆಯಾಗುತ್ತಿದೆ. ಈಗಾಗಲೇ ಬಿಡುಗಡೆಯಾಗಿರುವ ಮತ್ತು ಬಿಡುಗಡೆಯಾಗಲಿರುವ ಚಿತ್ರಗಳಲ್ಲಿ ಯಾವುದಾದರೂ ಮೂರ್ನಾಲ್ಕು ಸಿನಿಮಾಗಳು 50 ದಿನ ಅಥವಾ ಅದಕ್ಕಿಂತ ಹೆಚ್ಚು ದಿನ ಪ್ರದರ್ಶನ ಕಂಡರೆ ಜನವರಿಯಿಂದ ಚಿತ್ರೋದ್ಯಮ ಮತ್ತಷ್ಟು ಚೇತರಿಕೆ ಕಾಣಬಹುದು' ಎನ್ನುತ್ತಾರೆ ವೀರೇಶ್ ಚಿತ್ರಮಂದಿರದ ಮಾಲೀಕ, ಕರ್ನಾಟಕ ಚಿತ್ರಪ್ರದರ್ಶಕರ ಸಂಘದ ಅಧ್ಯಕ್ಷರಾದ ಕೆ.ವಿ. ಚಂದ್ರಶೇಖರ್. ❖

'ನನ್ ಹೆಸ್ರು ಕಿಶೋರ....'



ನೈಜ ಘಟನೆಯನ್ನು ಆಧರಿಸಿ ಎಂ.ಡಿ.ಪಾರ್ಥಸಾರಥಿ ಅವರು ಪಾಥಿ ಫಿಲಂಸ್ ಮೂಲಕ ನಿರ್ಮಿಸಿರುವ ಮಕ್ಕಳ ಚಿತ್ರ 'ನನ್ ಹೆಸ್ರು ಕಿಶೋರ ಏಳ್ ಪಾಸ್ ಎಂಟು' ಇಂದು ತೆರೆ ಕಾಣುತ್ತಿದೆ.

2019–20ನೇ ಸಾಲಿನಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಆಯ್ಕೆಯಾಗಿದ್ದ ಏಕೈಕ ಮಕ್ಕಳ ಚಿತ್ರ ಇದಾಗಿದೆ. ಕಳೆದ ವರ್ಷವೇ ತೆರೆಗೆ ಬರಬೇಕಿದ್ದ ಈ ಚಿತ್ರವು ಕೋವಿಡ್ ಕಾರಣದಿಂದ ವಿಳಂಬವಾಗಿದೆ ಎಂದಿದೆ ಚಿತ್ರತಂಡ.

ಚಿತ್ರದ ಕುರಿತು ಮಾತನಾಡಿದ ನಿರ್ದೇಶಕ ಭಾರತಿ ಶಂಕರ್, 'ಇದೊಂದು ಸತ್ಯಘಟನೆ ಆಧಾರಿತ ಚಿತ್ರ. ಕೆಲವು ವರ್ಷಗಳ ಹಿಂದೆ ಕಲಬುರಗಿಯಲ್ಲಿ ಮಕ್ಕಳನ್ನು ಅಪಹರಿಸಿ, ಅವರ ಕಿರು ನಾಲಿಗೆ ಕತ್ತರಿಸಿ ಭಿಕ್ಷೆ ಬೇಡಲು ಕಳುಹಿಸುತ್ತಿದ್ದರು. ಇದನ್ನು ಪತ್ರಿಕೆಯ ಮೂಲಕ ತಿಳಿದ ನಾನು, ನಿರ್ಮಾಪಕರ ಬಳಿ ಈ ವಿಷಯದ ಕುರಿತು ಸಿನಿಮಾ ಮಾಡೋಣ ಎಂದಿದ್ದೆ. ಇದಕ್ಕೆ ಪಾರ್ಥಸಾರಥಿ ಅವರು ಒಪ್ಪಿದ್ದರು. ಯುವ ಕಥೆಗಾರ ಸುದೀಪ್ ಶರ್ಮ ಕಥೆ ಬರೆದಿದ್ದಾರೆ' ಎಂದರು.

'ಈ ಹಿಂದೆ 'ಸಿಂಹ ಹಾಕಿದ ಹೆಜ್ಜೆ' ಚಿತ್ರ ನಿರ್ಮಾಣ ಮಾಡಿದ್ದೆ. ಇದು ನನ್ನ ಎರಡನೇ ಚಿತ್ರ. ನಿರ್ದೇಶಕರು ಹೇಳಿದ ಕಥೆ ಹಿಡಿಸಿತು. ಎಲ್ಲಾ ಕಲಾವಿದರು ಅದ್ಭುತವಾಗಿ ನಟಿಸಿದ್ದಾರೆ. ಕುಟುಂಬ ಸಮೇತ ನೋಡಬಹುದಾದ ಚಿತ್ರ ನಮ್ಮದು' ಎಂದರು ಪಾರ್ಥಸಾರಥಿ. ಖ್ಯಾತ ನಟರಾದ ದತ್ತಣ್ಣ, ತಬಲನಾಣಿ, ಸಂಗೀತ, ಶಿವಾಜಿ ಯಾದವ್, ಡ್ರಾಮ ಜ್ಯೂನಿಯರ್ಸ್‌ನ ಮಕ್ಕಳಾದ ಮಹೇಂದ್ರ (ಕಿಶೋರ ಪಾತ್ರಧಾರಿ), ಅಮಿತ್, ಶಶಿ ಗೌಡ, ಮಂಜುನಾಥ್, ಮಿಥಾಲಿ ತಾರಾಬಳಗದಲ್ಲಿದ್ದಾರೆ. ನಾಯಕ ಪವನ್ ತೇಜ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಆರ್.ಕೆ. ಶಿವಕುಮಾರ್ ಛಾಯಾಗ್ರಹಣ ಹಾಗೂ ಕೆಂಪರಾಜು ಅವರ ಸಂಕಲನವಿರುವ ಈ ಚಿತ್ರಕ್ಕೆ ಲೋಕೇಶ್ ಗೌಡ ಸಂಭಾಷಣೆ ಬರೆದಿದ್ದಾರೆ. ❖



ಸುಭಾಷಿತ

ನೀವು ನಿಜವಾಗಿಯೂ ಇಷ್ಟಪಡುವ ಕೆಲಸವನ್ನು ಮಾಡಿದರೆ, ಆ ಕೆಲಸ ತುಂಬಾ ಸುಲಭವಾಗಿ ಆಗುತ್ತದೆ ಮತ್ತು ಅದರ ಹಿಂದಿನ ಉದ್ದೇಶವೂ ಬಹುತೇಕ ಈಡೇರುತ್ತದೆ.

–ಮಾರ್ಕ್ ಜುಕರ್‌ಬರ್ಗ್

ಫಿನ್‌ಟೆಕ್ ಉದ್ಯಮಕ್ಕೆ ಕಾರ್ಯಪಡೆ ತೆರೆಯಲಿವೆ ಹಲವು ಸಾಧ್ಯತೆಗಳು

ಕಳೆದ ಒಂದು ದಶಕದ ಅವಧಿಯಲ್ಲಿ ದೇಶದ ಜನರ ಬದುಕಿನಲ್ಲಿ ಅತ್ಯಂತ ಮಹತ್ವದ ಪರಿವರ್ತನೆಗಳನ್ನು ತಂದಿರುವ ಉದ್ಯಮಗಳ ಸಾಲಿನಲ್ಲಿ ಹಣಕಾಸು ತಂತ್ರಜ್ಞಾನ ಉದ್ಯಮವು ಖಂಡಿತವಾಗಿಯೂ ಮೊದಲ ಸಾಲಿನಲ್ಲಿ ನಿಲ್ಲುತ್ತದೆ. ಹಣಕಾಸು ಸೇವೆಗಳನ್ನು ತಂತ್ರಜ್ಞಾನದ ಸಹಾಯದಿಂದ ಜನರಿಗೆ ಬಹಳ ಹತ್ತಿರವಾಗಿಸಿರುವ ಫಿನ್‌ಟೆಕ್ ಉದ್ಯಮವು ಇಂದು ಬೃಹತ್ ಪ್ರಮಾಣದಲ್ಲಿ ಬೆಳೆದು ನಿಲ್ಲುವ ಆಶಾಭಾವನೆಯನ್ನು ದೇಶದ ಜನರಲ್ಲಿಯೂ, ನೀತಿ ನಿರೂಪಕರಲ್ಲಿಯೂ ಮೂಡಿಸಿದೆ. ವರ್ಷಗಳ ಹಿಂದೆ ಬ್ಯಾಂಕಿಗೆ ಹೋಗಿ ಅಗತ್ಯ ದಾಖಲೆಗಳನ್ನು ಕಾಗದದ ರೂಪದಲ್ಲಿ ನೀಡಿ, ಒಂದು ಖಾತೆ ತೆರೆಯಲು ದಿನಗಳ ಕಾಲ ಕಾಯುತ್ತಿದ್ದ ಜನಸಾಮಾನ್ಯ ಇಂದು ಅರ್ಧ ಗಂಟೆಯ ಅವಧಿಯಲ್ಲಿ ಖಾತೆಯೊಂದನ್ನು ತೆರೆಯಬಲ್ಲ; ಬ್ಯಾಂಕ್‌ಗೆ ಅಗತ್ಯವಿರುವ ದಾಖಲೆಗಳನ್ನು ತಾನು ಕುಳಿತಿರುವ ಸ್ಥಳದಿಂದಲೇ ಆನ್‌ಲೈನ್ ಮೂಲಕ ಸಲ್ಲಿಸಬಲ್ಲ. ಕಂಪನಿಯೊಂದರ ಷೇರುಗಳನ್ನು ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ಖರೀದಿಸಲು ಬ್ಯಾಂಕ್‌ನಲ್ಲಿ ಸಾಲುಗಟ್ಟಿ ನಿಲ್ಲುತ್ತಿದ್ದ, ದೊಡ್ಡ ಅರ್ಜಿಗಳನ್ನು ಕೂಲಂಕಷವಾಗಿ ಗಮನಿಸಿ ಭರ್ತಿ ಮಾಡುತ್ತಿದ್ದ ಸಣ್ಣ ಹೂಡಿಕೆದಾರ ಇಂದು ಅದೇ ಕೆಲಸವನ್ನು ತನ್ನ ಸ್ಮಾರ್ಟ್‌ಫೋನ್ ಮೂಲಕ ಐದೇ ನಿಮಿಷಗಳಲ್ಲಿ ಪೂರ್ಣಗೊಳಿಸಬಲ್ಲ. ಷೇರು ಮಾರುಕಟ್ಟೆಗಳಲ್ಲಿ ಹಣ ಹೂಡಿಕೆ ಮಾಡಲು ಸಾಧ್ಯವಿರುವುದು ದೊಡ್ಡ ಮೊತ್ತದ ಹಣ ಇರುವವರಿಗೆ ಮಾತ್ರ ಎಂದು ಭಾವಿಸಿದ್ದ ವ್ಯಕ್ತಿ ಇಂದು ಫಿನ್‌ಟೆಕ್ ಉದ್ಯಮ ಅಭಿವೃದ್ಧಿಪಡಿಸಿರುವ ಚೂಟಿ ಅಪ್ಲಿಕೇಷನ್‌ಗಳನ್ನು ಬಳಸಿ, ತನ್ನ ಕೈಯಲ್ಲಿ ಬರೀ ₹100 ಇದ್ದರೂ ಅದನ್ನು ಬಳಸಿ ವ್ಯವಸ್ಥಿತ ಹೂಡಿಕೆ ಆರಂಭಿಸಬಲ್ಲ. ಮನೆಯಿಂದಲೇ ಡಿ–ಮ್ಯಾಟ್ ಖಾತೆ ತೆರೆಯುವುದು, ಅಗತ್ಯ ವಿಮಾ ಉತ್ಪನ್ನಗಳನ್ನು ಮೊಬೈಲ್ ಮೂಲಕವೇ ಖರೀದಿಸುವುದು, ಹತ್ತು ಹಲವು ಬಗೆಯ ಬಿಲ್ ಪಾವತಿಗಳನ್ನು ಸ್ಮಾರ್ಟ್‌ಫೋನ್ ಮೂಲಕವೇ ಮಾಡುವುದು, ಸಾಲಕ್ಕೆ ಸ್ಮಾರ್ಟ್‌ಫೋನ್ ಮೂಲಕವೇ ಅರ್ಜಿ ಸಲ್ಲಿಸಿ ಕೆಲವೇ ಗಂಟೆಗಳಲ್ಲಿ ಸಾಲದ ಮೊತ್ತವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಿಸಿಕೊಳ್ಳುವುದು... ಹೀಗೆ ಹತ್ತು ಹಲವು ಸೇವೆಗಳನ್ನು ಪಡೆಯುವುದು ಇಂದು ಸುಲಭವಾಗಿದ್ದರ ಹಿಂದೆ ಫಿನ್‌ಟೆಕ್ ಉದ್ಯಮದ ಕೊಡುಗೆ ಇದೆ.



ಅವಕಾಶಗಳಿಗೆ ಮತ್ತು ಸವಾಲುಗಳಿಗೆ ಕಾರ್ಯಪಡೆ ಹೇಗೆ ಸ್ಪಂದಿಸುತ್ತದೆ ಎಂಬುದರ ಆಧಾರದ ಮೇಲೆ ಉದ್ಯಮದ ಬೆಳವಣಿಗೆ ನಿಂತಿದೆ

ಈ ಉದ್ಯಮದಲ್ಲಿ ಕರ್ನಾಟಕ ಹೊಂದಿರುವ ಮುಂಚೂಣಿ ಸ್ಥಾನವನ್ನು ಮುಂದೆಯೂ ಕಾಯ್ದುಕೊಳ್ಳುವ ಗುರಿಯೊಂದಿಗೆ ರಾಜ್ಯ ಸರ್ಕಾರವು ಕಾರ್ಯಪಡೆಯೊಂದನ್ನು ರಚಿಸಿದೆ. ಬ್ಯಾಂಕಿಂಗ್ ಸೇವೆಗಳ ತೊಟ್ಟಿಲು ಎಂಬ ಹೆಗ್ಗಳಿಕೆಯನ್ನು ಹೊತ್ತುಕೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಫಿನ್‌ಟೆಕ್ ಉದ್ಯಮಕ್ಕೆ ಸಂಬಂಧಿಸಿದ ತೆರೆಯ ಹಿಂದಿನ ಚಟುವಟಿಕೆಗಳು ದೊಡ್ಡ ಪ್ರಮಾಣದಲ್ಲಿ ನಡೆಯುವಂತೆ ಆಗಬೇಕು, ಈ ಉದ್ಯಮವು ಬೆಂಗಳೂರಿನ ಹೊರಗಡೆಯೂ ಬೆಳೆಯಬೇಕು ಎಂಬ ಉದ್ದೇಶ ಕೂಡ ಈ ಕಾರ್ಯಪಡೆಯನ್ನು ರಚಿಸಿರುವುದರ ಹಿಂದೆ ಇದೆ ಎಂದು ಸರ್ಕಾರವು ಹೇಳಿದೆ. ಇದು ಸ್ವಾಗತಾರ್ಹ. ಹಣಕಾಸು ತಂತ್ರಜ್ಞಾನ ವಲಯದ ಕಂಪನಿಗಳು ತಮ್ಮ ಬಂಡವಾಳ ಮೌಲ್ಯವನ್ನು ಹೆಚ್ಚಿಸಿಕೊಳ್ಳುತ್ತಿರುವ ಕಾಲಘಟ್ಟ ಇದು. ಈ ವಲಯದ ಹಲವು ಖಾಸಗಿ ಕಂಪನಿಗಳು, ತಮ್ಮ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿಸುವ ಮೂಲಕ ಹೆಚ್ಚು ಹೆಚ್ಚು ಬಂಡವಾಳ ಸಂಗ್ರಹಿಸುತ್ತಿವೆ. ಸಣ್ಣ ಹೂಡಿಕೆದಾರರು ಕೂಡ ಇಂತಹ ಕಂಪನಿಗಳಲ್ಲಿ ಹಣ ಹೂಡಿಕೆ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರದ ಆಶಯಗಳು ಈಡೇರಿದ್ದೇ ಆದಲ್ಲಿ ಫಿನ್‌ಟೆಕ್ ಉದ್ಯಮವೂ ಬೆಳೆಯಲಿದೆ, ಅಲ್ಲಿ ಹಣ ಹೂಡಿಕೆ ಮಾಡುತ್ತಿರುವ ಸಣ್ಣ ಹೂಡಿಕೆದಾರರು ಕೂಡ ಬೆಳವಣಿಗೆ ಕಾಣಲಿದ್ದಾರೆ. ಉದ್ಯಮವು ದೊಡ್ಡ ಪ್ರಮಾಣದಲ್ಲಿ ಉದ್ಯೋಗವನ್ನೂ ಸೃಷ್ಟಿಸಿಕೊಡಬಹುದು. ಉದ್ಯಮದ ಬೆಳವಣಿಗೆಗೆ ಸರ್ಕಾರ ರಚಿಸಿರುವ ಕಾರ್ಯಪಡೆಯು ಹತ್ತು ಹಲವು ಸಾಧ್ಯತೆಗಳನ್ನು ತನ್ನ ಒಡಲೊಳಗೆ ಇರಿಸಿಕೊಂಡಿದೆ. ಕಾರ್ಯಪಡೆಯು ಅವಕಾಶಗಳಿಗೆ ಮತ್ತು ಸವಾಲುಗಳಿಗೆ ಹೇಗೆ ಸ್ಪಂದಿಸುತ್ತದೆ ಎಂಬುದರ ಆಧಾರದ ಮೇಲೆ ಉದ್ಯಮದ ಬೆಳವಣಿಗೆ ನಿಂತಿದೆ.

ಫಿನ್‌ಟೆಕ್ ಉದ್ಯಮದ ಕೆಲವು ಕಂಪನಿಗಳು ಜನಪ್ರಿಯತೆಯ ವಿಚಾರದಲ್ಲಿ ಅಸದೃಶ ಸಾಧನೆ ತೋರಿದ್ದರೂ ಹಣಕಾಸಿನ ಲಾಭ ಗಳಿಕೆಯ ವಿಚಾರದಲ್ಲಿ ತೀರಾ ಹಿಂದೆ ಬಿದ್ದಿರುವ ನಿದರ್ಶನಗಳು ಇವೆ. ಕೆಲವು ಕಂಪನಿಗಳು ದೇಶ ವಿದೇಶಗಳಿಂದ ಬಂಡವಾಳ ಆಕರ್ಷಿಸಿದ್ದರೂ ಇದುವರೆಗೆ ಅವು ಹೂಡಿಕೆದಾರರಿಗೆ ಲಾಭ ತಂದುಕೊಟ್ಟಿಲ್ಲ. ಪರಿಸ್ಥಿತಿ ಹೀಗಿರುವಾಗ, ಬಂಡವಾಳ ಹೂಡಿಕೆದಾರರು ಎಷ್ಟು ದಿನಗಳವರೆಗೆ ಹಣ ಸುರಿಯುತ್ತ ಇರುತ್ತಾರೆ ಎನ್ನಲು ಸಾಧ್ಯವಿಲ್ಲ. ಬಂಡವಾಳ ತೊಡಗಿಸುವ ಹಂತವನ್ನು ದಾಟಿ ಫಿನ್‌ಟೆಕ್ ಕಂಪನಿಗಳು ಷೇರುದಾರರಿಗೆ, ಹೂಡಿಕೆದಾರರಿಗೆ ಲಾಭ ತಂದುಕೊಡುವ ಹಂತಕ್ಕೆ ಬರಬೇಕು. ಆಗಮಾತ್ರ ಕಂಪನಿಗಳು ಸುಸ್ಥಿರ ಆಗಬಲ್ಲವು. ಅವು ಸುಸ್ಥಿರವಾದಾಗ ಮಾತ್ರ ಉದ್ಯಮವು ಇನ್ನಷ್ಟು ದೊಡ್ಡ ಮಟ್ಟದಲ್ಲಿ ಬೆಳವಣಿಗೆ ಕಾಣಬಹುದು. ಇಡೀ ಉದ್ಯಮವು ಅಂಥದ್ದೊಂದು ಹಂತವನ್ನು ಪ್ರವೇಶಿಸಲು ಈ ಕಾರ್ಯಪಡೆಯು ದಾರಿ ತೋರಬಹುದೇ? ಫಿನ್‌ಟೆಕ್ ಉದ್ಯಮದ ವಹಿವಾಟಿನ ಸ್ವರೂಪ ಹಾಗೂ ಅದು ನೀಡುತ್ತಿರುವ ಸೇವೆಗಳು ದೊಡ್ಡ ಮಟ್ಟದಲ್ಲಿ ಲಾಭ ತಂದುಕೊಡುವ ರೀತಿಯಲ್ಲಿ ಇಲ್ಲ ಎಂಬ ವಾದವೊಂದು ಇದೆ. ಇದರ ಬಗ್ಗೆಯೂ ಸಂಬಂಧಪಟ್ಟವರು ಗಮನ ಹರಿಸುವುದು ಸೂಕ್ತ. ದೇಶದಲ್ಲಿ ಬ್ಯಾಂಕ್ ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳ (ಎನ್‌ಬಿಎಫ್‌ಸಿ) ಜಾಲ ಬಹಳ ದೊಡ್ಡದಾಗಿಯೇ ಇದ್ದರೂ ಬ್ಯಾಂಕಿಂಗ್‌ನ ಎಲ್ಲ ಬಗೆಯ ಸೇವೆಗಳ ಪ್ರಯೋಜನ ಪಡೆದಿರದ ವರ್ಗವೂ ಇದೆ. ಫಿನ್‌ಟೆಕ್ ಕಂಪನಿಗಳು ಈ ವರ್ಗವನ್ನು ಕೂಡ ತಲುಪುವ ಭರವಸೆ ಮೂಡಿಸಿವೆ. ಹಾಗಾಗಿ, ಫಿನ್‌ಟೆಕ್ ಉದ್ಯಮದ ಬೆಳವಣಿಗೆ ಅಂದರೆ ಹಣಕಾಸು ಸೇವೆಗಳ ಒಳಗೊಳ್ಳುವಿಕೆಗೆ ಆದ್ಯತೆ ನೀಡುವುದೂ ಆಗಿರುತ್ತದೆ. ಇವೆಲ್ಲವೂ ಸರ್ಕಾರ ಮತ್ತು ಕಾರ್ಯಪಡೆಯು ಎಷ್ಟರಮಟ್ಟಿಗೆ ಸ್ಪಂದನಶೀಲವಾಗಿ ಮುಂದಡಿ ಇರಿಸುತ್ತವೆ ಎಂಬುದನ್ನು ಆಧರಿಸಿವೆ.

ದಿನದ ಟ್ವೀಟ್

ಹೊಸತು ಬರುತ್ತಾ?



ನಾವು ಚಿಕ್ಕವರಿದ್ದಾಗ ಕನ್ನಡತನ, ಕನ್ನಡ ಗುರುತಿನ ಭಾಗವಾಗಿ ನೋಡುತ್ತಿದ್ದ ಸಾಹಿತ್ಯ, ಸಿನಿಮಾ, ಮಾಧ್ಯಮ, ರಂಗಭೂಮಿಯ ಬಹುತೇಕ ಸಾಧಕರು ಇಂದು ಸೋಷಿಯಲ್ ಮೀಡಿಯಾದ ಎಡ-ಬಲದ ಕತ್ತರಿಗೆ ಸಿಲುಕಿ ತುಂಡುತುಂಡಾಗಿ ಹೋಗಿದ್ದಾರೆ. ಮುರಿದ ಪ್ರತಿಮೆಗಳ ಜಾಗದಲ್ಲಿ ಹೊಸತು ಬರುತ್ತಾ?

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ



ಸಂಸತ್ತಿನಲ್ಲಿ ‘ಗುಣಮಟ್ಟದ ಚರ್ಚೆಗಳು’ ನಡೆಯಬೇಕಾದ ಅಗತ್ಯವನ್ನು ಪ್ರಧಾನಿ ಒತ್ತಿ ಹೇಳಿರುವುದನ್ನು ಓದುವುದು ಆಸಕ್ತಿದಾಯಕ ಸಂಗತಿಯಾಗಿದೆ. ಇಂತಹ ಚರ್ಚೆಗಳಿಗೆ ಪ್ರತ್ಯೇಕ ಸಮಯವನ್ನು ನಿಗದಿಗೊಳಿಸುವಂತೆಯೂ ಅವರು ಸಲಹೆ ನೀಡಿದ್ದಾರೆ. ಪ್ರಶ್ನೆಯೆಂದರೆ, ‘ಸಂಸತ್ತಿನಲ್ಲಿ ನಡೆಯುವ ಚರ್ಚೆಯಲ್ಲಿ ಪ್ರಧಾನಿ ಎಂದಾದರೂ ಭಾಗವಹಿಸುತ್ತಾರೆಯೇ?’

ಪಿ. ಚಿದಂಬರಂ, ರಾಜ್ಯಸಭಾ ಸದಸ್ಯ, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಮಂಗಳವಾರ, 19-11-1996

• ಸಚಿವ ನಾಗಮಾರಪಳ್ಳಿ ಹತ್ಯೆಗೆ ವಿಫಲ ಯತ್ನ

ಬೀದರ್, ನ. 18– ಬೀದರ್ ಜಿಲ್ಲಾ ಉಸ್ತುವಾರಿ ಮತ್ತು ಅರಣ್ಯ ಖಾತೆ ಸಚಿವ ಗುರುಪಾದಪ್ಪ ನಾಗಮಾರಪಳ್ಳಿ ಅವರನ್ನು ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಇಂದು ಮಧ್ಯಾಹ್ನ 1.40 ಗಂಟೆಗೆ ಹಾಡಹಗಲೇ ಕೊಲೆ ಮಾಡಲು ನಡೆಸಿದ ಯತ್ನ ಪೊಲೀಸರ ಸಕಾಲಿಕ ಮಧ್ಯ ಪ್ರವೇಶದಿಂದ ವಿಫಲವಾಗಿದೆ.

ಸಚಿವ ಗುರುಪಾದಪ್ಪ ನಾಗಮಾರಪಳ್ಳಿ ಅವರು ಜಿಲ್ಲಾ ಮಟ್ಟದ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಮಲ್ಲಿಕಾರ್ಜುನ ಮಾಣಿಕ ಪಾಟೀಲ್ (35) ಎಂಬ ಯುವಕ ಒಳನುಗ್ಗಿ ಸಚಿವರ ಕುತ್ತಿಗೆಗೆ ಬ್ಲೇಡ್ ಹಾಕಲು ಯತ್ನಿಸಿದಾಗ ಅವರ ಶರ್ಟ್ ಹರಿಯಿತು. ಅಷ್ಟರಲ್ಲಿ ಸಭೆಯಲ್ಲಿ ಹಾಜರಿದ್ದ ಡಿವೈಎಸ್‌ಪಿ ಸಿದ್ರಾಮಪ್ಪ ಅವರು ಆರೋಪಿಯನ್ನು ಹಿಡಿದುಕೊಂಡರು. ಆತ ಅವರನ್ನು ಜೋರಾಗಿ ತಳ್ಳಿದ. ತಕ್ಷಣ ಎಲ್ಲಾ ಪೊಲೀಸ್ ಸಿಬ್ಬಂದಿ ಮುಗಿಬಿದ್ದು ಆರೋಪಿಯನ್ನು ಹಿಡಿದರು ಎಂದು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಚ್.ಎಸ್. ವೆಂಕಟೇಶ್ ಅವರು ಘಟನೆಯ ವಿವರಗಳನ್ನು ಪತ್ರಕರ್ತರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 19-11-1971

• ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ವಿಸ್ತರಣೆ: ‘ರಾಜಕೀಯ ಹಸ್ತಕ್ಷೇಪ’ದ ಕಟು ಟೀಕೆ

ನವದೆಹಲಿ, ನ. 18– ಮೈಸೂರು ರಾಜ್ಯದಲ್ಲಿ ನವೆಂಬರ್ 25ರಿಂದ ಆರು ತಿಂಗಳ ಕಾಲ ರಾಷ್ಟ್ರಪತಿ ಆಡಳಿತವನ್ನು ವಿಸ್ತರಿಸಲು ಲೋಕಸಭೆಯು ಇಂದು ಒಪ್ಪಿಗೆ ಕೊಟ್ಟಿತು.

ಇದಕ್ಕೆ ಸಂಬಂಧಿಸಿದಂತೆ ಗೃಹ ವ್ಯವಹಾರಗಳ ರಾಜ್ಯ ಸಚಿವ ಕೆ.ಸಿ. ಪಂತ್ ಅವರು ಮಂಡಿಸಿದ ಶಾಸನಬದ್ಧ ನಿರ್ಣಯವನ್ನು ಸ್ವಲ್ಪಕಾಲ ಚರ್ಚಿಸಿದ ನಂತರ ಸಭೆಯು ಅಂಗೀಕರಿಸಿತು.

ಅಂತರರಾಜ್ಯ ಜಲ ವಿವಾದವನ್ನು ಬಗೆಹರಿಸಲು ಮೈಸೂರು ರಾಜ್ಯಪಾಲರು ಪ್ರಯತ್ನಿಸುವುದು ಯುಕ್ತವಾಗುವುದಿಲ್ಲ ಎಂದು ಪಂತ್ ಹೇಳಿದರು.

ಅಕ್ಕಪಕ್ಕದ ರಾಜ್ಯಗಳೊಡನೆ ಚರ್ಚೆ ನಡೆಸುವುದು ಮತ್ತು ವಿವಾದವನ್ನು ಬಗೆಹರಿಸುವುದು ಚುನಾಯಿತ ಸರ್ಕಾರಕ್ಕೆ ಮಾತ್ರ ಸಾಧ್ಯ ಎಂದೂ ಅವರು ಹೇಳಿದರು.

ಪ್ರತಿವಾದಿಯ ಕ್ಷಮೆ ಯಾಚನೆಗೆ ಆಗ್ರಹಿಸುವವನ ಬೌದ್ಧಿಕ ಅಸಾಮರ್ಥ್ಯ ಬಯಲಾಗುತ್ತಿರುತ್ತದೆ

ಕ್ಷಮೆಯಾಚನೆ ಮತ್ತು ತಾತ್ವಿಕ ಸಮರ್ಥನೆ



ವಿಶ್ಲೇಷಣೆ

ಡಾ. ಟಿ.ಎನ್.ವಾಸುದೇವಮೂರ್ತಿ

ಇಂದು ನಮ್ಮ ಧಾರ್ಮಿಕ ನಂಬಿಕೆ- ಭಾವನೆಗಳು ಹಿಂದೆಂದಿಗಿಂತಲೂ ದುರ್ಬಲವಾಗಿವೆ. ಒಂದು ಸಣ್ಣ ಪ್ರಚೋದನೆಯಿಂದಲೂ ನಾವು ನಮ್ಮ ನಂಬಿಕೆ-ಭಾವನೆಗಳಿಗೆ ಧಕ್ಕೆ ಉಂಟು ಮಾಡಿಕೊಳ್ಳುವ ಸ್ಥಿತಿಗಿಳಿದಿದ್ದೇವೆ. ಎಲ್ಲಕ್ಕಿಂತ ದುರದೃಷ್ಟಕರ ಸಂಗತಿ ಎಂದರೆ, ಹೀಗೆ ಧಕ್ಕೆ ಉಂಟು ಮಾಡಿಕೊಂಡು ಹಿಂಸಾತ್ಮಕವಾಗಿ ಪ್ರತಿಕ್ರಿಯಿಸುವ ನಮ್ಮ ವ್ಯಗ್ರತೆಯನ್ನು ನಾವು ದೌರ್ಬಲ್ಯವೆಂದು ಮನಗಾಣುವ ಬದಲಾಗಿ ಅದುವೇ ನಮ್ಮ ಶಕ್ತಿ ಎಂದು ಹೆಮ್ಮೆಪಡುತ್ತಿರುವುದು.

ಭಾರತೀಯ ಸಂಸ್ಕೃತಿ ಬೆಳೆದಿರುವುದೇ ಪ್ರಶ್ನಿಸುವ ಮೂಲಕ, ಪ್ರತಿಯೊಂದನ್ನೂ ಅನುಮಾನಿಸುವ ಮೂಲಕ. ಋಗ್ವೇದದ ನಾಸದೀಯ ಸೂಕ್ತದ ಒಂದು ಮಂತ್ರವು ದೈವದ ಸರ್ವಜ್ಞತ್ವ, ಸರ್ವವ್ಯಾಪಿತ್ವಗಳನ್ನೂ ಸಂದೇಹಿಸುತ್ತದೆ. ಆ ಮಂತ್ರವನ್ನು (ಇಯಂ ವಿಸೃಷ್ಟಿರ್ಯತ ಆ ಬಭೂವ... ಯದಿ ವಾ ನ ವೇದ) ಕುವೆಂಪು ಹೀಗೆ ಅನುವಾದಿಸಿದ್ದಾರೆ: ‘ಎತ್ತಣಿಂದಾದುದೀ ವಿಸೃಷ್ಟಿ? ಅವನಿಂದಲೇ ಮೇಣ್ ಬಂದುದೋ, ಅವನಿಂದಲ್ಲವೋ? ಆರು ಆ ಪರಮ ವ್ಯೋಮದ ಅಧ್ಯಕ್ಷನೋ ಅವನಿಗೆ ಮಾತ್ರವೇ ಅದು ಗೊತ್ತು; ಅಥವಾ ಅವನಿಗೂ ಅದು ಗೊತ್ತಿಲ್ಲವೋ ಏನೋ!’ (ಗುರುವಿನೊಡನೆ ದೇವರಡಿಗೆ). ಈ ಪ್ರಪಂಚದಲ್ಲಿ ದೈವ-ಶಕ್ತಿಯನ್ನೂ ಸಂದೇಹಿಸಬಲ್ಲ ಧರ್ಮಗ್ರಂಥವೇನಾದರೂ ಇದ್ದಲ್ಲಿ ಅದು ಪ್ರಾಯಶಃ ಋಗ್ವೇದವೊಂದೇ ಇರಬೇಕು.

ಪರಮತತ್ವದ ಜಿಜ್ಞಾಸೆ ಮಾಡುವ ಉಪನಿಷತ್ತುಗಳಿಗೂ ಪ್ರಶ್ನಿಸುವಿಕೆಯೇ ಜೀವಾಳವಾಗಿದೆ. ಪ್ರಶ್ನಿಸುವಾಗ ಕೆಲವು ಸಲ ಜಿಜ್ಞಾಸು ಅಜ್ಞಾನಾಂಧಕಾರದಲ್ಲಿ ಮುಳುಗಿ, ತಪ್ಪು ಧೋರಣೆಯಿಂದ ಪ್ರಶ್ನಿಸಬಹುದು. ಸಭ್ಯತೆ, ಶಿಷ್ಟಾಚಾರಗಳನ್ನು ಮೌಲ್ಯವೆಂದು ಭಾವಿಸುವ ನೈತಿಕವಾದಿಗಳು ಅದನ್ನು ಅಧಿಕಪ್ರಸಂಗತನವೆಂದು ಕರೆದು ಜರಿಯಬಹುದು. ಆದರೆ ಲೌಕಿಕ ಶಿಷ್ಟಾಚಾರವನ್ನು ಗಂಭೀರವಾಗಿ ತೆಗೆದುಕೊಳ್ಳದ ನಮ್ಮ ತತ್ವಚಿಂತಕರು ಅದನ್ನು ಹಾಗೆ ಪರಿಭಾವಿಸುವುದಿಲ್ಲ. ದುಃಖ- ವಿಷಾದಗಳಲ್ಲಿ ಮುಳುಗಿದ್ದ ಅರ್ಜುನ ಜ್ಞಾನಿಯಂತೆ ಮಾತನಾಡುತ್ತಲೇ ತನ್ನೊಳಗಿನ ದ್ವಂದ್ವ, ಅಜ್ಞಾನಗಳನ್ನು ಪ್ರದರ್ಶಿಸಿದಾಗ ಶ್ರೀಕೃಷ್ಣ ‘ಮಹಾ ಪ್ರಜ್ಞಾವಂತನಂತೆ ಮಾತನಾಡುತ್ತಿರುವೆಯಲ್ಲ!’ (ಗೀ. 2.11) ಎಂದು ಅರ್ಜುನನನ್ನು ತಮಾಷೆ ಮಾಡಿದನೇ ವಿನಾ ‘ನನ್ನೆದುರು ಮಹಾಜ್ಞಾನಿಯಂತೆ ಮಾತನಾಡುತ್ತಿರುವ ನೀನು ಕ್ಷಮೆ ಕೋರಬೇಕು’ ಎಂದು ಆಗ್ರಹಿಸಲಿಲ್ಲ. ಹಿಂದೂ ಧರ್ಮದಲ್ಲಷ್ಟೇ ಅಲ್ಲ, ಬೌದ್ಧ, ಜೈನ ಮುಂತಾದ ಭಾರತದ ಎಲ್ಲ ಧಾರ್ಮಿಕ ಧಾರೆಗಳಲ್ಲೂ ಈ ಬೌದ್ಧಿಕ ಔದಾರ್ಯವನ್ನು ಕಾಣಬಹುದು.

ಪಂಪನ ಆದಿಪುರಾಣದಲ್ಲಿ ಮಹಾಮತಿ, ಶತಮತಿ, ಸಂಭಿನ್ನಮತಿ ಎಂಬ ಮೂವರು ಯಥಾರ್ಥವಾದಿಗಳು ಆದಿತೀರ್ಥಂಕರನಾಗಲಿದ್ದ ಸ್ವಯಂಬುದ್ಧನ ಜೊತೆ ವಾಗ್ವಾದ ನಡೆಸಿದ ಒಂದು ಪ್ರಸಂಗ ಬರುತ್ತದೆ. ಈ ಮೂವರೂ ಸ್ವಯಂಬುದ್ಧನನ್ನು ನಾನಾ ರೀತಿಗಳಲ್ಲಿ ಪ್ರಚೋದಿಸುತ್ತಾರೆ, ಅವನು ನಂಬಿದ್ದ ಧರ್ಮವನ್ನು ವಿಡಂಬಿಸುತ್ತಾರೆ. ಅವನ ನಂಬಿಕೆಯನ್ನೂ ನಿಂದಿಸಿ ಅವಹೇಳನ ಮಾಡುತ್ತಾರೆ. ಆದರೆ ಅವರ ಅಭಿಪ್ರಾಯಗಳಿಂದ ಸ್ವಯಂಬುದ್ಧನ ಭಾವನೆಗೆ ಧಕ್ಕೆಯಾಗಲಿಲ್ಲ, ಅವರ ವಿಷಯದಲ್ಲಿ ಅವನು ಆಕ್ರಮಣಕಾರಿಯೂ ಆಗಲಿಲ್ಲ. ಬದಲಾಗಿ ಪಂಪನೇ ಹೇಳುವಂತೆ ಅವರೊಂದಿಗೆ ‘ಮೃದುಮಧುರ ಗಂಭೀರ ಧ್ವನಿ’ಯಿಂದ ವಾಗ್ವಾದ ನಡೆಸಿ ಅವರನ್ನು ಪರಾಭವಗೊಳಿಸಿದ (ಆದಿಪುರಾಣ 2.10).

ಭಾರತೀಯ ತತ್ವಚಿಂತಕರು ಇಂತಹ ಟೀಕೆ-ನಿಂದನೆಗಳನ್ನು ‘ಪೂರ್ವಪಕ್ಷ’ ಎಂದು ಕರೆಯುತ್ತಾರೆ. ತಮ್ಮ ವಿಚಾರವನ್ನು ಮಂಡಿಸಲು ಇದನ್ನೊಂದು ಹಿನ್ನೆಲೆಯಂತೆ ಬಳಸಿಕೊಳ್ಳುತ್ತಾರೆ. ಆದಿಶಂಕರ, ಅಲ್ಲಮ, ಗೋರಕ್ಷ ಮುಂತಾದ ಅನುಭಾವಿಗಳು ಇಂತಹ ಪೂರ್ವಪಕ್ಷಿಗಳನ್ನು ಹುಡುಕುತ್ತಾ ದೇಶ-ದುದ್ದಗಲಕ್ಕೂ ಸಂಚರಿಸಿದ್ದರು. ಅಂತಹ ಪೂರ್ವ-ಪಕ್ಷಿಗಳು ದೊರೆತಾಗ ಅವರೊಡನೆ ವಾರಗಟ್ಟಲೆ, ತಿಂಗಳುಗಟ್ಟಲೆ ಉತ್ಸಾಹದಿಂದ ವಾಕ್ಯಾರ್ಥ ನಡೆಸುತ್ತಿದ್ದರು. ಮಾಹಿಷ್ಮತೀ ನಗರದಲ್ಲಿ ಮಂಡನಮಿಶ್ರನೆಂಬ ಹೆಸರಿನ ವೈದಿಕನೊಂದಿಗೆ ಆದಿಶಂಕರರು ವಾರಗಟ್ಟಲೆ ವಾಗ್ವಾದ ನಡೆಸಿದ್ದರು. ಹೀಗೆ ವಾಗ್ವಾದ ನಡೆಸುವಾಗಲೂ ಅವರಿಬ್ಬರೂ ಪರಸ್ಪರರನ್ನು ವೈರಿಗಳಂತೆ ಕಾಣುತ್ತಿರಲಿಲ್ಲ. ವಾಗ್ವಾದಕ್ಕೆ ತನ್ನ ಮನೆಬಾಗಿಲಿಗೆ ಬಂದಿದ್ದ ಶಂಕರರು ಮತ್ತು ಅವರ ಶಿಷ್ಯರಿಗೆ ಸಂಸಾರವಂದಿಗನಾದ ಮಂಡನಮಿಶ್ರ ಅನ್ನ- ಆಶ್ರಯ ಕೊಟ್ಟು ಸಲಹಿದ್ದ.

ಪೂರ್ವಮೀಮಾಂಸಕಾರನಾದ ಕುಮಾರಿಲಭಟ್ಟ ತನ್ನ ಬೌದ್ಧಗುರು ಧರ್ಮಕೀರ್ತಿಯನ್ನು ವಾಗ್ವಾದದಲ್ಲಿ ಸೋಲಿಸಿದ್ದ. ಶಿಷ್ಯನಿಂದ ಸೋತೆನೆಂಬ ಖೇದದಿಂದ ಧರ್ಮಕೀರ್ತಿ ಆತ್ಮಹತ್ಯೆ ಮಾಡಿಕೊಂಡಾಗ, ಗುರುಹತ್ಯೆಗೆ ಕಾರಣನಾದೆನಲ್ಲ ಎಂಬ ವಿಷಾದದಿಂದ ಕುಮಾರಿಲನೂ ಅಗ್ನಿಪ್ರವೇಶ ಮಾಡಿದ್ದ. ಶಿಷ್ಯನಿಂದ (ಅಥವಾ ಯಾರಿಂದಲೇ ಆಗಲಿ) ವಾಕ್ಯಾರ್ಥದಲ್ಲಿ ಸೋಲುಣ್ಣುವುದು ಅವಮಾನವಲ್ಲ. ಗುರು ಸತ್ತನೆಂದು ಶಿಷ್ಯನೂ ಗುರುವಿನ ಹಾದಿ ಹಿಡಿಯುವುದು ಸಮರ್ಥನೀಯವಲ್ಲ; ನಿಜ. ಆದರೆ ನಮ್ಮ ತತ್ವಜ್ಞಾನಿಗಳ ನಡುವೆ ನೂರೆಂಟು ತಾತ್ವಿಕ ಭಿನ್ನಾಭಿಪ್ರಾಯಗಳಿದ್ದರೂ ವೈಯಕ್ತಿಕವಾಗಿ ಅವರ ನಡುವೆ ಗೌರವ, ಸಹಾನುಭೂತಿ ಮತ್ತು ಸೌಹಾರ್ದಯುತವಾದ ಸಂಬಂಧವಿತ್ತು ಎಂಬುದು ಇಂತಹ ನಿದರ್ಶನಗಳಿಂದ ವ್ಯಕ್ತವಾಗುತ್ತದೆ.



ಭಾರತೀಯ ಪರಂಪರೆಯಲ್ಲಿ ಎಲ್ಲವೂ ಸರಿಯಿತ್ತು, ಎಲ್ಲವೂ ಉದಾತ್ತವಾದುದೇ ಆಗಿತ್ತು ಎಂದೇನೂ ಅಲ್ಲ. ತನ್ನ ಶಿಷ್ಯ ಶ್ರೀರಾಮಾನುಜ ಪ್ರಭಾವಶಾಲಿಯಾಗಿ, ಮಹಾ ಮೇಧಾವಿಯಾಗಿ ಬೆಳೆಯುತ್ತಿದ್ದಾನೆಂಬ ಕಾರಣಕ್ಕೆ ಶಿಷ್ಯನನ್ನು ಕೊಲ್ಲುವ ಹುನ್ನಾರ ಮಾಡಿದ ಯಾದವ ಪ್ರಕಾಶನಂತಹ ಗುರುವಿನ ಪರಂಪರೆಯೂ ನಮ್ಮಲ್ಲುಂಟು. ಶೈವರು ವೈಷ್ಣವರನ್ನು, ವೈಷ್ಣವರು ಮತ್ತೊಂದು ಪಂಥದವರನ್ನು ಕೊಂದ, ಒಬ್ಬರ ಪ್ರಾರ್ಥನಾ ಮಂದಿರವನ್ನು ಮತ್ತೊಬ್ಬರು ಧ್ವಂಸಗೊಳಿಸಿದ ಕೆಟ್ಟ ನಿದರ್ಶನಗಳೂ ಹೇರಳವಾಗಿ ನಮ್ಮಲ್ಲಿ ಸಿಗುತ್ತವೆ. ಆದರೆ ನಾನಾ ಜಾತಿ, ಧರ್ಮ, ನಂಬಿಕೆಗಳ ನಡುವೆ ಸಂಘರ್ಷ ಏರ್ಪಟ್ಟಿರುವ ಕಾಲಮಾನದಲ್ಲಿ ಬದುಕುತ್ತಿರುವ ನಮಗೆ ನಮ್ಮ ಪರಂಪರೆಯ ಉದಾತ್ತವಾದ ಮುಖ ಆದರ್ಶವಾಗಬೇಕಲ್ಲದೇ ಅದರ ನೀಚತನ ಪ್ರೇರಣೆಯಾಗಬಾರದು.

ನಮ್ಮ ನಂಬಿಕೆ, ವಿಚಾರಗಳನ್ನು ಪ್ರಶ್ನಿಸುವ ಶಕ್ತಿಗಳು ವಿಜೃಂಭಿಸುವಾಗ- ಈ ಹಿಂದೆ ಹೇಳಿದಂತೆ- ಶಂಕರ, ಅಲ್ಲಮ, ಗೋರಕ್ಷರಂತೆ ‘ಕೊನೆಗೂ ಒಬ್ಬ ಪೂರ್ವಪಕ್ಷಿ ದೊರೆತನಲ್ಲ’ ಎಂದು ಸಂಭ್ರಮಿಸಬೇಕಲ್ಲದೇ ಭಾವನೆಗೆ ವೃಥಾ ಧಕ್ಕೆ ಉಂಟುಮಾಡಿಕೊಳ್ಳಬಾರದು. ಭಾವನೆಗೆ ಧಕ್ಕೆ ಉಂಟು ಮಾಡಿಕೊಳ್ಳುವವನು ಅಥವಾ ತನ್ನನ್ನು ಪ್ರಶ್ನಿಸಿದವನು ತನ್ನಲ್ಲಿ ಕ್ಷಮಾಪಣೆ ಯಾಚಿಸಬೇಕೆಂದು ಆಗ್ರಹಿಸುವವನು ತಾನು ಪೂರ್ವಪಕ್ಷಿಗೆ ತಕ್ಕುದಾದ ಪ್ರತಿವಾದವನ್ನು ಹೂಡುವಷ್ಟು ಬೌದ್ಧಿಕ ಸಾಮರ್ಥ್ಯ ಹೊಂದಿಲ್ಲವೆಂದು ಸಾಬೀತು ಪಡಿಸುತ್ತಿರುತ್ತಾನೆ.

‘ಜ್ಞಾನವು ವಿಶ್ವದ ಎಲ್ಲ ದಿಕ್ಕುಗಳಿಂದಲೂ ತನ್ನತ್ತ ಹರಿದು ಬರಲಿ’ ಎಂಬ ಋಗ್ವೇದ ಮಂತ್ರವನ್ನು ಪಠಿಸುವವರು ಜಗತ್ತಿನ ಯಾವ ಮೂಲೆಯಿಂದ ಎಂತಹುದೇ ಸವಾಲು ಬಂದರೂ ಅದನ್ನು ಎದುರಿಸಬಲ್ಲೆವೆಂಬ ಛಾತಿಯನ್ನೂ ಬೆಳೆಸಿಕೊಳ್ಳಬೇಕಾಗುತ್ತದೆ. ಇಲ್ಲವಾದಲ್ಲಿ ಬೌದ್ಧಿಕ ದಿವಾಳಿತನ ಹೊಂದಿ ತನಗರಿವಿಲ್ಲದೆಯೇ ಹಿಂಸಾಪ್ರವೃತ್ತಿಯ ಸೆಳೆತಕ್ಕೆ ಒಳಗಾಗಬೇಕಾಗುತ್ತದೆ.

ಘನತೆಯಿಲ್ಲದ ಪ್ರಶ್ನೆ ಕೇಳುವ, ವೈಯಕ್ತಿಕ ದಾಳಿಗೆ ಮುಂದಾಗುವ ಪೂರ್ವಪಕ್ಷಿಯು ತನ್ನ ಸೋಲನ್ನು ತಾನೇ ಒಪ್ಪಿಕೊಂಡಿರುತ್ತಾನೆ, ತನ್ನ ಬೌದ್ಧಿಕ ಕ್ಷಾಮವನ್ನು ಅದಾಗಲೇ ಬಯಲು ಮಾಡಿಕೊಂಡಿರುತ್ತಾನೆ. ಅಂತಹವರ ಮೇಲೆ ಸೇಡು ತೀರಿಸಿಕೊಳ್ಳಲು ಮುಂದಾಗುವವರಿಗೆ ಅಥವಾ ತನ್ನ ಬದಲಾಗಿ ದೇವರೇ ಸೇಡು ತೀರಿಸಿಕೊಳ್ಳಲಿ ಎಂದು ಬಯಸುವವರಿಗೆ ಎದುರಾಳಿಯ ಸೋಲನ್ನು ಕಾಣುವ ದೃಷ್ಟಿ ಇರುವುದಿಲ್ಲ; ಬದಲಾಗಿ ಎದುರಾಳಿಯಂತೆಯೇ ತಾವು ಸಹ ಬೌದ್ಧಿಕವಾಗಿ- ಜೊತೆಗೆ ನೈತಿಕವಾಗಿ ಸಹ- ದಿವಾಳಿಯಾಗಿದ್ದೇವೆ ಎಂದು ಜಗಜ್ಜಾಹೀರು ಮಾಡುತ್ತಿರುತ್ತಾರೆ.

ವೈವಿಧ್ಯಮಯ ಜಾತಿ, ಜನಾಂಗ, ಧರ್ಮ, ಆಚರಣೆಗಳನ್ನು ನಂಬಿರುವ ಜನರ ಮಧ್ಯೆ ಬದುಕುತ್ತಿರುವವನು ತನ್ನ ಜೊತೆಗಾರ ಅಡ್ಡಹಾದಿ ಹಿಡಿಯದಂತೆ ಕಾಳಜಿ ವಹಿಸಬೇಕಾಗುತ್ತದೆ. ಅವನು ಅಡ್ಡಹಾದಿ ಹಿಡಿದೇ ತೀರಿದಲ್ಲಿ ವಿಷಾದ ಪಡಬೇಕಾಗುತ್ತದೆ. ಅವನು ಅಡ್ಡಹಾದಿ ಹಿಡಿದನೆಂದು ಅವನನ್ನು ದ್ವೇಷಿಸಿದರೆ, ಅಪಹಾಸ್ಯ ಮಾಡಿದರೆ ಅಥವಾ ಅವನ ಸರ್ವನಾಶವನ್ನು ಬಯಸಿದರೆ ಅದು ಮನುಷ್ಯತ್ವಹೀನ ವರ್ತನೆಯಾಗುತ್ತದೆ.

ಲೇಖಕ: ಸಹಾಯಕ ಪ್ರಾಧ್ಯಾಪಕ
ಜ್ಯೋತಿನಿವಾಸ್ ಕಾಲೇಜ್, ಬೆಂಗಳೂರು

ಚುರುಮುರಿ



ವಿಧಾನ- ಸಾಹಿತ್ಯ ಪರಿಷತ್!

• ಚಂದ್ರಕಾಂತ ವಡ್ಡು

ಶೀನ, ತಿಂಗಳೇಶನ ಕ್ರಿಸ್ತಪೂರ್ವ ಕಾಲದ ಶಿಷ್ಯ. ಕಲಾಸೇವೆಗಾಗಿಯೇ ಸರ್ಕಾರಿ ನೌಕರಿ ತೊರೆದ ತ್ಯಾಗಿ. ಚೂರು ಸಾಹಿತ್ಯ, ಹಿಡಿ ರಂಗಭೂಮಿ, ಬೊಗಸೆ ಹೋರಾಟ, ಬಕೀಟು ರಾಜಕಾರಣ... ಹೀಗೆ ಸದಾ ಸಾರ್ವಜನಿಕ ಜೀವನದಲ್ಲಿ ಮುಳುಗಿದ ವ್ಯಕ್ತಿ.

ಬೆಳ್ಳಂಬೆಳಿಗ್ಗೆಯೇ ಶೀನನಿಂದ ತಿಂಗಳೇಶನಿಗೆ ಕರೆ: ‘ನಾನಣ್ಣಾ ಶೀನ ಬೇಸದಿಯಾ...?’

‘ಹ್ಞೂಂ... ಶೀನ, ಏನ್ ಸಮಾಚಾರ...?’

‘ನಿನ್ನ ಸಹಾಯ ಬೇಕಣ್ಣ...’ ತಿಂಗಳೇಶನಿಗೆ ಅಪಾಯದ ಸೂಚನೆ ಸಿಕ್ಕು ಎಚ್ಚರಗೊಂಡ. ‘ನಿನಗೆ ಗೊತ್ತಲ್ಲ ಶೀನ, ಕೋವಿಡ್ ಕಾಲದಲ್ಲಿ ಜೀವನ ನಡೆಸೋದೇ ಕಷ್ಟ ಆಗೇತಿ...’

‘ನೀನೇನಣ್ಣಾ... ಇಂಗ್ ಮಾತಾಡ್ತೀ... ನಾನೇನು ರೊಕ್ಕ ಕೇಳಿದೆನೇನು? ನಂದೇ ಬೇಕಾದಷ್ಟು ಬಿದ್ದೈತಿ. ಕೋವಿಡ್ ಕಾಲದಲ್ಲೂ ಕಲಾದೇವಿ ನನ್ನ ಕೈಬಿಟ್ಟಿಲ್ಲ. ಹೋದ ವರ್ಷ ಅಲಾದಿ ಹತ್ತು ಸರ್ಕಾರಿ ನಾಟಕ ಕಾರ್ಯಕ್ರಮಗಳು ಸಿಕ್ಕಿದ್ವು. ನನ್ನ ಓರಾಟಕ್ಕೆ ಹೆದರಿ ಇಲಾಖೆಯವ್ರು ಆಗಿಂದಾಗ್ಲೇ ಬಿಲ್ ಪಾಸ್ ಮಾಡ್ತಾರೆ’.

ಸದ್ಯ ಬಚಾವಾದೆ ಎಂದುಕೊಂಡ ತಿಂಗಳೇಶ ‘ಛೇ... ನಾನೆಲ್ಲಿ ರೊಕ್ಕ ಕೇಳಿದಿ ಅಂತಂದೆ. ಕೋವಿಡ್ ಹಕೀಕತ್ ಪ್ರಸ್ತಾಪಿಸಿದೆ, ಅಷ್ಟೇ’ ಎಂದ.

‘ನಿನ್ನ ಬೆಂಬಲ ಬೇಕಣ...’ ‘ಸಹಾಯ’ ಪದ ‘ಬೆಂಬಲ’ ಆಗಿ ಬದಲಾಗಿದ್ದು ತಿಂಗಳೇಶನಿಗೆ ಇನ್ನಷ್ಟು ನಿರಾಳತೆ ತರಿಸಿತು. ದೆಹಲಿ ಭೇಟಿಯಲ್ಲಿ ಅಭಯ ಪಡೆದ ಮುಖ್ಯಮಂತ್ರಿಯಂತೆ ಆತ್ಮವಿಶ್ವಾಸದಿಂದ ‘ಹೇಳು ಶೀನಾ... ನಿನಗೆ ಇಲ್ಲ ಅಂತೀನಾ?’ ಎಂದ.

‘ಪರಿಷತ್ ಚುನಾವಣೆಯಲ್ಲಿ ನನ್ನನ್ನು ಬೆಂಬಲಿಸಬೇಕು. ಲೋಕಲ್ ಎಮ್ಮೆಲ್ಲೆ, ಎಂಪಿ, ಪಕ್ಷದ ಜಿಲ್ಲಾಧ್ಯಕ್ಷರು ನನ್ನ ಬೆಂಬಲಕ್ಕೆ ನಿಂತಾರ’.

‘ಯಾವ ಪಕ್ಷದಿಂದ ಟಿಕೆಟ್ ಸಿಕ್ತಪ್ಪಾ...?’

‘ಅಣಾ, ನಾನು ಸಾಹಿತ್ಯ ಪರಿಷತ್ತಿಗೆ ನಿಂತಿರೋದು; ವಿಧಾನ ಪರಿಷತ್ತಿಗೆ ಅಲ್ಲ. ಇಲ್ಲಿ ಪಕ್ಷ ಟಿಕೆಟ್ ಕೊಡಲ್ಲ, ಬಹಿರಂಗವಾಗಿ ಬೆಂಬಲಿಸುತ್ತದೆ. ಇದೊಂಥರಾ ವಿಧಾನ-ಸಾಹಿತ್ಯ ಪರಿಷತ್ ಚುನಾವಣೆ!’

‘ಸಾಹಿತ್ಯ’ ಪರಿಷತ್ತಿನ ಹೊಸ ‘ವಿಧಾನ’ ತಿಳಿಯುವುದಕ್ಕೂ ತಿಂಗಳೇಶನ ಮೊಬೈಲ್ ನೆಟ್‌ವರ್ಕ್ ಕಳೆಯುವುದಕ್ಕೂ ಸರಿಹೋಯ್ತು!

ಸಂಗತ

ನೋಟು ರದ್ದತಿ: ಜಾಣ ಮೌನವೇಕೆ?

ನೋಟು ರದ್ದತಿಯು ಆರ್ಥಿಕ ವ್ಯವಸ್ಥೆಗೆ ಒಳಿತು ಮಾಡಿದ್ದಕ್ಕಿಂತ ನಕಾರಾತ್ಮಕ ಪರಿಣಾಮ ಬೀರಿದ್ದೇ ಹೆಚ್ಚು ಎಂಬುದು ಆಳುವ ಪಕ್ಷಕ್ಕೂ ಮನದಟ್ಟಾಗಿದೆಯೇ?

• **ಎಚ್.ಕೆ. ಶರತ್**

ನವೆಂಬರ್ 8, ಪ್ರಧಾನಿ ನರೇಂದ್ರ ಮೋದಿಯವರು ₹500 ಮತ್ತು ₹1000 ಮುಖಬೆಲೆಯ ನೋಟು ರದ್ದತಿ ನಿರ್ಧಾರ ಪ್ರಕಟಿಸಿದ ಮಹತ್ವದ ದಿನ. ಈ ನಿರ್ಧಾರ ಕೈಗೊಂಡು ಐದು ವರ್ಷಗಳಾದ ಸಂಭ್ರಮವನ್ನು ಮೋದಿ ಅವರಾಗಲೀ ಆಡಳಿತಾರೂಢ ಬಿಜೆಪಿಯಾಗಲೀ ಆಚರಿಸಿದ್ದು ಎಲ್ಲೂ ಕಂಡುಬರಲಿಲ್ಲ.

ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದತಿ, ಸರ್ಜಿಕಲ್ ಸ್ಟ್ರೈಕ್ ವರ್ಷಾಚರಣೆಗಳನ್ನು ಬಹು ಹುಮ್ಮಸ್ಸಿನಿಂದ ಆಯೋಜಿಸುವ ಬಿಜೆಪಿಗೆ, ನೋಟು ರದ್ದತಿ ನಿರ್ಧಾರ ಮಾತ್ರ ಏಕೆ ಸಂಭ್ರಮಿಸಲು ಅರ್ಹವಾದ ಬೆಳವಣಿಗೆಯಾಗಿ ತೋರುತ್ತಿಲ್ಲ? ಹಾಗಾದರೆ ನೋಟು ರದ್ದತಿ ಈ ದೇಶದ ಆರ್ಥಿಕ ವ್ಯವಸ್ಥೆಗೆ ಒಳಿತು ಮಾಡಿದ್ದಕ್ಕಿಂತ ಹೆಚ್ಚಾಗಿ ನಕಾರಾತ್ಮಕ ಪರಿಣಾಮ ಬೀರಿದ್ದೇ ಹೆಚ್ಚೆಂಬುದು ಸ್ವತಃ ಆಳುವ ಪಕ್ಷಕ್ಕೂ ಮನದಟ್ಟಾಗಿದೆಯೇ?

ಐದು ವರ್ಷಗಳ ಹಿಂದೆ ದಿಢೀರನೆ ಟಿ.ವಿ. ಪರದೆಗಳಲ್ಲಿ ಪ್ರತ್ಯಕ್ಷವಾಗಿ, ಈ ದೇಶದ ಜನರಲ್ಲಿ ಆತಂಕ ಮತ್ತು ಆಶಾಭಾವ ಎರಡನ್ನೂ ಹುಟ್ಟುಹಾಕಿದ್ದ ನೋಟು ರದ್ದತಿ ನಿರ್ಧಾರ ಪ್ರಕಟಿಸಿದ ವೇಳೆ ಪ್ರಧಾನಿ ಮೋದಿ ಅವರು ಆಡಿದ ಮಾತುಗಳು ಮತ್ತು ನೀಡಿದ ಆಶ್ವಾಸನೆಗಳಿಗೆ ಈಗಲೂ ಅವರು ಬದ್ಧರಾಗಿದ್ದಾರೆಯೇ? ಈ ನಿರ್ಧಾರದಿಂದ ಜನಸಾಮಾನ್ಯರು ಅನುಭವಿಸಿದ ಯಾತನೆಗೆ ಪ್ರತಿಯಾಗಿ ಅವರಿಗೆ ದಕ್ಕಿದ್ದಾದರೂ ಏನೆಂದು ಉತ್ತರಿಸುವ ಪ್ರಯತ್ನ ಮಾಡಬಾರದೆ?

ನೋಟು ರದ್ದತಿ ನಿರ್ಧಾರದಿಂದ ಭ್ರಷ್ಟಾಚಾರ ನಿಯಂತ್ರಿಸಲು ಸಾಧ್ಯವೆಂದು ಅವರು ಹೇಳಿದ್ದರು. ಇಂದು ಭ್ರಷ್ಟಾಚಾರ ಕಡಿಮೆಯಾಗಿದೆಯೇ? ನೋಟು ರದ್ದತಿಯಿಂದ ಕಪ್ಪುಹಣ ಹೊಂದಿದ್ದವರನ್ನು ಗುರುತಿಸಲು ಸಾಧ್ಯವಾಗಿದ್ದರೆ, ಈ ನಿರ್ಧಾರದಿಂದ ತೊಂದರೆ ಅನುಭವಿಸಿದ, ಜೈಲುಪಾಲಾದ ತೆರಿಗೆ ವಂಚಕರ ಪಟ್ಟಿಯನ್ನು ದೇಶದ ಜನರ ಮುಂದಿಡುವ ಪ್ರಯತ್ನವನ್ನು ಒಕ್ಕೂಟ ಸರ್ಕಾರ ಮಾಡಬಾರದೇಕೆ?

ಭ್ರಷ್ಟಾಚಾರ ನಿಯಂತ್ರಿಸುವ ಪ್ರಾಮಾಣಿಕತೆ ಇದ್ದಿದ್ದರೆ, ಸರ್ಕಾರದ ಪ್ರತೀ ನಡೆಯಲ್ಲೂ ಪಾರದರ್ಶಕತೆ ಎದ್ದು ಕಾಣಬೇಕಿತ್ತಲ್ಲವೇ? ಭ್ರಷ್ಟಾಚಾರಕ್ಕೆ ಅವಕಾಶ ನೀಡುವುದಿಲ್ಲವೆಂದು ಎದೆಯುಬ್ಬಿಸಿ ಹೇಳುವವರಿಗೆ ಕಡೆಪಕ್ಷ ಪಿಎಂ ಕೇರ್ಸ್ ನಿಧಿಗೆ ಬಂದಿರುವ ದೇಣಿಗೆ ವಿವರ ನೀಡಲು ಏಕೆ ಸಾಧ್ಯವಾಗುತ್ತಿಲ್ಲ? ಜನರಿಂದ ಸಂಗ್ರಹಿಸಿದ ಹಣದ ಲೆಕ್ಕ ಕೊಡಲೂ ಏಕೆ ಹಿಂಜರಿಕೆ? ಮಾಹಿತಿ ಹಕ್ಕು ಕಾಯ್ದೆ ದುರ್ಬಲಗೊಳಿಸಲು ತೋರುವ ಉತ್ಸಾಹವನ್ನು ಭ್ರಷ್ಟಾಚಾರ ನಿರ್ಮೂಲನೆಗೆ ತೋರುತ್ತಿರುವ ಇಚ್ಛಾಶಕ್ತಿ ಎಂದು ಭಾವಿಸಬೇಕೆ?

ನೋಟು ರದ್ದತಿ ನಿರ್ಧಾರವು ಭಯೋತ್ಪಾದನೆ ನಿಯಂತ್ರಣಕ್ಕೂ ನೆರವಾಗಲಿದೆ ಎಂದು ಪ್ರಧಾನಿ ತಿಳಿಸಿದ್ದರು. ಅವರ ಈ ನಿರೀಕ್ಷೆಯಾದರೂ ನಿಜವಾಗಿದೆಯೇ? ಕಾಶ್ಮೀರದಲ್ಲಿ ಇತ್ತೀಚಿನ ದಿನಗಳಲ್ಲಿ ಭಯೋತ್ಪಾದಕರು ನಡೆಸುತ್ತಿರುವ ಜನಸಾಮಾನ್ಯರು, ಪೊಲೀಸರು ಮತ್ತು ಯೋಧರ ಹತ್ಯೆಗಳನ್ನು ಗಮನಿಸುತ್ತಿರುವ ಯಾರಿಗೇ ಆದರೂ ವಾಸ್ತವದ ಅರಿವಾಗುವುದಿಲ್ಲವೇ?

ದೇಶದ ಆರ್ಥಿಕತೆ ಮತ್ತು ಜನಸಾಮಾನ್ಯರ ದೈನಂದಿನ ಬದುಕಿನ ಮೇಲೆ ತೀವ್ರ ತೆರನಾದ ಪರಿಣಾಮ ಬೀರಿದ ನೋಟು ರದ್ದತಿಯಂತಹ ಮಹತ್ವದ ನಿರ್ಧಾರ ಕೈಗೊಳ್ಳಲು ಇದ್ದ ಅಸಲಿ ಕಾರಣವಾದರೂ ಏನು?

‘ಕೇವಲ ಐವತ್ತು ದಿನಗಳ ಕಾಲಾವಕಾಶ ನೀಡಿ. ಅಲ್ಲಿಯವರೆಗೆ ಎಲ್ಲವನ್ನೂ ಸಹಿಸಿಕೊಂಡಿರಿ. ಆನಂತರ ಎಲ್ಲರ ಬದುಕು ಹಸನಾಗಲಿದೆ’ ಎನ್ನುವ ಭರವಸೆ ನೀಡಿದ್ದ ವ್ಯಕ್ತಿ, ಅಂದು ತಾನಾಡಿದ್ದ ಮಾತುಗಳಿಗೆ ಉತ್ತರದಾಯಿ ಆಗಬೇಕಲ್ಲವೇ? ಪ್ರಧಾನಿ ಮೋದಿಯವರ ಭರವಸೆಯ ಮಾತುಗಳನ್ನು ನಂಬಿ ತರಹೇವಾರಿ ತೊಂದರೆಗಳನ್ನು ಎದುರಿಸಿದ ಜನರಿಗೆ ಕೊನೆಗೂ ಸಿಕ್ಕಿದ್ದಾದರೂ ಏನು?



ನೋಟು ರದ್ದತಿ ಎಂಬುದು ದೇಶದ ಅರ್ಥ ವ್ಯವಸ್ಥೆಯಲ್ಲಿನ ಕೊಳೆ ತೊಳೆದು ಶುಭ್ರಗೊಳಿಸಲು ಕಂಡುಕೊಂಡ ವಿನೂತನ ದಾರಿಯಾಗಿದ್ದರೆ, ಈ ದಾರಿಯನ್ನು ಅನುಸರಿಸುವ ಪ್ರಯತ್ನವನ್ನು ಬೇರೆ ದೇಶಗಳ ನಾಯಕರು ಏಕೆ ಮಾಡಲಿಲ್ಲ? ಸ್ವತಃ ಮೋದಿಯವರೇ ಈ ನಿರ್ಧಾರ ಕೈಗೊಂಡಿದ್ದು ತಮ್ಮ ಮಹತ್ತರ ಸಾಧನೆ ಎಂದು ಬಿಂಬಿಸಿಕೊಳ್ಳಲು ಏಕೆ ಮುಂದಾಗುತ್ತಿಲ್ಲ?

ನೋಟು ರದ್ದತಿ ನಿರ್ಧಾರ ಕೈಗೊಳ್ಳುವ ಮುನ್ನ ಅದರ ಪರಿಣಾಮಗಳ ಕುರಿತು ತಜ್ಞರೊಂದಿಗೆ ಪ್ರಧಾನಿ ಸಮಾಲೋಚನೆ ನಡೆಸಿರಲಿಲ್ಲವೇ? ಸೂಕ್ತ ಪರಾಮರ್ಶೆಯ ನಂತರ ಈ ನಿರ್ಧಾರ ಕೈಗೊಂಡಿದ್ದೇ ಆಗಿದ್ದರೆ, ನಿರೀಕ್ಷಿಸಿದ್ದ ಸಕಾರಾತ್ಮಕ ಪರಿಣಾಮಗಳ ಪೈಕಿ ಕೆಲವನ್ನಾದರೂ ಸಾಧಿಸಬೇಕಿತ್ತಲ್ಲವೇ?

ಒಂದು ವೇಳೆ ಈ ನಿರ್ಧಾರದಿಂದ ತಾವು ನಿರೀಕ್ಷಿಸಿದ್ದನ್ನು ಸಾಧಿಸಲು ವಿಫಲವಾಗಿದ್ದರೆ, ಆ ವೈಫಲ್ಯದ ಹೊಣೆ ಹೊರುವ ಜವಾಬ್ದಾರಿಯನ್ನು ನಿರ್ಧಾರ ಘೋಷಿಸಿದ್ದ ಪ್ರಧಾನಿಯವರೇ ಹೊರಬೇಕಲ್ಲವೇ? ತಾನು ಕೈಗೊಂಡ ತೀರ್ಮಾನದಿಂದಾಗಿ ದೇಶದ ಜನರು ಅನುಭವಿಸಿದ, ಇಂದಿಗೂ ಅನುಭವಿಸುತ್ತಲೇ ಇರುವ ದುಷ್ಪರಿಣಾಮಗಳ ಕುರಿತು ಇನಿತಾದರೂ ಪಶ್ಚಾತ್ತಾಪ ಪಡಬೇಕಲ್ಲವೇ? ಆತ್ಮವಿಮರ್ಶೆಗೆ ತನ್ನನ್ನು ಒಳಪಡಿಸಿಕೊಳ್ಳಲು ಸಿದ್ಧವಿಲ್ಲದ ನಾಯಕ, ತನ್ನ ತಪ್ಪುಗಳಿಂದ ಪಾಠ ಕಲಿಯಲು ಸಾಧ್ಯವೇ? ತಾನೇ ಎಸಗಿದ ತಪ್ಪುಗಳ ಕುರಿತು ಮರುಗದ ನಾಯಕನನ್ನು ಎಚ್ಚರಿಸುವ ಪ್ರಯತ್ನವನ್ನು ಪ್ರಜಾಪ್ರಭುತ್ವದ ಅಸಲಿ ಕಾವಲುಗಾರರಾದ ನಾವೆಲ್ಲರೂ ಮಾಡಬೇಕಲ್ಲವೇ?

ವಾಚಕರ ವಾಣಿ

ಕಮೋಡ್ ವಿನ್ಯಾಸ: ಅಂಧಾನುಕರಣೆ ಸಲ್ಲ

ಸಹೋದರನ ಮದುವೆಯ ಪ್ರಯುಕ್ತ ಇತ್ತೀಚೆಗೆ ಮದುವೆ ಛತ್ರದಲ್ಲಿ ಉಳಿಯುವ ಸಂದರ್ಭ ಉಂಟಾಯಿತು. ಅಲ್ಲಿ ಎಲ್ಲ ಕೊಠಡಿಗಳಲ್ಲೂ ಪಾಶ್ಚಿಮಾತ್ಯ ಶೈಲಿಯ ಕಮೋಡ್‌ಗಳನ್ನೇ ಅಳವಡಿಸಲಾಗಿದೆ. ಇತ್ತೀಚೆಗೆ ಲಾಡ್ಜ್‌ಗಳು, ಸಾರ್ವಜನಿಕ ಛತ್ರಗಳು, ಕಚೇರಿಗಳು, ದೇವಾಲಯಗಳ ತಂಗುವ ಸ್ಥಳಗಳಲ್ಲೂ ಇದೇ ಮಾದರಿಯ ಕಮೋಡ್‌ಗಳನ್ನು ಅಳವಡಿಸಲಾಗುತ್ತಿದೆ. ಈ ಬಗೆಯ ಕಮೋಡ್‌ಗಳ ಬಳಕೆಯ ಸಂದರ್ಭದಲ್ಲಿ ಮನುಷ್ಯನ ಚರ್ಮ ನೇರವಾಗಿ ಕಮೋಡ್ ಸಂಪರ್ಕಕ್ಕೆ ಬರುತ್ತದೆ. ಆದಕಾರಣ ರೋಗರುಜಿನಗಳು, ಸೋಂಕುಗಳು ಬೇಗ ಮತ್ತು ಹೆಚ್ಚಿನ ಪ್ರಮಾಣದಲ್ಲಿ ಹರಡುವ ಸಾಧ್ಯತೆ ಇರುತ್ತದೆ. ಇಂಥ ಕಮೋಡ್‌ಗಳು ಸಣ್ಣ ಮಕ್ಕಳ ಮಲ ವಿಸರ್ಜನೆಗೂ ಅನನುಕೂಲಕರವಾಗಿವೆ. ಮನೆಗಳಲ್ಲಿ ವಯಸ್ಸಾದವರು, ಮಂಡಿ ನೋವಿರುವವರು, ಮೂಳೆ ಸಮಸ್ಯೆ ಇರುವಂತಹವರಷ್ಟೇ ಅನಿವಾರ್ಯವಾಗಿ ಈ ರೀತಿಯ ಕಮೋಡ್‌ಗಳನ್ನು ಬಳಸುವುದು ಸೂಕ್ತ. ಇನ್ನು ಸಾರ್ವಜನಿಕ ಸ್ಥಳಗಳಲ್ಲೂ ಅನಿವಾರ್ಯ ಇರುವವರ ಬಳಕೆಗೆ ಮಾತ್ರ ಮಿತ ಸಂಖ್ಯೆಯಲ್ಲಿ ಈ ಬಗೆಯ ಕಮೋಡ್ ಅಳವಡಿಸಿ, ಉಳಿದಂತೆ ಭಾರತೀಯ ಶೈಲಿಯ ಕಮೋಡ್‌ಗಳನ್ನು ಅಳವಡಿಸುವುದು ಸೂಕ್ತ.

ವೈಜ್ಞಾನಿಕವಾಗಿಯೂ ಭಾರತೀಯ ಶೈಲಿಯ ಕಮೋಡ್‌ಗಳಲ್ಲಿ ಮಲ ವಿಸರ್ಜನೆ ಆರೋಗ್ಯಕರವೆಂದು ಸಂಶೋಧನೆಗಳು ದೃಢಪಡಿಸಿವೆ. ಹಾಗಾಗಿ ಈ ವಿಷಯದಲ್ಲಿ ಪಾಶ್ಚಿಮಾತ್ಯ ಶೈಲಿಯ ಅಂಧಾನುಕರಣೆಯನ್ನು ನಿಲ್ಲಿಸಿ ಭಾರತೀಯ ಶೈಲಿಗೆ ಒತ್ತು ಕೊಡುವುದು ಉತ್ತಮ.

ಎಸ್.ರವಿ, ಮೈಸೂರು

ಕಸಾಪ: ಈ ಅಧೋಗತಿ ಅನಿವಾರ್ಯವೇ?

ಕನ್ನಡ ಸಾಹಿತ್ಯ ಪರಿಷತ್‌ಗೆ ಸದ್ಯದಲ್ಲಿಯೇ ನಡೆಯಲಿರುವ ಚುನಾವಣೆ ಸಂಬಂಧವಾಗಿ ಕೆಲವು ಅಭ್ಯರ್ಥಿಗಳು ತೆರೆಯಮರೆಯಲ್ಲಿ ನಡೆಸುತ್ತಿರುವ ರಾಜಕೀಯ ಹಾಗೂ ಹಣದ ಚಲಾವಣೆ ಕುರಿತ ಪತ್ರಿಕಾ ವರದಿಗಳನ್ನು ಓದಿ ಹೇಸಿಗೆ ಎನಿಸುತ್ತಿದೆ. ಅಭ್ಯರ್ಥಿಗಳು ರಾಜಕೀಯ ಪಕ್ಷಗಳ ಬೆಂಬಲ ಕೋರುವುದು ಹೊಸತಲ್ಲವಾದರೂ, ಇಂದಿನಂತೆ ರಾಜಕೀಯ ಪಕ್ಷಗಳು ತಮ್ಮ ಹಿತಾಸಕ್ತಿಗಾಗಿ, ಹೇಗಾದರೂ ಚುನಾವಣೆ ಗೆಲ್ಲಲೇಬೇಕೆನ್ನುವ ಮನೋಧರ್ಮದ ಅಭ್ಯರ್ಥಿಗಳನ್ನು ಬಳಸಿಕೊಂಡು, ಶಾಸನಸಭಾ ಚುನಾವಣೆಗಳ ಎಲ್ಲ ಹೊಲಸು ತಂತ್ರಗಳನ್ನೂ ಒಂದು ಶ್ರೇಷ್ಠ ಸಾಹಿತ್ಯ ಸಂಸ್ಥೆಯೊಳಕ್ಕೂ ತಂದಿರುವುದು ತೀರಾ ನಾಚಿಕೆಗೇಡಿನ ವಿಷಯ.

ಶ್ರೇಷ್ಠ ಸಾಹಿತಿಗಳು ಅಧ್ಯಕ್ಷರಾಗಿದ್ದ ಕಸಾಪಕ್ಕೆ ಇಂಥ ಅಧೋಗತಿ ಬರಬಾರದಿತ್ತು. ಸಂಗೀತ, ಸಾಹಿತ್ಯ, ಕಲೆಗಳಂತಹ ಕ್ಷೇತ್ರಗಳ ಮೇಲೂ ದಾಳಿ ನಡೆಸುತ್ತಿರುವ ರಾಜಕೀಯ ಪಕ್ಷಗಳ ಈ ಆಕ್ರಮಣಕಾರಿ ಪ್ರವೃತ್ತಿ ಬೆಳೆಯಲು ಕಸಾಪ ಮತದಾರರು ಅವಕಾಶ ನೀಡಕೂಡದು.

ಪ್ರೊ. ಬಿ.ಕೆ.ಚಂದ್ರಶೇಖರ್, ಬೆಂಗಳೂರು

ಜಿಲ್ಲೆಗೊಂದು ಕೃಷಿಮೇಳ ಇರಲಿ

ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ನಾಲ್ಕು ದಿನಗಳ ಕೃಷಿಮೇಳ ಇತ್ತೀಚೆಗೆ ಮುಕ್ತಾಯವಾಯಿತು. ಮೇಳದಲ್ಲಿ ಭಾಗವಹಿಸಿದ್ದವರಲ್ಲಿ ಬಹುತೇಕರು ರೈತರೆನ್ನುವುದಕ್ಕಿಂತ ಬೆಂಗಳೂರಿಗರು ಎಂಬುದು ಪಾಲ್ಗೊಂಡಿದ್ದವರಿಗೆ ತಿಳಿಯುವಂತಿತ್ತು. ಪ್ರತಿವರ್ಷವೂ ಕೃಷಿ ವಿಶ್ವವಿದ್ಯಾಲಯಗಳು ಹೊಸ ತಂತ್ರಜ್ಞಾನ, ತಳಿಗಳು ಹಾಗೂ ಸಂಶೋಧನೆಗಳನ್ನು ರೈತರಿಗೆ ತಲುಪಿಸಲು ಹಲವು ಖಾಸಗಿ ಕಂಪನಿಗಳನ್ನು ಆಹ್ವಾನಿಸಿ ಹಮ್ಮಿಕೊಳ್ಳುವ ಕೃಷಿ ಪ್ರದರ್ಶನದಲ್ಲಿ ತಜ್ಞರಿಂದ ಸಮಾಲೋಚನೆ, ಸಲಹೆ ಹಾಗೂ ರೈತರಿಗೆ ಸತ್ಕಾರ ಎಲ್ಲವೂ ಕಂಡುಬರುತ್ತವೆ. ದೇಶದಲ್ಲಿ ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ರೈತ ಸಂಪರ್ಕ ಕೇಂದ್ರಗಳು ಇದ್ದರೂ ಬಹುತೇಕ ಸಂಶೋಧನೆಗಳು ರೈತರನ್ನು ತಲುಪುತ್ತಿಲ್ಲದಿರುವುದಕ್ಕೆ ಕಾರಣ, ಕೃಷಿ ವಿಸ್ತರಣೆಯ ವೈಫಲ್ಯ.

ವಿಶ್ವವಿದ್ಯಾಲಯಗಳು ಇರುವಲ್ಲೇ ಬೆಂಗಳೂರು, ಧಾರವಾಡ, ಶಿವಮೊಗ್ಗ, ರಾಯಚೂರು, ಬಾಗಲಕೋಟೆ ಮತ್ತು ಬೀದರ್‌ನಲ್ಲಿ ಮಾತ್ರ ವಾರ್ಷಿಕವಾಗಿ ಕೃಷಿ ಮೇಳ ಹಮ್ಮಿಕೊಂಡರೆ ಉಳಿದ ಜಿಲ್ಲೆಗಳ ರೈತರಿಗೆ ಅವಕಾಶ ವಂಚನೆಯಾಗುವುದಿಲ್ಲವೇ? ಕೃಷಿ ಇಲಾಖೆ ಮತ್ತು ಕೃಷಿ ವಿಜ್ಞಾನ ಕೇಂದ್ರಗಳ ಆರ್ಥಿಕ ಸಹಕಾರದೊಂದಿಗೆ ಬೆರಳೆಣಿಕೆಯಷ್ಟು ರೈತರು ಪ್ರತೀ ಜಿಲ್ಲೆಯಿಂದ ಮೇಳಕ್ಕೆ ಬರಬಹುದು. ಆದರೆ ಬಹುತೇಕ ಮಧ್ಯಮ, ಬಡ ರೈತರು ಅವಕಾಶ ವಂಚಿತರಾಗುತ್ತಾರೆ. ರಾಜ್ಯವು ಕೃಷಿ ಹವಾಮಾನಕ್ಕನುಗುಣವಾಗಿ ಒಟ್ಟು ಜಿಲ್ಲೆಗಳನ್ನು 10 ವಲಯಗಳನ್ನಾಗಿ ವಿಭಾಗಿಸಿದೆ. ಜಿಲ್ಲೆಗಳನ್ನು ರಾಜ್ಯದಲ್ಲಿರುವ 6 ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳ ವ್ಯಾಪ್ತಿಗೆ ಒಳಪಡಿಸಲಾಗಿದೆ. ಸರ್ಕಾರ ಮತ್ತು ಕೃಷಿ ವಿಶ್ವವಿದ್ಯಾಲಯಗಳು ವರ್ಷಕ್ಕೆ ಒಂದು ಜಿಲ್ಲೆಯಂತೆ ಪ್ರತೀ ಜಿಲ್ಲೆಯಲ್ಲೂ ಕೃಷಿ ಮೇಳ ನಡೆಸಬೇಕು. ಆಗಮಾತ್ರ ಕೃಷಿ ವಿಜ್ಞಾನ ಮತ್ತು ಸಂಶೋಧನೆ ರೈತ ಸಮುದಾಯಕ್ಕೆ ತಲುಪುವಲ್ಲಿ ಪರಿಣಾಮಕಾರಿಯಾಗಿರುತ್ತದೆ.

ಡಾ. ರಮೇಶ ವಿ., ಬೆಂಗಳೂರು

ಇದು ಜನರಂಜನೆಯೇ?

ವಿಡಂಬನಕಾರ ವೀರ್ ದಾಸ್ ಅವರು ಅಮೆರಿಕದಲ್ಲಿ ನೀಡಿದ ಕಾರ್ಯಕ್ರಮದಲ್ಲಿ ‘ಎರಡು ಮುಖ ಹೊತ್ತ ಭಾರತ’ ಎಂದು ನಮ್ಮ (ತನ್ನ) ದೇಶವನ್ನು ಅಲ್ಲಿನ ಪ್ರೇಕ್ಷಕವರ್ಗದ ಮುಂದೆ ನಿಲ್ಲಿಸಿದ ರೀತಿ ಅತ್ಯಂತ ಹೇಯವಾಗಿದೆ. ಈತ ಸ್ಟ್ಯಾಂಡ್‌ಅಪ್ ಕಮಿಡಿಯನ್ ಎಂದು ಮಾಧ್ಯಮಗಳು ವಿವರಿಸಿವೆ. ಕಮಿಡಿಯನ್ ಎಂದರೆ ಜನರನ್ನು ನಗಿಸುವಾತ, ಹಾಸ್ಯನಟ, ಹಾಸ್ಯನಾಟಕಕಾರ. ಸ್ಟ್ಯಾಂಡ್‌ಅಪ್ ಎನ್ನುವ ವಿಶೇಷಣ ಪದದ ಅರ್ಥ ಪ್ರೇಕ್ಷಕವರ್ಗವನ್ನು ಹಾಸ್ಯದ ಮಾತುಗಳಿಂದ, ಸಂಗತಿಗಳಿಂದ ರಂಜಿಸುವಾತನೆಂದು. ಅಮೆರಿಕದ ಜನರ ಮುಂದೆ ತಾವು ಪ್ರಸ್ತಾಪಿಸಿದ ಸಂಗತಿಗಳಲ್ಲಿ ಕೆಲವು ಹೇಗೆ ಜನಮನರಂಜನೆಗಾಗಿ ಹೇಳಿದ ‘ಹಾಸ್ಯ’ದವು ಎನ್ನುವುದನ್ನು ಅವರೇ ವಿವರಿಸಬೇಕು.

ದೇಶವನ್ನು ಅಪಮಾನಿಸುವುದು ತಮ್ಮ ಉದ್ದೇಶವಲ್ಲ ಎಂದು ಸಮಜಾಯಿಷಿ ನೀಡಿದ್ದಾರೆ ವೀರ್ ದಾಸ್. ಅವರ ಮನಸ್ಸಿನಲ್ಲಿ ಏನೇ ಇರಲಿ, ಅವರಾಡಿದ ಮಾತುಗಳ ವಾಚ್ಯಾರ್ಥ, ಧ್ವನ್ಯಾರ್ಥಗಳು ಭಾರತದ ಅವಹೇಳನವನ್ನೇ ತೋರಿಸುತ್ತವೆ. ಜನರಂಜನೆ ಎಂದರೆ ಇನ್ನೊಬ್ಬರನ್ನು ಅಥವಾ ಇನ್ನೊಂದು ದೇಶವನ್ನು ಕೀಳಾಗಿ ಕಾಣಿಸುವುದೇ?

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಹೆದ್ದಾರಿಗಳಲ್ಲಿ ಶೌಚಾಲಯವಿಲ್ಲದ ದುಃಸ್ಥಿತಿ

ಮಹಿಳೆಯರ ಪ್ರಯಾಣದ ಪ್ರಯಾಸ



• ಸುಕೃತ ಎಸ್.

ಭಾರತವು 'ಸ್ವಚ್ಛ ಭಾರತ ಅಭಿಯಾನ'ದ ಅಡಿಯಲ್ಲಿ ಬಯಲು ಬಹಿರ್ದೆಸೆ ಮುಕ್ತವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ವರ್ಷಗಳ ಹಿಂದೆಯೇ ಘೋಷಿಸಿದ್ದಾರೆ. ಆದರೆ, ಹಾಗೆ ಆಗಿಲ್ಲ ಎಂದು ಪ್ರತಿಪಾದಿಸುವ ಹಲವು ವರದಿಗಳು ಪ್ರಕಟವಾಗಿವೆ. ಸ್ವಚ್ಛತಾ ಅಭಿಯಾನದ ಅಡಿಯಲ್ಲಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಹೀಗೆ ನಿರ್ಮಾಣವಾಗಿರುವ ಹಲವು ಶೌಚಾಲಯಗಳ ಸ್ಥಿತಿಯು ಶೋಚನೀಯವಾಗಿದೆ. ಸ್ವಚ್ಛ ಇಲ್ಲದ, ಶೌಚಾಲಯವೇ ಇಲ್ಲದ ದುಃಸ್ಥಿತಿಯು ವೃದ್ಧರು, ಮಕ್ಕಳು ಪ್ರಮುಖವಾಗಿ ಮಹಿಳೆಯರ ಪ್ರಯಾಣಕ್ಕೆ ದುಃಸ್ವಪ್ನವಾಗಿದೆ.

ಹೆದ್ದಾರಿಗಳ ಹೆಚ್ಚಿನೆಡೆಗಳಲ್ಲಿ ಸಾರ್ವಜನಿಕ ಶೌಚಾಲಯಗಳು ಸಿಗುವುದಿಲ್ಲ. ಒಂದುವೇಳೆ ಸಿಕ್ಕರೂ ಅವುಗಳು ಬಳಕೆಗೆ ಅಸಾಧ್ಯವೆಂಬಂತೆ ಇವೆ. ಸ್ವಚ್ಛತೆಯನ್ನಂತೂ ಕೇಳುವಂತೆಯೇ ಇಲ್ಲ. ಶೌಚಾಲಯ ಇದೆಯಲ್ಲಾ ಎನ್ನುವುದೇ ಅದೃಷ್ಟ! ನಿಯಮಿತವಾಗಿ ಇಲ್ಲದ ನೀರು ಸರಬರಾಜು, ಸರಿಯಾದ ಬೆಳಕಿನ ವ್ಯವಸ್ಥೆ ಇಲ್ಲದಿರುವಿಕೆ, ಬಾಗಿಲು ಇಲ್ಲ, ಬಾಗಿಲಿದ್ದರೆ ಚಿಲಕ ಇಲ್ಲ, ಭದ್ರತಾ ವ್ಯವಸ್ಥೆ ಇಲ್ಲ– ಇದು ಹೆದ್ದಾರಿ ಬದಿಗಳಲ್ಲಿರುವ ಶೌಚಾಲಯಗಳ ಸ್ಥಿತಿ. ಟೋಲ್‌ಗಳ ಬಳಿ ಸಿಗುವ ಸಾರ್ವಜನಿಕ ಶೌಚಾಲಯಗಳ ಬಳಿ ಗಂಡಸರದೇ ಸಾಲು. ಮದ್ಯ ಕುಡಿಯುವುದು, ಸಿಗರೇಟು ಸೇದುವುದು ಮುಂತಾದವುಗಳ ಕಾರಣ ಮಹಿಳೆಯರು ಆ ಕಡೆಯೂ ಹೋಗದಂಥ ವಾತಾವರಣ ಇದೆ.

'ಹೈದರಾಬಾದ್‌ನಿಂದ ಶಿವಮೊಗ್ಗಕ್ಕೆ ಐರಾವತ ಬಸ್‌ನಲ್ಲಿ ನಾನು ಇತ್ತೀಚೆಗೆ ಪ್ರಯಾಣಿಸಿದ್ದೆ. ಸಂಜೆ 6 ಗಂಟೆಗೆ ಹೈದರಾಬಾದ್‌ನಿಂದ ಬಸ್ ಹೊರಟಿತ್ತು. 8.30ರ ಹೊತ್ತಿಗೆ ಒಂದು ಹೋಟೆಲ್ ಮುಂದೆ ಬಸ್ ನಿಂತಿತು. ಮೂಗು ಮುಚ್ಚಿಕೊಂಡು ಶೌಚಾಲಯಕ್ಕೆ ಹೋಗಿಬಂದಾಯಿತು. ನಂತರ, ಬೆಳಿಗ್ಗಿನ ಜಾವದವರೆಗೆ ಎಲ್ಲೂ ನಿಲುಗಡೆ ಇರಲಿಲ್ಲ. ಬೆಳಿಗ್ಗಿನ ಜಾವದ ಹೊತ್ತಿಗೆ ರಾಯಚೂರು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಬಸ್ಸು ನಿಂತಿತು. ಶೌಚಾಲಯಕ್ಕೆ ಹೋಗಿ ಬರುತ್ತೇನೆ ಎಂದರೆ, 'ಬೇಗ ಬರಬೇಕು' ಎಂದರು ಕಂಡಕ್ಟರ್. ಶೌಚಾಲಯ ಎಲ್ಲಿದೆ ಎಂದು ಹುಡುಕುವುದೇ ಸಾಹಸ. ಅಂತೂ ಸಿಕ್ಕಿತು ಎಂದು ಸಮಾಧಾನ ಪಡುವಹೊತ್ತಿಗೆ ಶೌಚಾಲಯಗಳಿಗೆ ಹಾಕಿದ ಬೀಗ ಕಂಡಿತು. ವಾಪಾಸು ಬಂದು ಬಸ್‌ನಲ್ಲಿ ಕೂತಿದ್ದಾಯಿತು. ಮಾರ್ಗಮಧ್ಯೆ ಕೆಎಸ್‌ಆರ್‌ಟಿಸಿಯ ಬೇರೆ ಯಾವ ಬಸ್ ನಿಲ್ದಾಣದಲ್ಲಿಯೂ ಶೌಚಾಲಯಕ್ಕೆ ಹೋಗುವ ಧೈರ್ಯ ಸಾಲಲಿಲ್ಲ. ಬೆಳಿಗ್ಗೆ 6ರ ಸುಮಾರಿಗೆ ಶಿವಮೊಗ್ಗ ತಲುಪಿದಾಗ ಬೇರೆ ದಾರಿಯೇ ಕಾಣದೆ ಬಸ್ ನಿಲ್ದಾಣದಲ್ಲಿದ್ದ ಶೌಚಾಲಯವನ್ನೇ ಬಳಸಬೇಕಾಯಿತು' ಎಂದು ತಮ್ಮ ಪ್ರಯಾಣದ ಯಾತನೆಯನ್ನು ಶಿವಮೊಗ್ಗದ ಸಂತೃಪ್ತಿ ಹಂಚಿಕೊಂಡರು.



ದಾವಣಗೆರೆಯ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ, ಅನುಪಯುಕ್ತ ಬಸ್ಸನ್ನು ಸ್ತ್ರೀಯರ ಶೌಚಾಲಯವಾಗಿ ಮಾರ್ಪಡಿಸಿ ಇತ್ತೀಚೆಗೆ ಉದ್ಘಾಟಿಸಲಾಗಿತ್ತು. ಆದರೆ, ಅದನ್ನು ಮಹಿಳೆಯರ ಉಪಯೋಗಕ್ಕೆ ನೀಡದೆ ಬೀಗ ಹಾಕಿರುವುದು ಕಂಡು ಬಂತು – ಪ್ರಜಾವಾಣಿ ಚಿತ್ರ: ಸತೀಶ ಬಡಿಗೇರ್

'ಪುರುಷ ಪ್ರಯಾಣಿಕರಿಗೆ ಈ ಸಮಸ್ಯೆ ಬಾಧಿಸದು. ಮರದ ಹಿಂದೆಯೋ, ರಸ್ತೆ ಬದಿಯಲ್ಲಿಯೋ ಅವರು ಕೆಲಸ ಮುಗಿಸಿಬಿಡುತ್ತಾರೆ. ಅದೇ ಮಹಿಳೆಯರಿಗೆ ಹೀಗಾಗದು. ಖಾಸಗಿ ಬಸ್ ಪ್ರಯಾಣದಲ್ಲೂ ಪರಿಸ್ಥಿತಿ ಬೇರೆಯದಿಲ್ಲ. ಮಾರ್ಗಮಧ್ಯೆ ಬಸ್ ನಿಲ್ಲಿಸಲು ವಿನಂತಿಸಿದರೂ ಮರೆಯನ್ನು ಎಲ್ಲಿ ಹುಡುಕುವುದು. ಗಂಡಸರು ಕಿಟಕಿ ಕಡೆಯಿಂದ ನೋಡುತ್ತಾರೆನ್ನುವ ಮುಜುಗರ. ಇನ್ನು ರಾತ್ರಿ ವೇಳೆಯಲ್ಲಿ ಪ್ರಾಣಿ, ಕೀಟಗಳ ಭಯ. ಜೊತೆ ಯಾರಾದರೂ ಇದ್ದರೆ ಮರೆ ಆಗುತ್ತಾರೆ ನಿಜ. ಹಾಗಂತ ಪ್ರತಿಬಾರಿಯೂ ಯಾರನ್ನು ಕರೆದುಕೊಂಡು ಹೋಗುವುದು. ಈ ಕಾರಣಕ್ಕೆ ಒಂಟಿಯಾಗಿ ಬಸ್ ಪ್ರಯಾಣವು ಪ್ರಯಾಸ ಪಡುವಂತಾಗುತ್ತದೆ' ಎನ್ನುತ್ತಾರೆ ಸಂತೃಪ್ತಿ.

ಪಾಲನೆಯಾಗದ ಆದೇಶ

ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು 2018ರ ಜನವರಿಯಲ್ಲಿ ಎಲ್ಲಾ ರಾಜ್ಯ ಸರ್ಕಾರಗಳ ಮುಖ್ಯ ಕಾರ್ಯದರ್ಶಿಗಳಿಗೆ ಮತ್ತು ಸಂಬಂಧಿತ ಅಧಿಕಾರಿಗಳಿಗೆ ಆದೇಶ ಪತ್ರವೊಂದನ್ನು ರವಾನಿಸಿತ್ತು.

ಆ ಆದೇಶದಲ್ಲಿ ಹೀಗೆ ಹೇಳಲಾಗಿತ್ತು: '2013ರಲ್ಲಿ ಹೊರಡಿಸಿದ್ದ ಆದೇಶವೊಂದರ ಅನ್ವಯ ಎಲ್ಲಾ ಹೆದ್ದಾರಿಗಳಲ್ಲಿರುವ ವಾಣಿಜ್ಯ ಸಂಕೀರ್ಣಗಳ ಆವರಣದಲ್ಲಿ ವಿದ್ಯುತ್ ವ್ಯವಸ್ಥೆ, ನೀರಿನ ಸರಬರಾಜು ಮತ್ತು ಅವಶ್ಯವಾಗಿರುವ ಸ್ವಚ್ಛತಾ ಪರಿಕರಗಳನ್ನು ಒಳಗೊಂಡ ಶೌಚಾಲಯಗಳನ್ನು ನಿರ್ಮಾಣ ಮಾಡಬೇಕು. ಜೊತೆಗೆ ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲೂ ಶೌಚಾಲಯ ವ್ಯವಸ್ಥೆ ಇರಬೇಕು ಎಂದು ಸೂಚಿಸಲಾಗಿತ್ತು. ಅದು ಪಾಲನೆಯಾಗಿಲ್ಲ. ಈ ಆದೇಶ ತಲುಪಿದ ಮೂರು ತಿಂಗಳ ಒಳಗೆ, ಇವನ್ನು ಅನುಷ್ಠಾನಕ್ಕೆ ತರಬೇಕು' ಎಂದು ಆದೇಶಿಸಿತ್ತು.

ಆದರೆ ಈ ಆದೇಶ ಬಂದು ಮೂರು ವರ್ಷ ಕಳೆದರೂ, ಆದೇಶದಲ್ಲಿ ತಿಳಿಸಿದಂತೆ ಏನೂ ಆಗಿಲ್ಲ. ಶೌಚಾಲಯ ನಿರ್ಮಾಣವಾಗಿಲ್ಲ. ಜೊತೆಗೆ ಪೆಟ್ರೋಲ್ ಬಂಕ್‌ಗಳಲ್ಲಿ ಬಸ್ ನಿಲುಗಡೆ ಇಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಬಂಕ್‌ನ ಸಿಬ್ಬಂದಿ ಮತ್ತು ಗ್ರಾಹಕರಿಗೆ ಮಾತ್ರ ಶೌಚಾಲಯ ಪ್ರವೇಶ ಎನ್ನುವ 'ಬಂಕ್ ನಿಯಮ' ಇದೆ!

ಇಂದು ವಿಶ್ವ ಶೌಚಾಲಯ ದಿನ

ಗಂಭೀರ ಸಮಸ್ಯೆ



'ದೇಶದಾದ್ಯಂತ ನಾನು ಬೈಕ್ ಸವಾರಿ ಮಾಡಿದ್ದೇನೆ. ಎಲ್ಲಾ ಕಡೆಯೂ ಶೌಚಾಲಯದ ಸಮಸ್ಯೆ ಇದೆ. ರಾಜ್ಯದಲ್ಲೂ ಸಮಸ್ಯೆ ಗಂಭೀರವಾಗಿಯೇ ಇದೆ. ಹೆದ್ದಾರಿಗಳಲ್ಲಿ ಸಿಗುವ ಬಹುತೇಕ ಸಾರ್ವಜನಿಕ ಶೌಚಾಲಯಗಳು ಬೀಗ ಹಾಕಿರುತ್ತವೆ. ಆ ಸಮಯದಲ್ಲಿ ನಾವು ಹತ್ತಿರದ ಹಳ್ಳಿಗಳಿಗೆ ಹೋಗಿ ಸಮಸ್ಯೆ ಹೇಳಿಕೊಂಡು, ಯಾರದ್ದಾದರೂ ಮನೆಯ ಶೌಚಾಲಯ ಬಳಸುತ್ತೇವೆ. ತಂಡವಾಗಿ ಹೋದರೆ ಹೇಗೋ ಮರೆಯಲ್ಲಿಯೇ ನಡೆದು ಹೋಗುತ್ತದೆ. ಕೊಳಕು ಸ್ಥಿತಿಯಲ್ಲಿರುವ ಶೌಚಾಲಯವನ್ನು ಬಳಸುವ ಬದಲು ಬಯಲೇ ಹೆಚ್ಚು ಆರೋಗ್ಯಕರ ಎನಿಸುತ್ತದೆ' ಎನ್ನುತ್ತಾರೆ ಬೈಕರ್ ದಶ್ಮಿ.



ಶೌಚಾಲಯದ ಸ್ಥಿತಿ ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಸ್ವಾಗತಾರ್ಹ ಕ್ರಮ

- ಹೆದ್ದಾರಿಗಳ ಬದಿಗಳಲ್ಲಿ ಶೌಚಾಲಯಗಳನ್ನು ನಿರ್ಮಿಸುವ ಕುರಿತು ಕೇರಳ ಸರ್ಕಾರವು ಕೆಲವು ನಿರ್ಧಾರಗಳನ್ನು ತೆಗೆದುಕೊಂಡಿದೆ. ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಒಟ್ಟು 12,000 ಶೌಚಾಲಯಗಳನ್ನು ನಿರ್ಮಿಸಬೇಕು ಎಂದು ತೀರ್ಮಾನಿಸಿದೆ
- ಮಹಾರಾಷ್ಟ್ರ ಸರ್ಕಾರವು 2018ರಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರತಿ ನೂರು ಕಿ.ಮೀ ದೂರಕ್ಕೆ ಶೌಚಾಲಯ ನಿರ್ಮಿಸಲಾಗುವುದು ಎಂದು ಹೇಳಿತ್ತು
- ತಮಿಳುನಾಡಿನ ಕೃಷ್ಣಗಿರಿಯಲ್ಲಿ ಭಾರತದಲ್ಲೇ ಮೊದಲ ಬಾರಿಗೆ ಹೆದ್ದಾರಿ 44ರಲ್ಲಿ ಲ್ಯಾವೆಟೊ ಶೌಚಾಲಯ ಸಂಕೀರ್ಣವನ್ನು ನಿರ್ಮಾಣ ಮಾಡಲಾಗಿದೆ. ಇದು ಲಾಂಜ್ ರೀತಿಯಲ್ಲಿರುತ್ತದೆ ಮತ್ತು ಸ್ವಚ್ಛ ಇರುವ ಮತ್ತು ಉತ್ತಮ ನಿರ್ವಹಣೆ ಇದೆ

ಸಹಿ ಸಂಗ್ರಹ ಅಭಿಯಾನ

ರಾಜ್ಯದ ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಬೆಂಗಳೂರು-ಮಂಗಳೂರು ಹೆದ್ದಾರಿಯೂ ಒಂದು. ಅಂದಾಜು 350 ಕಿ.ಮೀ. ಉದ್ದದ ಈ ಹೆದ್ದಾರಿಯಲ್ಲಿ ಮಹಿಳೆಯರು ಆತ್ಮವಿಶ್ವಾಸದಿಂದ ಮತ್ತು ಯಾವುದೇ ಮುಜುಗರವಿಲ್ಲದೆ ಬಳಸಬಹುದಾದ ಸಾರ್ವಜನಿಕ ಶೌಚಾಲಯಗಳು ಇಲ್ಲವೇ ಇಲ್ಲ. ಈ ಶೌಚಾಲಯಗಳನ್ನು ಬಳಸಿದ ಅನುಭವವಿರುವ ಸಕಲೇಶಪುರದ ಅರ್ಚನಾ ಕೆ.ಆರ್. ಅವರು, 'ಈ ಹೆದ್ದಾರಿಯ ಉದ್ದಕ್ಕೂ ನಿಗದಿತ ಅಂತರದಲ್ಲಿ ಸ್ವಚ್ಛ, ಸುರಕ್ಷಿತ ಮತ್ತು ಬಳಕೆಗೆ ಯೋಗ್ಯವಿರುವಂತಹ ಶೌಚಾಲಯಗಳ ಅವಶ್ಯಕತೆ ಇದೆ. ಅಂತಹ ಶೌಚಾಲಯಗಳನ್ನು ನಿರ್ಮಿಸಿ, ನಿರ್ವಹಣೆ ಮಾಡಿ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವರನ್ನು ಒತ್ತಾಯಿಸಲು ಆನ್‌ಲೈನ್‌ನಲ್ಲಿ ಸಹಿ ಸಂಗ್ರಹ ಅಭಿಯಾನ ಆರಂಭಿಸಿದ್ದಾರೆ.

ಸ್ವಚ್ಛತಾ ಪ್ರಚಾರಕಿಯೂ ಆಗಿರುವ ಅರ್ಚನಾ ಅವರು 2018ರ ಅಕ್ಟೋಬರ್ 2ರಂದು ಸಹಿ ಸಂಗ್ರಹ ಅಭಿಯಾನವನ್ನು ಆರಂಭಿಸಿದ್ದಾರೆ. ಈ ಆಗ್ರಹವನ್ನು ಹೆದ್ದಾರಿ ಸಚಿವರಿಗೆ ತಲುಪಿಸಲು 1.50 ಲಕ್ಷ ಸಹಿಗಳ ಅವಶ್ಯಕತೆ ಇದೆ. ಈವರೆಗೆ 1.29 ಲಕ್ಷ ಜನರು ಸಹಿ ಮಾಡಿದ್ದಾರೆ.

'ಸಕಲೇಶಪುರದಿಂದ ಬೆಂಗಳೂರು ತಲುಪುವ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಸಿಗುವ ಹೆಚ್ಚಿನ ಶೌಚಾಲಯಗಳು ಬಳಕೆಗೆ ಯೋಗ್ಯವಿಲ್ಲ. ಮಧುಮೇಹ ಇರುವ ನನ್ನ ತಾಯಿ ಬಹಳ ಕಷ್ಟಪಟ್ಟರು. ಅವರಿಗೆ ಮೂತ್ರ ಕಟ್ಟಲು ಆಗುವುದಿಲ್ಲ ಮತ್ತು ಪದೇ ಪದೇ ಶೌಚಾಲಯಕ್ಕೆ ಹೋಗುತ್ತಾರೆ. ಈ ಎಲ್ಲದನ್ನು ನೋಡಿ ಆನ್‌ಲೈನ್‌ನಲ್ಲಿ ಸಹಿ ಸಂಗ್ರಹಣೆ ಮಾಡಲು ಶುರು ಮಾಡಿದೆ' ಎನ್ನುತ್ತಾರೆ ಅರ್ಚನಾ.

'ನಾನು ಸಕಲೇಶಪುರ – ಬೆಂಗಳೂರು ಹೆದ್ದಾರಿಯಲ್ಲಿ ಓಡಾಡುತ್ತಲೇ ಇರುತ್ತೇನೆ. ಸ್ವಚ್ಛತಾ ಪ್ರಚಾರಕಿಯೂ ಆಗಿರುವುದರಿಂದ ಈ ಹೆದ್ದಾರಿಯಲ್ಲಿ ಸಿಗುವ ಶೌಚಾಲಯಗಳ ಬಗ್ಗೆ ಒಂದು ಸಮೀಕ್ಷೆ ಮಾಡಿದ್ದೇನೆ. ಎನ್‌ಎಚ್ 75ರಲ್ಲಿ ಒಟ್ಟು 30 ಪೆಟ್ರೋಲ್ ಬಂಕ್‌ಗಳಿವೆ. 7 ಟೋಲ್‌ಗಳು ಸಿಗುತ್ತವೆ. ಮೂರು ಕೆಎಸ್‌ಆರ್‌ಟಿಸಿ ಬಸ್ ಸ್ಟ್ಯಾಂಡ್‌ಗಳಿವೆ. ಆದರೆ ಇಲ್ಲಿರುವ ಶೌಚಾಲಯಗಳ ಕುರಿತು ಯಾವುದೇ ನಾಮಫಲಕಗಳಿಲ್ಲ. ಹಲವು ಕಡೆ ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇಲ್ಲ. ಬಳಸಿದ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಹಾಕಲು ಎಲ್ಲೂ ಕಸದಬುಟ್ಟಿಗಳಿಲ್ಲ. ಟೋಲ್ ಘಟಕಗಳ ಬಳಿ ಇರುವ ಶೌಚಾಲಯಗಳಲ್ಲಿ ನೀರಿನ ಸರಬರಾಜು, ವಿದ್ಯುತ್ ವ್ಯವಸ್ಥೆ ಮತ್ತು ಭದ್ರತಾ ಸಿಬ್ಬಂದಿಯೂ ಇಲ್ಲ. ಟೋಲ್ ಬಳಿ ಇರುವ ಕೆಲವು ಶೌಚಾಲಯಗಳು ಸ್ಟೋರ್ ರೂಮ್‌ಗಳಾಗಿವೆ. ಟೋಲ್‌ಬಳಿ ನಂದಿನಿ ಬೂತ್‌ಗಳು ಇರುತ್ತವೆ. ನಂದಿನ ಬೂತಿನ ವಸ್ತುಗಳನ್ನು ಇಲ್ಲಿ ಇಡಲಾಗುತ್ತದೆ. ಯಾಕೆ ಹೀಗೆ ಎಂದು ಪ್ರಶ್ನೆ ಮಾಡಿದರೆ, 'ನಿಮಗೇನು ಸಂಬಂಧ?' ಎನ್ನುವ ಪ್ರತಿ ಪ್ರಶ್ನೆ ಬರುತ್ತದೆ' ಎನ್ನುತ್ತಾರೆ ಅರ್ಚನಾ.



ಶೌಚಾಲಯಗಳನ್ನು ಮಾತ್ರ ಕಟ್ಟಿಸಿ ಭಾರತವು ಬಯಲು ಬಹಿರ್ದೆಸೆ ಮುಕ್ತವಾಗಿದೆ ಎಂದರೆ ಅರ್ಥವಿಲ್ಲ. ಕಟ್ಟಿಸಿದ ಶೌಚಾಲಯದ ನಿರ್ವಹಣೆಯೂ ಆಗಬೇಕಿದೆ

ಅರ್ಚನಾ. ಕೆ.ಆರ್. ಸ್ವಚ್ಛತಾ ಪ್ರಚಾರಕಿ

'ಈ ಶೌಚಾಲಯಗಳ ಅವ್ಯವಸ್ಥೆ ಕುರಿತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಸಹಾಯವಾಣಿಗೆ ಕರೆ ಮಾಡಿ ದೂರನ್ನೂ ನೀಡಿದ್ದೇನೆ. ಆದರೆ, ಕರೆ ಸ್ವೀಕರಿಸಿದ ಅಧಿಕಾರಿಗಳು ಮದ್ಯ ಸೇವಿಸಿದ್ದರು ಮತ್ತು ಶೌಚಾಲಯಗಳ ಬಗ್ಗೆ ದೂರು ನೀಡಿದ್ದಕ್ಕಾಗಿ ರೇಗಾಡಿದರು. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಸಂಪರ್ಕಿಸಲೂ ಪ್ರಯತ್ನಿಸಿದೆ. ಆದರೆ ಅದು ಸಾಧ್ಯವಾಗಲಿಲ್ಲ. ಎನ್‌ಎಚ್‌ಎಐನ ಹಾಸನದ ಅಧಿಕಾರಿಯೊಬ್ಬರು ತಕ್ಕಮಟ್ಟಿಗೆ ಸ್ಪಂದಿಸಿದರಷ್ಟೆ' ಎಂದರು ಅರ್ಚನಾ.



ನೆಲಮಂಗಲದ ಟೋಲ್ ಬಳಿ ಇರುವ ಶೌಚಾಲಯದಲ್ಲಿ ಬಿಸ್ಲೆರಿ ಬಾಟಲಿಗಳನ್ನು ಸಂಗ್ರಹಿಸಿ ಇಟ್ಟಿದ್ದಾರೆ– ಚಿತ್ರ ಅರ್ಚನಾ ಕೆ.ಆರ್.

'ವರ್ಷದ ಹಿಂದೆ ವಿಡಿಯೊ ಕಾನ್ಫರೆನ್ಸ್‌ವೊಂದರಲ್ಲಿ ಸಚಿವ ನಿತಿನ್ ಗಡ್ಕರಿ ಅವರು ಹೆದ್ದಾರಿ ಬದಿ ಸ್ವಚ್ಛ ಶೌಚಾಲಯ ನಿರ್ಮಾಣದ ಕುರಿತು ಪ್ರಸ್ತಾಪಿಸಿದ್ದರು. ಪ್ರತಿ 50 ಕಿ.ಮೀ.ಗೆ ಒಂದು ಸ್ವಚ್ಛ ಶೌಚಾಲಯ ನಿರ್ಮಿಸಲಾಗುವುದು ಎಂದೂ ಎನ್‌ಎಚ್‌ಎಐ ಹೇಳಿತ್ತು. ಆದರೆ ಇದು ಕಾರ್ಯರೂಪಕ್ಕೆ ಬಂದಂತಿಲ್ಲ' ಎನ್ನುತ್ತಾರೆ ಅರ್ಚನಾ.

ಆರೋಗ್ಯದ ಮೇಲೆ ಪರಿಣಾಮ



'ಮೂತ್ರ ಕಟ್ಟುವುದು, ಸ್ವಚ್ಛ ಇಲ್ಲದ ಶೌಚಾಲಯ ಬಳಸುವುದು ಆರೋಗ್ಯದ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ. ಪುರುಷ– ಮಹಿಳೆ ಬೇಧ ಇಲ್ಲದೆ, ಆರೋಗ್ಯ ಸಮಸ್ಯೆಗಳು ಕಾಡುತ್ತವೆ. ತುಂಬಾ ಹೊತ್ತು ಮೂತ್ರ ಕಟ್ಟುವುದರಿಂದ, ಸ್ವಚ್ಛ ಇಲ್ಲದ ಶೌಚಾಲಯ ಬಳಸುವುದರಿಂದ ಮೂತ್ರನಾಳದ ಸೋಂಕು ಉಂಟಾಗುತ್ತದೆ' ಎನ್ನುತ್ತಾರೆ ಸಾಗರದ ಸ್ತ್ರೀರೋಗ ತಜ್ಞೆ ಡಾ. ಶ್ರೀಯಾ ಆರ್. ಭಾಗವತ್.

'ಮಹಿಳೆಯರಿಗೆ ಬಿಳಿ ಮುಟ್ಟಿನ ಸಮಸ್ಯೆ ಉಂಟಾಗಬಹುದು. ಗರ್ಭವತಿಯರಿಗೆ ಹೆಚ್ಚು ಹೊತ್ತು ಮೂತ್ರ ಕಟ್ಟಲು ಸಾಧ್ಯವಾಗುವುದಿಲ್ಲ. ಮಧುಮೇಹದಂಥ ರೋಗದಿಂದ ಬಳಲುತ್ತಿರುವವರಿಗೂ ಮೂತ್ರ ಕಟ್ಟುವುದು ಅಸಾಧ್ಯ' ಎಂದು ವಿವರಿಸುತ್ತಾರೆ ಶ್ರೀಯಾ.

'ಶೌಚಾಲಯಗಳಲ್ಲಿ ಹೆಚ್ಚಾಗಿ ಪಾಶ್ಚಿಮಾತ್ಯ ಮಾದರಿಯ ಕಮೋಡ್ ಇರುತ್ತದೆ. ಸ್ವಚ್ಛ ಮಾಡದ ಇಂತಹ ಕಮೋಡ್ ಅನ್ನು ಬಳಸುವುದರಿಂದ ಸೋಂಕು ಬಹುಬೇಗ ತಗುಲುತ್ತದೆ. ಆದ್ದರಿಂದ ಭಾರತೀಯ ಶೈಲಿಯಲ್ಲಿರುವ ಶೌಚಾಲಯದ ಬಳಕೆಯೇ ಹೆಚ್ಚು ಸೂಕ್ತ' ಎಂದು ಅವರು ಹೇಳುತ್ತಾರೆ.

'ಮೂತ್ರನಾಳದ ಸೋಂಕಿಗೆ ಒಳಗಾದರೆ, ಜ್ವರ ಬರುವುದು, ಮೂತ್ರ ಮಾಡುವಾಗ ಉರಿ ಆಗುತ್ತದೆ. ಈ ರೀತಿಯ ಲಕ್ಷಣಗಳು ಕಂಡುಬಂದರೆ, ಒಂದೆರಡು ದಿನ ಚೆನ್ನಾಗಿ ನೀರು ಕುಡಿದು ಪದೇ ಪದೇ ಮೂತ್ರ ವಿಸರ್ಜಿಸಿದರೆ ಉರಿಯುವುದು ಕಡಿಮೆ ಆಗುತ್ತದೆ. ಸೋಂಕು ಉಲ್ಬಣಗೊಂಡರೆ ವೈದ್ಯರನ್ನು ಸಂಪರ್ಕಿಸಬೇಕು' ಎನ್ನುವುದು ಶ್ರೀಯಾ ಅವರ ಸಲಹೆ.



ವೇದವ್ಯಾಸರ ಶಿವಪುರಾಣದ ಕುಮಾರಖಂಡಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 10

ತಾರಕನ ಸಂಹರಿಸಿದ ಸ್ಕಂದ

ಶತ್ರುನಿಷೂದನನಾದ ಶಿವಕುಮಾರನು ವೀರಭದ್ರನನ್ನು ತಡೆದ ನಂತರ, ತಾನೇ ತಾರಕನ ವಧೆಮಾಡಲು ದೊಡ್ಡ ಸೈನ್ಯದೊಡನೆ ಗರ್ಜಿಸುತ್ತಾ ಮುನ್ನುಗ್ಗಿದ. ಆ ಸಮಯದಲ್ಲಿ ದೇವತೆಗಳು, ಪ್ರಮಥಗಣಗಳು, ಋಷಿಗಳೆಲ್ಲ 'ಕುಮಾರನಿಗೆ ಜಯವಾಗಲಿ' ಎಂದು ಹೇಳುತ್ತಾ ಸ್ತೋತ್ರ ಮಾಡಿದರು. ತಾರಕನಿಗೂ ಕುಮಾರನಿಗೂ ಅತಿ ಭಯಂಕರವಾದ ಯುದ್ಧ ನಡೆಯಿತು. ಮಹಾಪರಾಕ್ರಮಿಗಳಾದ ವೀರರಿಬ್ಬರೂ ಶಕ್ತ್ಯಾಯುಧವನ್ನು ಹಿಡಿದು ಯುದ್ಧ ಮಾಡುತ್ತಿದ್ದರು. ಶಕ್ತ್ಯಾಯುಧದಿಂದ ಹೊಡೆದಾಡುತ್ತಿದ್ದರು. ತಮ್ಮ ಮೇಲೆ ಬೀಳುತ್ತಿದ್ದ ಏಟುಗಳನ್ನು ಪರಸ್ಪರ ತಪ್ಪಿಸಿಕೊಳ್ಳುತ್ತಾ ಕೆರಳಿದ ಸಿಂಹಗಳಂತೆ ಭಯಂಕರವಾಗಿ ಯುದ್ಧ ಮಾಡುತ್ತಿದ್ದರು. ವೈತಾಲಿಕ, ಖೇಚರಕ ಪ್ರಾಪತ ಮುಂತಾದ ಮಂತ್ರಗಳನ್ನು ಉಚ್ಚರಿಸುತ್ತಾ, ನಾನಾವರಸೆಗಳನ್ನು ತೋರುತ್ತಾ ಶಕ್ತ್ಯಾಯುಧವನ್ನು ಪ್ರಯೋಗಿಸುತ್ತಿದ್ದರು. ಯುದ್ಧವಿಶಾರದರಾದ ಅವರಿಬ್ಬರೂ ತಮ್ಮ ಅಪ್ರತಿಮ ಪರಾಕ್ರಮವನ್ನು ತೋರಿಸುತ್ತಿದ್ದರು.

ತಲೆ, ಕುತ್ತಿಗೆ, ತೊಡೆ, ಮಂಡಿ, ಸೊಂಟ, ಎದೆ, ಬೆನ್ನು ಮುಂತಾದ ಸ್ಥಳಗಳಿಗೆ ಗುರಿಯಿಟ್ಟು ಶಕ್ತ್ಯಾಯುಧದಿಂದ ಹೊಡೆದಾಡುತ್ತಿದ್ದರು. ಒಬ್ಬರನ್ನೊಬ್ಬರು ಕೊಲ್ಲಬೇಕೆಂಬ ಆಕಾಂಕ್ಷೆಯಿಂದ ವೀರನಾದವನ್ನು ಮಾಡುತ್ತಾ ಯುದ್ಧ ಮಾಡುವಾಗ ದೇವತೆಗಳೂ ಗಂಧರ್ವರೂ ಕಿನ್ನರರೂ ಆತಂಕದಿಂದ ನೋಡುತ್ತಿದ್ದರು. ಆ ಸಮಯದಲ್ಲಿ ಆಕಾಶದಲ್ಲಿ ಅಶರೀರವಾಣಿ ದೇವತೆಗಳನ್ನು ಸಮಾಧಾನ ಮಾಡಿತು. 'ತಾರಕಾಸುರನನ್ನು ಕುಮಾರನು ಕೊಲ್ಲುವನು. ನೀವೇನೂ ದುಃಖ ಪಡಬೇಡಿರಿ, ಸುಖವಾಗಿರಿ, ನಿಮಗಾಗಿಯೇ ಶಂಕರನು ಪುತ್ರರೂಪದಿಂದ ಹುಟ್ಟಿರುವನು' ಎಂದು ಹೇಳಿತು. ಆಕಾಶವಾಣಿ ಕೇಳಿ ದೇವತೆಗಳು ಸಮಾಧಾನ ತಾಳಿದರೆ, ಕುಮಾರನು ಮತ್ತಷ್ಟು ಉತ್ಸಾಹದಿಂದ ತಾರಕಾಸುರನನ್ನು ವಧೆಮಾಡಲು ಪ್ರಮಥಗಳೊಡನೆ ನುಗ್ಗಿ ತನ್ನ ಶಕ್ತ್ಯಾಯುಧದಿಂದ ತಾರಕನ ಎದೆಗೆ ಗುರಿಯಿಟ್ಟು ಬಲವಾಗಿ ಹೊಡೆದ. ಅದರ ಏಟನ್ನು ಲೆಕ್ಕಿಸದೆ ದೈತ್ಯಶ್ರೇಷ್ಠನಾದ ತಾರಕನು ಕೋಪಗೊಂಡು ತನ್ನ ಶಕ್ತ್ಯಾಯುಧದಿಂದ ಕುಮಾರನಿಗೆ ತನ್ನ ಆಯುಧದಿಂದ ಹೊಡೆದನು.

ತಾರಕನ ಶಕ್ತ್ಯಾಯುಧದ ಏಟಿನಿಂದ ಷಣ್ಮುಖನು ಮೂರ್ಛಿತನಾದ. ಸ್ವಲ್ಪ ಹೊತ್ತಿನಲ್ಲಿಯೇ ಚೇತರಿಸಿಕೊಂಡು ಎದ್ದು, ಮದಿಸಿದ ಸಿಂಹದಂತೆ ಅತಿ ಕೋಪದಿಂದ ತನ್ನ ಶಕ್ತ್ಯಾಯುಧದಿಂದ ತಾರಕನನ್ನು ಬಲವಾಗಿ ಹೊಡೆದ. ಇದನ್ನು ಕಂಡು ಮಹರ್ಷಿಗಳೆಲ್ಲರೂ ಕುಮಾರನ ಶೌರ್ಯವನ್ನು ಹೊಗಳಿದರು. ಯುದ್ಧವನ್ನು ನೋಡಲು ಬಂದ ದೇವ-ಗಂಧರ್ವ-ಕಿನ್ನರರೆಲ್ಲರೂ ಯುದ್ಧವನ್ನು ವಿಸ್ಮಯದಿಂದ ನೆಟ್ಟದೃಷ್ಟಿಯಿಂದ ನೋಡುತ್ತಿದ್ದರು. ಆ ಸಮಯದಲ್ಲಿ ವಾಯುವು ಸುಳಿದಾಡಲು ಸಮರ್ಥನಾಗಿ ನಿಶ್ಚಲನಾದ ಸೂರ್ಯನು ಪ್ರಭಾಹೀನನಾದ. ಪರ್ವತ, ವನ, ಮುಂತಾದ ಭೂ ಮೇಲ್ಮೈನ ಎಲ್ಲ ವಸ್ತುಗಳು ನಡುಗಿದವು. ಭಯಭೀತವಾದ ಪರ್ವತಗಳನ್ನು ನೋಡಿ 'ಎಲೈ ಪರ್ವತಗಳೇ, ನೀವು ಚಿಂತೆಯನ್ನು ಮಾಡಬೇಡಿರಿ. ಈಗ ನೀವು ನೋಡುತ್ತಿರುವಂತೆಯೇ, ಪಾಪಿ ತಾರಕನನ್ನು ಕೊಲ್ಲುವೆ' ಎಂದು ಸಮಾಧಾನ ಪಡಿಸಿದ. ಗಿರಿಜೆಯನ್ನೂ ಶಂಭುವನ್ನೂ ಸ್ಮರಿಸಿ ಶಕ್ತ್ಯಾಯುಧವನ್ನು ಕೈಗೆ ತೆಗೆದುಕೊಂಡನು. ಶಂಭುಸುತ ಅತ್ಯಂತ ಪ್ರಕಾಶಿಸುತ್ತಿದ್ದ ಶಕ್ತ್ಯಾಯುಧದಿಂದ ತಾರಕನಿಗೆ ಬಲವಾಗಿ ಹೊಡೆದಾಗ ಲೋಕಕಂಟಕನಾದ ತಾರಕನ ಶರೀರವು ಜರ್ಜರಿತವಾಗಿ ಕೆಳಗೆ ಬಿದ್ದಿತು. ಎಲ್ಲರೂ ನೋಡುತ್ತಿರುವಂತೆಯೇ, ಕುಮಾರನು ನೀಚನಾದ ತಾರಕನನ್ನು ಸಂಹಾರ ಮಾಡಿದ. ದೇವತೆಗಳೆಲ್ಲರೂ ಉಳಿದ ರಾಕ್ಷಸರನ್ನು ಕೊಂದುಹಾಕಿದರು. ಕೆಲ ರಾಕ್ಷಸರು ಹೆದರಿ ಓಡಿದರು.

ಮಗ ಜಯಶೀಲನಾದನೆಂಬ ವಿಷಯವನ್ನು ತಿಳಿದು ಶಿವನು ಪಾರ್ವತಿಯೊಡನೆ ಅಲ್ಲಿಗೆ ಬಂದ. ವಿಜಯಶಾಲಿಯಾದ ಕುಮಾರನನ್ನು ತೊಡೆಯ ಮೇಲೆ ಕೂರಿಸಿಕೊಂಡು ಮುದ್ದಿಸಿದ. ಪಾರ್ವತಿಯೂ ಸಹ ಸ್ಕಂದನನ್ನು ತೊಡೆಯ ಮೇಲೆ ಕೂರಿಸಿಕೊಂಡು ವಾತ್ಸಲ್ಯದಿಂದ ಮುದ್ದಿಸಿದಳು. ಹಿಮವಂತನು ತನ್ನ ಪುತ್ರಮಿತ್ರ-ಬಂಧುಬಳಗದವರೊಡನೆ ಬಂದು ಪಾರ್ವತಿ–ಪರಮೇಶ್ವರನ್ನೂ ಷಣ್ಮುಗನನ್ನೂ ಹೊಗಳಿದ. ಗೀತವಾದ್ಯಗಳಿಂದ ದೇವತೆಗಳು, ಪ್ರಮಥಗಣಗಳು, ಮುನಿಗಳು, ಸಿದ್ಧರು, ಚಾರಣರು ಅಂಜಲಿಬದ್ಧರಾಗಿ ಸ್ತೋತ್ರಮಾಡಿದರು. ಬ್ರಹ್ಮ-ವಿಷ್ಣು ಸಹ ಅವರೊಡನೆ ಸೇರಿ ಕುಮಾರನನ್ನು ಬಹುವಿಧವಾಗಿ ಸ್ತುತಿಸಿದರು. ನಂತರ ಈಶ್ವರನು ಜಗನ್ಮಾತೆಯಾದ ಪಾರ್ವತಿಯೊಡನೆಯೂ ತನ್ನ ಗಣಗಳೊಡನೆ ಕೂಡಿ ಕೈಲಾಸಪರ್ವತಕ್ಕೆ ತೆರಳಿದನು.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ರಕ್ತಗತವಾದ ಭಕ್ತಿ

ಯುಕ್ತಿಸಾಮ್ರಾಜ್ಯದಲಿ ಭಕ್ತಿ ಬಡ ಪರದೇಶಿ|
ಶಕ್ತಿ ಚತುರತೆಯುಡುಗಿ ನೀನು ಸೋತಂದು||
ಉತ್ಕ್ರಮಣದರೆಮನದಿ ದೈವವನು ಪಿಡಿದೇನು?|
ಭಕ್ತಿ, ರಕ್ತದಿ ಪರಿಗೆ – ಮಂಕುತಿಮ್ಮ ||501||

ಪದ-ಅರ್ಥ: ಚತುರತೆಯುಡುಗಿ = ಚತುರತೆ + ಉಡುಗಿ, ಉತ್ಕ್ರಮಣದರೆಮನದಿ = ಉತ್ಕ್ರಮಣದ (ಮರಣ ಕಾಲದಲ್ಲಿ) + ಅರೆಮನದಿ (ಅರ್ಧ ಮನಸ್ಸಿನಿಂದ), ಪರಿಗೆ = ಹರಿದರೆ.

ವಾಚ್ಯಾರ್ಥ: ಯುಕ್ತಿಯನ್ನು ಬೆಳೆಸುವ ಪ್ರಪಂಚದಲ್ಲಿ ಭಕ್ತಿ ಬಡಪರದೇಶಿಯಾಗುತ್ತದೆ ಎಂದು ಶಕ್ತಿ, ಚತುರತೆಗಳು ಉಡುಗಿ ಹೋಗಿ ನೀನು ಸೋತಾಗ, ಪ್ರಾಣೋತ್ಕ್ರಮಣ ಸಮಯದಲ್ಲಿ ದೇವರನ್ನು ನೆನದರೆ ಫಲವೇನು? ಭಕ್ತಿ ರಕ್ತದಲ್ಲೇ ಹರಿಯುತ್ತಿರಬೇಕು.

ವಿವರಣೆ: ಭಕ್ತಿ ಎಂದರೆ ಸಮರ್ಪಣೆ. ಅದು ಸರ್ವಾರ್ಪಣಭಾವಕ್ಕೆ ಮತ್ತೊಂದು ಹೆಸರು. ವ್ಯಕ್ತಿ ಭಗವಂತನೊಡನೆ ಸಂಯೋಗವಾಗುವ, ಅದ್ವೈತವಾಗುವ ಸ್ಥಿತಿ. ಈ ಸ್ಥಿತಿ ನಾಟಕದಿಂದ, ಚಾತುರ್ಯದಿಂದ ಲಭಿಸುವುದಿಲ್ಲ. ಆದರೆ ಬಹಳ ಕಡೆಗೆ ಭಕ್ತಿ ಒಂದು ಪ್ರದರ್ಶನದ ಕಾರ್ಯಕ್ರಮವಾಗುತ್ತಿದೆ. 'ಮೊನ್ನೆ ನಮ್ಮ ಮನೆಯಲ್ಲಿ ಭರ್ಜರಿ ಪೂಜೆ ಮಾಡಿಸಿದ್ದೆ. ಐದು ನೂರು ಜನರಿಗೆ ಊಟದ ವ್ಯವಸ್ಥೆ ಮಾಡಿದ್ದೆ. ಗೃಹಮಂತ್ರಿಗಳು ಬಂದಿದ್ದರು. ಅವರೂ ತುಂಬ ಸಂತೋಷಪಟ್ಟರು' ಎಂದು ಹೇಳುವಾಗ ಭಕ್ತಿ ಅಂಶ ಎಷ್ಟು ಎಂದು ಹುಡುಕಬೇಕು. ಉಳಿದದ್ದೆಲ್ಲ ತೋರಿಕೆ ಮತ್ತು ಬಂದ ಅತಿಥಿಗಳಿಂದ ಲಾಭ ಪಡೆಯುವ ಯುಕ್ತಿ. ಇಂಥ ಯುಕ್ತಿಗಳೇ ಮುಖ್ಯವಾದಾಗ ಭಕ್ತಿಗೆ ಎಲ್ಲಿ ಸ್ಥಾನ? 'ಆರಿಕೆ ಬಿತ್ತಿದ ಗಿಡುಪನ ಹೂವ ಕೊಯಿದು, ಊರೆಲ್ಲರೂ ಕಟ್ಟಿಸಿದ ಕೆರೆಯ ನೀರ ತಂದು, ನಾಡೆಲ್ಲರೂ ನೋಡಿಯೆಂದು ಪೂಜಿಸುತ್ತ, ಪೂಜಿಸಿದ ಪುಣ್ಯ, ಹೂವಿಗೋ? ನೀರಿಗೋ? ನಾಡೆಲ್ಲಕ್ಕೋ, ಪೂಜಿಸಿದಾತಗೋ? ಇದ ನಾನರಿಯೆ, ನೀ ಹೇಳೆಂದನಂಬಿಗ ಚೌಡಯ್ಯ'. ಹೀಗೆ ಊರಿನವರೆಲ್ಲ ನೋಡಲಿ ಎಂದು ಮಾಡಿದ ಪೂಜೆಯ ಪುಣ್ಯ ಯಾರಿಗೆ ಎಂದು ಕೇಳಿದ ಅಂಬಿಗರ ಚೌಡಯ್ಯನ ಮಾತು ಎದೆಗೆ ತಾಗಬೇಕು. ಪೂಜೆಯೊಂದು ಯುಕ್ತಿಯ ಕಾರ್ಯವೇ ಅಥವಾ ಭಕ್ತಿಯೇ?

'ಶಿವಭಕ್ತಿಯೆಂಬುದು ಯುಕ್ತಿಯ ಪರಿಯಂತಲ್ಲ, ಮೂಗರು ಕಂಡ ಕನಸಿನಂತಿಪ್ಪುದು ಕಾಣಿರೆ ಹೇಳಿ ಕೇಳಿ ಮಾಡುವುದು ಯುಕ್ತಿಭಕ್ತಿ, ಸಾಧಕಾಂಗದಿಂದ ಮಾಡುವುದು ಅಭ್ಯಾಸ ಭಕ್ತಿ, ಮನಕೂತು ಮಾಡುವುದು ಮುಕ್ತಿಭಕ್ತಿ, ಕೇಡಿಲ್ಲದೆ ಮಾಡುವುದು ನಿತ್ಯಭಕ್ತಿ, ಇದ್ದಂತಿದ್ದು ನಿಜವಪ್ಪುದು ನಿಜಭಕ್ತಿ, ಈ ನಿಜದಲ್ಲಿ ಭರಿತರು ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರು'. ಆದಯ್ಯ ಹೇಳುತ್ತಾರೆ, ಶಿವಭಕ್ತಿಯೆಂಬು-ದು ಮೂಗ ಕಂಡ ಕನಸಿನಂತೆ. ಅದನ್ನು ವಿವರಿಸಲು, ವರ್ಣಿಸಲು ಆಗದು. ಅದು ಕೇವಲ ಅನುಭವಕ್ಕೆ ದಕ್ಕುವುದು. ಆದರೆ ಯುಕ್ತಿ, ಚತುರತೆಗಳು ಉಡುಗಿ ಹೋದಾಗ, ಮರಣಕಾಲ ಸನ್ನಿನಿತವಾದಾಗ, ದೇವರನ್ನು ನೆನದರೆ ಏನು ಫಲ? ಭಕ್ತಿಯೆಂಬುದು ರಕ್ತಗತವಾದಾಗ ಸಾರ್ಥಕತೆ. ❖

ದಿನ ಭವಿಷ್ಯ

ಶುಕ್ರವಾರ ನವೆಂಬರ್ 19, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ವಿಶಾಖಾ ಪೂರ್ಣಿಮಾ ಗಂ. 15-27 (ಹ. 12-37) ಶುಕ್ರವಾರ ನಿತ್ಯ ನಕ್ಷತ್ರ ಕೃತ್ತಿಕಾ ಗಂ. 52-29 (ರಾ. 3-25) ಪರಿಘ ನಾಮ ಯೋಗ ಗಂ. 53-16 ಬವ ಕರಣ ಗಂ. 15-27 ವಿಷ ಗಂ. 19-39 ಅಮೃತ ಗಂ 46-8: ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-22 ಸೂರ್ಯಾಸ್ತ: 5-46 ಅದೃಷ್ಟ ಸಂಖ್ಯೆ 5 7

ಮೇಷ: ಹಣ ಹೊಂದಿಸಲು ಬೇರೆಯವರ ಸಹಾಯವನ್ನು ಯಾಚಿಸಲಿದ್ದೀರಿ. ಔಷಧ ಸೇವನೆಯಲ್ಲಿ ಮುಂಜಾಗೃತೆ ಅಗತ್ಯ. ಮನಸ್ಸಿಗೆ ಸಂಬಂಧಿಸಿದ ವಿಷಯವನ್ನು ಬೇರೆಯವರಲ್ಲಿ ನಿವೇದಿಸಿಕೊಳ್ಳಿ.

ವೃಷಭ: ಸತ್ಕಾರ್ಯದಲ್ಲಿ ಪಾಲ್ಗೊಳ್ಳುವಿಕೆ. ಹಳೆಯ ವೈಷಮ್ಯ ಗರಿಗೆದರುವ ಸಾಧ್ಯತೆ. ವಿದ್ಯಾರ್ಥಿಗಳು ಸಮಾಧಾನ ಚಿತ್ತದಿಂದ ವ್ಯವಹರಿಸುವುದು ಉತ್ತಮ. ವಿಪರೀತವಾದ ಖರ್ಚು.

ಮಿಥುನ: ಅಧಿಕಾರಿಗಳ ಸಹಕಾರದಿಂದ ಕಾರ್ಯದಲ್ಲಿ ಪ್ರಗತಿ. ಮನಸ್ಸಿಗೆ ಸಂಬಂಧಪಟ್ಟ ವ್ಯವಹಾರ ನಡೆಸುವುದು ಉಚಿತವಲ್ಲ. ಕೃಷಿ ಕ್ಷೇತ್ರದಲ್ಲಿ ಸಾಧಾರಣ ಪ್ರಗತಿ.

ಕರ್ಕಾಟಕ: ಅದೃಷ್ಟದ ದಿನಕ್ಕಾಗಿ ಕಾಯುತ್ತಿರುವ ನಿಮಗೆ ಭಗವಂತನ ದಯೆ ಇದೆ. ನಿರೀಕ್ಷಿತ ಮಟ್ಟಕ್ಕೆ ನಿಮಗೆ ಗೆಲುವು ಕಟ್ಟಿಟ್ಟ ಬುತ್ತಿ. ಹಣಕಾಸಿನ ವ್ಯವಹಾರ-ದಲ್ಲಿ ತೃಪ್ತಿದಾಯಕ ಬದುಕು.

ಸಿಂಹ: ದೂರದ ಬಂಧುಗಳ ಆಗಮನದಿಂದ ತೀರ್ಥಯಾತ್ರೆ ಬಗ್ಗೆ ನಿಷ್ಕರ್ಷೆ, ರತ್ನ ವ್ಯಾಪಾರಿಗಳಿಗೆ ಅನುಕೂಲ. ಗುಡಿಕೈಗಾರಿಕೆ ನಡೆಸುವವರಿಗೆ ಪ್ರಗತಿ. ಸಂತೋಷದಾಯಕ ದಿನ.

ಕನ್ಯಾ: ಯಂತ್ರಾಗಾರಗಳಲ್ಲಿ ಅಗ್ನಿಯಿಂದ ಎಚ್ಚರ ಅಗತ್ಯ. ಅನಿರೀಕ್ಷಿತವಾದ ತಲೆನೋವಿಗೆ ಧೃತಿಗೆಡಬೇಕಾಗಿಲ್ಲ. ವೈದ್ಯರಿಗೆ ಕಾಲುನೋವಿನ ಸಾಧ್ಯತೆ. ಮಹಿಳಾ ಉದ್ಯಮಿಗಳಿಗೆ ಸಂತೃಪ್ತಿ.

ತುಲಾ: ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಆಸಕ್ತಿ ತೋರಲಿದ್ದೀರಿ. ಹಣಕಾಸಿನ ಬಗ್ಗೆ ಚಿಂತಿಸುವುದು ಬೇಡ. ಗೊಂದಲಮಯ ಬದುಕಿನಿಂದ ಮುಕ್ತಿ.

ವೃಶ್ಚಿಕ: ಮನೆಯಲ್ಲಿನ ರಂಪಾಟಗಳು ಜಾಸ್ತಿಯಾಗುವ ಸಾಧ್ಯತೆ. ತಾಳ್ಮೆಯಿಂದಾಗಿ ಅನಿರೀಕ್ಷಿತ ಬೆಳವಣಿಗೆಯಿಂದ ನೆಮ್ಮದಿ. ಸರ್ಕಾರಿ ನೌಕರರಿಗೆ ಪ್ರಶಂಸೆಯ ದಿನ. ಚಿಲ್ಲರೆ ವ್ಯಾಪಾರಿಗಳಿಗೆ ಲಾಭ.

ಧನು: ಮನಸ್ಸಿಗೆ ಅನುಕೂಲವಾದ ಅನೇಕ ವಿಷಯಗಳಲ್ಲಿ ಸಾಫಲ್ಯತೆ ಪಡೆಯಲಿದ್ದೀರಿ. ವ್ಯತಿರಿಕ್ತವಾದ ವ್ಯವಹಾರದಲ್ಲಿ ತೊಡಗುವುದು ಬೇಡ. ಸಹೋದರರಿಂದ ಕಾರ್ಯಕ್ಕೆ ಅನುವು.

ಮಕರ: ಹಿರಿಯ ಅಧಿಕಾರಿಗಳ ಭೇಟಿಯಿಂದ ಮುಂದೂಡಲ್ಪಡುತ್ತಿರುವ ಕಾರ್ಯಗಳು ಶೀಘ್ರದಲ್ಲಿ ನೆರವೇರಲಿವೆ. ಕುಶಲ ಕರ್ಮಿಗಳಿಗೆ ಅನುಕೂಲ. ಬಂಧುಗಳಿಂದ ಆರ್ಥಿಕ ಸಹಾಯ.

ಕುಂಭ: ಮಾನಸಿಕ ಸ್ಥೈರ್ಯ. ಕೌಟುಂಬಿಕ ಬಿಕ್ಕಟ್ಟಿನ ಕುರಿತು ಚರ್ಚೆ, ಸಂಗಾತಿಯಿಂದ ಸಮಾಧಾನದ ಜೊತೆಗೆ ನೆರವು ದೊರೆಯಲಿದೆ.

ಮೀನ: ಮನಸ್ಸಿಗೆ ಸಂಬಂಧಪಟ್ಟರೂ ಆರೋಗ್ಯದ ಬಗ್ಗೆ ಆಲಸ್ಯ ಬೇಡ. ವಾಹನ ವ್ಯಾಪಾರದಲ್ಲಿ ಪ್ರಗತಿ. ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಅನಿರೀಕ್ಷಿತ ಲಾಭ. ವನ್ಯ ಸಂಪತ್ತಿಗೆ ಅಧಿಕವಾದ ಪರಿಶ್ರಮ.

ನಿಮ್ಮ ಜನ್ಮದಿನ 19-ನವೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ನಿಮ್ಮ ಮಹತ್ತರ ಕಾರ್ಯಯೋಜನೆಗಳು ನಿರಾಯಾಸವಾಗಿ ಸಾಗಿ ನೆಮ್ಮದಿಯತ್ತ ನಿಮ್ಮ ಪಯಣ. ದೂರ ಪ್ರಯಾಣ ಸಾಧ್ಯತೆ. ಅನಿರೀಕ್ಷಿತವಾಗಿ ತಲೆದೋರಬಹುದಾದ ಸಮಸ್ಯೆಗಳಿಗೆ ಜಾಗರೂಕರಾಗಿ ವ್ಯವಹರಿಸುವುದರಿಂದ ಪರಿಹಾರ ಕಾಣಲಿದ್ದೀರಿ.

ಪದಬಂಧ 4782


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ದುಃಖ ಅಥವಾ ಉಮ್ಮಳ (3)
3.ಮಾನಿನಿಯ ಬಗ್ಗೆ ಸಂದೇಹವೇ? (3)
5.ಎಲ್ಲವೂ ನಶ್ವರ ಎನ್ನುತ್ತಿರುವ ಮನುಷ್ಯ (2)
6.ಪೇರಿಸಿಕೊಂಡಿರುವ ಸಾಮಾನುಗಳ ದುರಸ್ತಿ (3)
7. ಸಾವನ್ನು ತರುವವನು (2)
9.ಜ್ವಾಲಾಮುಖಿಯಿಂದ ಹೊಮ್ಮುವ ಧಾತುಗಳ ರಸ (4)
10.ಈತ ಸಾಕ್ಷಾತ್ಕಾರ ಹೊಂದಿದವನು (4)
11.ತಟಕ್ಕನೆ ತಲುಪಿದ ತಟಾಕದ ದಡ (2)
13.ಪದ್ಮರಾಗಕ್ಕೆ ಅಂಟಿರುವ ಹೂವಿನ ಧೂಳು (3)
15.ಸರೋವರದ ಬಳಿಯಿರುವ ಮಾಲೆ (2)
16.ಭಾಗಲಬ್ಧ ಗೊತ್ತಿರದ ಜಿಪುಣ (3)
17. ದಿಗಂತ ರೇಖೆ (3)

ಮೇಲಿಂದ ಕೆಳಕ್ಕೆ

1.ಮದುವೆ ಗಂಡು ನೀಡಿರುವ ವಿಸ್ತಾರ ನಿರೂಪಣೆ (3)
2. ಪ್ರಜ್ವಲಿಸುವ ಬೆಂಕಿಯಿದು (3)
3.ಜರ್ಜರಿತ ವಸ್ತುಗಳನ್ನು ಮಾರುವ ಅಂಗಡಿ (3)
4. ನಿಶ್ಚಿತಾರ್ಥದ ಮೊದಲೆರಡು ವರ್ಣದಿಂದಾದ ಗೊತ್ತುವಳಿ (3)
5. ಕಾಲುಗುರಿನಿಂದ ತಲೆಯ ಮುಡಿಯವರೆಗೆ (5)
8.ಮರದಲ್ಲಿರುವವನಿಗೆ ಚಿತ್ತವಿಕಲ್ಪವೇ? (5)
12.ಹಿಸ್ಸೆ ಕೇಳಿ ಬಂದಿರುವ ಅಂಚೆ (3)
13.ಹಾಡು ಹೇಳಿ ಗಿಟ್ಟಿಸಿಕೊಂಡಿರುವ ಮಡಲು (3)
14.ಬೆಳಕು ಕಿಂಡಿ ಇಲ್ಲಿದೆ (3)
15. ಸರೋವರದಲ್ಲಿ ಹುಟ್ಟಿದುದು (3)



4781ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಳ್ಳಕ 3.ಪಗಾರ 5.ಕರೆ 6.ಟಗರು 7.ನೆಪ 9.ಸೆಹ 11.ಕವಚ 13.ತೆನೆ 14.ಪರಾತ 15.ಸಿಡಿಲು

ಮೇಲಿಂದ ಕೆಳಕ್ಕೆ: 1.ಅಕ್ಕರೆ 2.ಕರಟ 3.ಪನ್ನೀರು 4.ರವಾನೆ 5.ಕತ್ತಿವರಸೆ 8.ಪರ್ಯಾಲೋಚನೆ 10.ಹಡಪ 11.ಕಡಿತ 12.ಚಪ್ರಾಸಿ 13.ತೆವಲು

ಸುಡೊಕು 5168

	2	1		8				
			1		6			
3		5		2			8	
	8	7					1	
		4	7	6	3	8		9
5	9						7	
	3	2		7		1		5
1			2		5			
	5			4		2	3	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5167 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ನಿರಂತರ ಮಳೆ: ಕಾಫಿ ಕೊಯ್ಲಿಗೆ ಅಡ್ಡಿ • ಮೊಳಕೆಯೊಡೆದ ಭತ್ತ • ಮನೆಗಳು ಕುಸಿತ

ಮಂಡ್ಯ: ಕುಸಿದ ಐತಿಹಾಸಿಕ ಜನಾರ್ದನ ದೇಗುಲ

ಪ್ರಜಾವಾಣಿ ವಾರ್ತೆ



ಕಿಕ್ಕೇರಿಯಲ್ಲಿರುವ ಹೊಯ್ಸಳರ ಕಾಲದ ಜನಾರ್ದನ ದೇಗುಲವು ಮಳೆಯಿಂದ ಕುಸಿದು ಬಿದ್ದಿರುವುದು –ಪ್ರಜಾವಾಣಿ ಚಿತ್ರ

ಮೈಸೂರು/ಮಂಡ್ಯ/ಕೊಡಗು/ಚಾಮರಾಜನಗರ/ಹಾಸನ: ವಾರದಿಂದ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದ ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕು, ಕಿಕ್ಕೇರಿಯ ಐತಿಹಾಸಿಕ ಜನಾರ್ದನ ದೇಗುಲದ ಗೋಡೆ ಕುಸಿದಿದೆ.

ಹೊಯ್ಸಳರ ಕಾಲದ ದೇಗುಲದ ಗೋಡೆಗಳ ಮೇಲೆ ಸುಂದರ ಕೆತ್ತನೆಯ ಮೂರ್ತಿಗಳಿದ್ದವು. ಗೋಡೆ ಕುಸಿದಿದ್ದರಿಂದ ಶಿಲ್ಪಕಲಾ ಮೂರ್ತಿಗಳು ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ದೇಗುಲದಲ್ಲಿದ್ದ ಜನಾರ್ದನ ಮೂರ್ತಿ ನ್ಯೂಯಾರ್ಕ್ ಮ್ಯೂಸಿಯಂನಲ್ಲಿದ್ದು, ಅದನ್ನು ವಾಪಸ್ ತರುವ ಪ್ರಯತ್ನಗಳು ನಡೆದಿದ್ದವು.

ಭಾರಿ ಮಳೆಯಿಂದಾಗಿ ಕೆ.ಆರ್. ಪೇಟೆ ಬಸ್ ನಿಲ್ದಾಣ ಜಲಾವೃತಗೊಂಡಿತ್ತು.

ಕೊಡಗಿನಲ್ಲಿ ಮಳೆಯಿಂದ ಕಾಫಿ ಕೊಯ್ಲು ಸಾಧ್ಯವಾಗದೆ ಹಣ್ಣಾಗಿರುವ ಅರೇಬಿಕಾ ಕಾಫಿ ನೆಲಕ್ಕೆ ಉದುರಿದೆ. ಸೋಮವಾರಪೇಟೆ, ಶನಿವಾರಸಂತೆ, ಕೊಡ್ಲಿಪೇಟೆ, ನಾಪೋಕ್ಲು ಭಾಗದಲ್ಲಿ ಕೊಯ್ಲು ಮಾಡಿರುವ ಕಾಫಿಯನ್ನು ಒಣಗಿಸಲು ಸಾಧ್ಯವಾಗಿಲ್ಲ, ನಷ್ಟವಾಗಿದೆ ಎಂದು ಬೆಳೆಗಾರರು ನೋವು ತೋಡಿಕೊಂಡಿದ್ದಾರೆ.

ಡಿಸೆಂಬರ್ ಮೊದಲ ವಾರದ ವೇಳೆಗೆ ರೋಬಸ್ಟಾ ಕಾಫಿ ಕಾಯ್ಲು ಸಹ ಆರಂಭವಾಗಬೇಕಿತ್ತು. ನಿರಂತರ ಮಳೆಯಿಂದ ಮಣ್ಣುಪಾಲಾಗುತ್ತಿದೆ.

'ಕಾಫಿ ಬೆಳೆ ನಷ್ಟ ಸಮೀಕ್ಷೆಯನ್ನು ಸಮರ್ಪಕವಾಗಿ ಮಾಡಬೇಕು. ಜನವರಿಯಿಂದ ಸೆಪ್ಟೆಂಬರ್ ತನಕ ಮಾತ್ರ ಸಮೀಕ್ಷೆ ನಡೆಸಲಾಗಿದೆ. ಅಕ್ಟೋಬರ್ ಹಾಗೂ ನವೆಂಬರ್‌ನಲ್ಲೂ ಅಕಾಲಿಕವಾಗಿ ಮಳೆ ಸುರಿಯುತ್ತಿದ್ದು, ಮರು ಸಮೀಕ್ಷೆ ನಡೆಸಬೇಕು. ಈ ವರ್ಷ ಅಪಾರ ನಷ್ಟವಾಗಿದೆ' ಎಂದು ಬೆಳೆಗಾರರ ಒಕ್ಕೂಟದ ಉಪಾಧ್ಯಕ್ಷ ಡಾ.ಸಣ್ಣುವಂಡ ಕಾವೇರಪ್ಪ ತಿಳಿಸಿದ್ದಾರೆ.

ಹಾಸನ ಜಿಲ್ಲೆಯಲ್ಲಿ ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದ ಕಟಾವಿಗೆ ಬಂದಿದ್ದ ರಾಗಿ, ಮೆಕ್ಕೆಜೋಳಕ್ಕೆ ಹೆಚ್ಚು ಹಾನಿಯಾಗಿದೆ. ಮಳೆ ಹೆಚ್ಚಾಗಿ ರಾಗಿ ಮೊಳಕೆಯೊಡೆಯುತ್ತಿದೆ. ಕಾಫಿ ಹಣ್ಣುಗಳು ಉದುರುತ್ತಿವೆ. ಚನ್ನರಾಯಪಟ್ಟಣ ತಾಲ್ಲೂಕು ಗೌಡಗೆರೆಯಲ್ಲಿ ಮೂರು ಮನೆಗಳಿಗೆ ಹಾನಿಯಾಗಿದೆ.

ಚಾಮರಾಜನಗರ ಜಿಲ್ಲೆಯಾದ್ಯಂತ ಮಳೆ ಮುಂದುವರಿದಿದೆ. ಜಮೀನುಗಳಲ್ಲಿ ನೀರು ನಿಂತಿರುವುದರಿಂದ ಕೃಷಿ ಚಟುವಟಿಕೆ ಸ್ಥಗಿತಗೊಂಡಿದ್ದು, ಬೆಳೆ ಇನ್ನಷ್ಟು ನಷ್ಟವಾಗುವ ಭೀತಿ ಎದುರಾಗಿದೆ.

ಎರಡು ವಾರಗಳಿಂದ ಸುರಿಯುತ್ತಿರುವ ಮಳೆಗೆ ಜಿಲ್ಲೆಯಲ್ಲಿ 100ಕ್ಕೂ ಹೆಚ್ಚು ಮನೆಗಳು ಕುಸಿದಿದ್ದು, ಹನೂರು ತಾಲ್ಲೂಕು ಒಂದರಲ್ಲಿಯೇ 45 ಮನೆಗಳು ಕುಸಿದಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಮೈಸೂರು ನಗರ ಹಾಗೂ ಸುತ್ತಲಿನ ಪ್ರದೇಶದಲ್ಲಿ ಜಿಟಿಜಿಟಿ ಮಳೆಯಾಗಿದೆ.

ಕಾಲುವೆಯಲ್ಲಿ ಕೊಚ್ಚಿಹೋದ ಮಹಿಳೆ

ಶ್ರೀನಿವಾಸಪುರ (ಕೋಲಾರ): ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ದಿವಂಗತ ಕೆ.ಎಸ್.ರೆಡ್ಡಪ್ಪ ಅವರ ಪತ್ನಿ ಅಮರಾವತಿ (53) ಅವರು ತಮ್ಮ ತೋಟದಿಂದ ಮನೆಗೆ ಹಿಂದಿರುಗುವಾಗ ಎ.ಕೊತ್ತೂರು ಗ್ರಾಮದ ಬಳಿ ಕಾಲುವೆ ನೀರಿನಲ್ಲಿ ಕೊಚ್ಚಿಹೋಗಿದ್ದಾರೆ.

ಅಮರಾವತಿ ಅವರು ಕುಳಿತಿದ್ದ ಬೈಕ್ ಆಯತಪ್ಪಿ ಕಾಲುವೆ ದಡದಲ್ಲಿ ಉರುಳಿ ಬಿದ್ದಿದೆ. ರಭಸವಾಗಿ ಹರಿಯುತ್ತಿದ್ದ ಕಾಲುವೆಯ ನೀರಿನಲ್ಲಿ ಅವರು ಕೊಚ್ಚಿ ಹೋಗಿದ್ದಾರೆ. ಬೈಕ್ ಸವಾರ ಕೈಗೆ ಸಿಕ್ಕ ಕಲ್ಲೊಂದನ್ನು ಹಿಡಿದುಕೊಂಡು ಜೀವ ಉಳಿಸಿಕೊಂಡಿದ್ದಾರೆ.

ಮಳೆ: ಶಾಲೆ ಕಟ್ಟಡ ಕುಸಿತ

ಹೊಸದುರ್ಗ: ತಾಲ್ಲೂಕಿನಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿದ್ದು, ಬುಧವಾರ ರಾತ್ರಿ ವೆಂಗಳಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಗೋಡೆ ಕುಸಿದಿದೆ.

ರಾತ್ರಿ ಹೊತ್ತು ಶಾಲೆಯ ಗೋಡೆ ಕುಸಿದಿದ್ದರಿಂದ ಯಾವುದೇ ಅನಾಹುತ ಆಗಿಲ್ಲ. ಮಕ್ಕಳು ಗುರುವಾರ ಬಯಲಲ್ಲಿ ಕುಳಿತು ಪಾಠ ಕೇಳಿದರು.

ಮತ್ತೋಡು, ಮಾಡದಕೆರೆ ಸೇರಿ ತಾಲ್ಲೂಕಿನ ಹಲವೆಡೆ ಗುರುವಾರವೂ ಮಳೆಯಾಗಿದೆ. ತಾಲ್ಲೂಕಿನಲ್ಲಿ 10 ಮನೆಗಳಿಗೆ ಹಾನಿಯಾಗಿದೆ. ವೇದಾವತಿ ನದಿಯಲ್ಲಿ ಒಳಹರಿವು ಹೆಚ್ಚಾಗಿದೆ.

ಚಿತ್ರದುರ್ಗ ಜಿಲ್ಲೆಯ ಹಲವೆಡೆ ಮಳೆ ಮುಂದುವರಿದಿದ್ದು, ಬುಧವಾರ ಸುರಿದ ಮಳೆಯಿಂದ ಒಟ್ಟು 34 ಮನೆಗಳಿಗೆ ಹಾನಿಯಾಗಿದೆ.

ಚಿತ್ರದುರ್ಗ ತಾಲ್ಲೂಕಿನಲ್ಲಿ 9 ಮನೆ, ಚಳ್ಳಕೆರೆ, ಹೊಳಲ್ಕೆರೆ ತಾಲ್ಲೂಕಿನಲ್ಲಿ ತಲಾ ಒಂದು, ಹಿರಿಯೂರು 11, ಮೊಳಕಾಲ್ಮುರು ತಾಲ್ಲೂಕಿನಲ್ಲಿ 2 ಮನೆ ಸೇರಿ ಜಿಲ್ಲೆಯಲ್ಲಿ 34 ಮನೆಗಳಿಗೆ ಹಾನಿಯಾಗಿವೆ ಎಂದು ಜಿಲ್ಲಾಧಿಕಾರಿ ಕಚೇರಿ ತಿಳಿಸಿದೆ.

ನೆಲಕ್ಕುರುಳುತ್ತಿರುವ ಭತ್ತ; ರೈತರಿಗೆ ಭಾರಿ ನಷ್ಟ

ಶಿವಮೊಗ್ಗ: ಮಳೆಯ ಪರಿಣಾಮ ಕಟಾವಿಗೆ ಬಂದ ಭತ್ತ ನೆಲಕ್ಕುರುಳುತ್ತಿದೆ. ಮೆಕ್ಕೆಜೋಳದ ತೆನೆಗಳು ಮೊಳಕೆಯೊಡೆಯುತ್ತಿವೆ.

ಅಡಿಕೆ ಬೆಳೆಗಾರರು ಕಂಗಾಲು: ಹೊಸನಗರ ತಾಲ್ಲೂಕಿನಲ್ಲಿ ನಿರಂತರ ಮಳೆಗೆ ಅಡಿಕೆಯು ಮರದಲ್ಲೇ ಒಣಗಿ ಗೋಟಾಗುತ್ತಿದೆ. ಬಿದ್ದ ಅಡಿಕೆ ಆಯ್ದುಕೊಳ್ಳಲೂ ಸಾಧ್ಯವಾಗುತ್ತಿಲ್ಲ. ಮಳೆ ನೀರಿನಲ್ಲಿ ಕೊಚ್ಚಿಹೋಗಿ ಹಳ್ಳ ಸೇರುತ್ತಿವೆ. ಬಿಸಿಲು ಬೀಳದೆ ಅಡಿಕೆ ಸಂಸ್ಕರಣೆಯೂ ಕಷ್ಟವಾಗಿದೆ.

ಎಲೆಚುಕ್ಕಿ ರೋಗ ಉಲ್ಬಣ: ನಿರಂತರ ಮಳೆಯಿಂದಾಗಿ ತಾಲ್ಲೂಕಿನ ವಿವಿಧೆಡೆ ಎಲೆಚುಕ್ಕಿ ರೋಗ ಉಲ್ಬಣವಾಗಿದೆ. ರೋಗ ಹತೋಟಿಗೆ ಔಷಧ ಸಿಂಪಡಣೆ ಮಾಡಲು ಮಳೆ ಬಿಡುವು ನೀಡಿಲ್ಲ.

ಕುಸಿದ ಮನೆಗಳು: ಜಿಲ್ಲೆಯ ವಿವಿಧೆಡೆ ವಾರದಿಂದ ಈಚೆಗೆ 28 ಮನೆಗಳು ಕುಸಿದಿವೆ. ಅಂತಹ ಮನೆಗಳಲ್ಲಿ ವಾಸವಿದ್ದವರು ಶಾಲೆ, ನೆಂಟರಿಷ್ಟರ ಮನೆಗಳಲ್ಲಿ ಆಶ್ರಯ ಪಡೆದಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	18,678	18,469
ಹಾರಂಗಿ	2,859	2,858.04	1,472	891
ಕಬಿನಿ	2,284	2,283.96	4,680	3,800
ಹೇಮಾವತಿ	2,922	2,909.85	5,194	2,330
ಲಿಂಗನಮಕ್ಕಿ	1,819	1,813.60	5,035	-
ಸೂಪಾ (ಮೀ)	564	555.34	2,051.10	2,485.99
ಮಾಣಿ	594.36	586.72	-	-
ತುಂಗಭದ್ರಾ	1,633	1,632.98	29,314	8,595
ಮಲಪ್ರಭಾ	2,079.50	2,076.60	5,374	2,319
ಘಟಪ್ರಭಾ	2,175	2,166.55	-	2,651
ಭದ್ರಾ	186	185.90	4,078	2,862
ಆಲಮಟ್ಟಿ (ಮೀ)	519.60	518.34	-	8,703
ನಾರಾಯಣಪುರ (ಮೀ)	492.25	491.59	6,950	5,816

* ನೆಲಮಟ್ಟದಿಂದ

ಕೆಆರ್‌ಎಸ್‌ನಿಂದ 18 ಸಾವಿರ ಕ್ಯುಸೆಕ್ ನೀರು ಹೊರಕ್ಕೆ: ಮೈದುಂಬಿದ ಕಾವೇರಿ



ಶ್ರೀರಂಗಪಟ್ಟಣ ತಾಲ್ಲೂಕಿನ ಬಲಮುರಿ ಫಾಲ್ಸ್‌ನಲ್ಲಿ ಕಾವೇರಿ ನದಿ ಗುರುವಾರ ಮೈದುಂಬಿ ಹರಿಯುತ್ತಿದ್ದ ದೃಶ್ಯ –ಪ್ರಜಾವಾಣಿ ಚಿತ್ರ

ಶ್ರೀರಂಗಪಟ್ಟಣ: ಕೆಆರ್‌ಎಸ್ ಜಲಾಶಯದಿಂದ 18 ಸಾವಿರ ಕ್ಯುಸೆಕ್ ನೀರನ್ನು ಹೊರಗೆ ಹರಿಸುತ್ತಿದ್ದು, ಕಾವೇರಿ ನದಿ ಮೈದುಂಬಿ ಹರಿಯುತ್ತಿದೆ.

ತಾಲ್ಲೂಕಿನ ಬೆಳಗೊಳ ಸಮೀಪದ ಎಡಮುರಿ ಮತ್ತು ಬಲಮುರಿ ಹಾಗೂ ಕಾವೇರಿ ಬೋರೇದೇವರ ಅಣೆಕಟ್ಟೆ ಫಾಲ್ಸ್‌ಗಳಲ್ಲಿ ನೀರು ಧುಮ್ಮಿಕ್ಕುತ್ತಿದೆ. ಕಾವೇರಿ ನದಿ ಬೋರ್ಗರೆದು ಹರಿಯುತ್ತಿದ್ದು, ನಯನ ಮನೋಹರ ದೃಶ್ಯವನ್ನು ಪ್ರವಾಸಿಗರು ಕಣ್ತುಂಬಿಕೊಳ್ಳುತ್ತಿದ್ದಾರೆ.

ಕಾವೇರಿ ನದಿಯಲ್ಲಿ ನೀರಿನ ಸೆಳೆತ ಹೆಚ್ಚಾಗಿರುವುದರಿಂದ ಪಟ್ಟಣ ಸಮೀಪದ ಗಂಜಾಂನ ನಿಮಿಷಾಂಬಾ ದೇವಾಲಯದ ಬಳಿ ಯಾರೂ ನದಿಗೆ ಇಳಿಯದಂತೆ ಬ್ಯಾರಿಕೇಡ್ ಅಳವಡಿಸಲಾಗಿದೆ. ನದಿ ಪಾತ್ರದ ಜನರಿಗೆ ಎಚ್ಚರಿಕೆ ನೀಡಲಾಗುತ್ತಿದೆ. ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿ ವಿಹಾರ ಎರಡು ವಾರಗಳಿಂದಲೂ ಸ್ಥಗಿತಗೊಂಡಿದೆ.

ಕೆಆರ್‌ಎಸ್ ಜಲಾಶಯಕ್ಕೆ 18 ಸಾವಿರ ಕ್ಯುಸೆಕ್ ನೀರು ಹರಿದು ಬರುತ್ತಿದೆ. ಜಲಾಶಯ ತನ್ನ ಗರಿಷ್ಠ ಮಟ್ಟ (124.80 ಅಡಿ) ತಲುಪಿದೆ. ಹಾಗಾಗಿ ಒಳ ಬರುವ ಅಷ್ಟೂ ನೀರನ್ನು ಹೊರಗೆ ಬಿಡಲಾಗುತ್ತಿದೆ.

'ಜಲಾಶಯದಲ್ಲಿ ಸದ್ಯ 49.45 ಟಿಎಂಸಿ ಅಡಿಗಳಷ್ಟು ನೀರು ಸಂಗ್ರಹವಾಗಿದೆ. ಕಳೆದ ವರ್ಷ ಇದೇ ದಿನ ಅವಧಿಯಲ್ಲಿ 47.16 ಟಿಎಂಸಿ ಅಡಿಗಳಷ್ಟು ನೀರಿತ್ತು' ಎಂದು ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಎಂಜಿನಿಯರ್ ರಾಮಮೂರ್ತಿ ತಿಳಿಸಿದ್ದಾರೆ.

ಹೊಲದಲ್ಲೇ ಮೊಳಕೆಯೊಡೆದ ರಾಗಿ

ಪ್ರಜಾವಾಣಿ ವಾರ್ತೆ



ಮಳೆಯಿಂದಾಗಿ ಹೊಲದಲ್ಲೇ ಮೊಳಕೆ ಒಡೆದ ರಾಗಿ ತೆನೆ –ಪ್ರಜಾವಾಣಿ ಚಿತ್ರ

ಬೆಂಗಳೂರು: ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಬಿಟ್ಟು ಬಿಡದೆ ಸುರಿಯುತ್ತಿರುವ ಮಳೆಯ ಆರ್ಭಟ ಗುರುವಾರವೂ ಮುಂದುವರೆದಿದೆ.

ಬುಧವಾರ ರಾತ್ರಿಯಿಂದ ಒಂದೇ ಸಮನೆ ಸುರಿಯುತ್ತಿರುವ ಮಳೆಗೆ ಸಾವಿರಾರು ಹೆಕ್ಟೇರ್ ರಾಗಿ ಮತ್ತು ತೋಟಗಾರಿಕಾ ಬೆಳೆಗಳು ನೆಲಕಚ್ಚಿವೆ. ರಾಶಿ ಹಾಕಿದ ರಾಗಿ ತೆನೆಗಳು ಹೊಲದಲ್ಲೇ ಮೊಳಕೆಯೊಡೆಯಲು ಆರಂಭಿಸಿವೆ. ಶಿಥಿಲಗೊಂಡಿದ್ದ 20ಕ್ಕೂ ಹೆಚ್ಚು ಮನೆ, ಶಾಲೆ ಮತ್ತು ಅಂಗನವಾಡಿ ಕಟ್ಟಡ ನೆಲಸಮವಾಗಿವೆ. ಚಿಕ್ಕಬಳ್ಳಾಪುರದ ಅಮಾನಿ ಗೋಪಾಲಕೃಷ್ಣ ಕೆರೆ ಅಂಗಳಲ್ಲಿ ₹ 4ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಗಾಜಿನ ಮನೆ ಭಾಗಶಃ ಮುಳುಗಿದೆ.

ಶಾಲಾ ಕಟ್ಟಡ ಕುಸಿತ: ಕೋಲಾರ, ಕೆಜಿಎಫ್, ಮಾಲೂರು ಹಾಗೂ ಶ್ರೀನಿವಾಸಪುರ ತಾಲ್ಲೂಕಿನಲ್ಲಿ 20ಕ್ಕೂ ಹೆಚ್ಚು ಮನೆ, ಹಳೆಯ ಶಾಲೆ ಮತ್ತು ಅಂಗನವಾಡಿ ಕಟ್ಟಡ ಕುಸಿದಿವೆ. ತಿಪ್ಪೇನಹಳ್ಳಿ ಗ್ರಾಮದಲ್ಲಿ ಗುರುವಾರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ ಮಧ್ಯಾಹ್ನ ಏಕಾಏಕಿ ಕುಸಿದಿದೆ. ಗೋಡೆ ಕುಸಿಯಲಾರಂಭಿಸುತ್ತಿದ್ದಂತೆ ಶಿಕ್ಷಕರು ವಿದ್ಯಾರ್ಥಿಗಳನ್ನು ಹೊರಗೆ ಕಳುಹಿಸಿದ್ದರಿಂದ ಹೆಚ್ಚಿನ ಅನಾಹುತ ತಪ್ಪಿದೆ. 30ಕ್ಕೂ ಹೆಚ್ಚು ಮಕ್ಕಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮಳೆಯಿಂದ ಕಟ್ಟಡ ಶಿಥಿಲಗೊಂಡಿತ್ತು.

ಕೊಚ್ಚಿಹೋದ ಸೇತುವೆ: ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಹತ್ತಾರು ಕೆರೆಗಳು ಕೋಡಿ ತುಂಬಿ ಹರಿದಿದ್ದು, ಸೇತುವೆಗಳ ಮೇಲೆ ನೀರು ಹರಿಯತೊಡಗಿದೆ. ಕೆಲವು ಕಡೆ ರಸ್ತೆಗಳ ಮೇಲ್ಸೈ ಕೊಚ್ಚಿ ಹೋಗಿದೆ.

ಮಾಗಡಿ ತಾಲ್ಲೂಕಿನ ಮಂಚನಬೆಲೆ ಜಲಾಶಯದಿಂದ ಹೆಚ್ಚಿನ ಪ್ರಮಾಣದಲ್ಲಿ ಅರ್ಕಾವತಿ ನದಿಗೆ ನೀರು ಬಿಡಲಾಗುತ್ತಿದೆ. ಇದರಿಂದ ರಾಮನಗರ ತಾಲ್ಲೂಕಿನ ಗದಗಯ್ಯನದೊಡ್ಡಿ ಬಳಿ ಸೇತುವೆಯೊಂದು ಕೊಚ್ಚಿ ಹೋಗಿದೆ. ಮಾಗಡಿ ತಾಲ್ಲೂಕಿನಲ್ಲಿ ಆರಕ್ಕೂ ಹೆಚ್ಚು ಮನೆಗಳು ಕುಸಿದಿವೆ.

'ಕಾಂಗ್ರೆಸ್ ಆಂತರಿಕ ಚುನಾವಣೆಯಲ್ಲೇ ಹ್ಯಾಕ್'

ಶಿವಮೊಗ್ಗ: 'ಕಾಂಗ್ರೆಸ್‌ನ ಆಂತರಿಕ ಚುನಾವಣೆಯಲ್ಲಿ ಯುವ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಹಲವರು ತಮಗೆ ಕರೆ ಮಾಡಿ ಹ್ಯಾಕ್ ಆಗಿರುವ ಕುರಿತು ತನಿಖೆ ನಡೆಸುವಂತೆ ಕೋರಿದ್ದರು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ನಗರದಲ್ಲಿ ಗುರುವಾರ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ಕರೆ ಮಾಡಿದವರಿಗೆ ಮೊದಲು ದೂರು ನೀಡಿ, ನಂತರ ತನಿಖೆ ನಡಸುವ ಕುರಿತು ಚರ್ಚಿಸುವೆ ಎಂದಿದ್ದೆ' ಎಂದರು.

ಇಲ್ಲದ ಮಗನ ಎಳೆದು ತಂದು ಕ್ಷುಲ್ಲಕ ರಾಜಕಾರಣ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಮ್ಮ ಭ್ರಷ್ಟಾಚಾರ ಮುಚ್ಚಿಹಾಕಿಕೊಳ್ಳಲು ಮುಂದಾಗಿರುವ ಬಿಜೆಪಿ, ಅಗಲಿ ಹೋಗಿರುವ ನನ್ನ ಮಗನ ಹೆಸರನ್ನು ಎಳೆದು ತಂದಿದೆ. ನಮ್ಮ ಸರ್ಕಾರದ ಅವಧಿಯನ್ನೂ ಸೇರಿಸಿ ಬಿಟ್ ಕಾಯಿನ್ ಹಗರಣವನ್ನು ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಿಂದ ತನಿಖೆ ನಡೆಸಿ' ಎಂದು ವಿರೋಧ ಪಕ್ಷದ ನಾಯಕರ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಬಿಟ್ ಕಾಯಿನ್ ಪ್ರಕರಣದ ಹ್ಯಾಕರ್ ಶ್ರೀಕಿ ಜೊತೆಗೆ ಹೇಮಂತ್ ಮುದ್ದಪ್ಪ ಹಾಗೂ ಸುನೀಶ್ ಹೆಗ್ಡೆ ಗಾಢ ಸ್ನೇಹ ಹೊಂದಿದ್ದರು ಎಂದು ಹೇಳಿರುವ ಬಿಜೆಪಿ, ಸುನೀಶ್ ಹೆಗ್ಡೆ ಜತೆ ದಿವಂಗತ ರಾಕೇಶ್ ಇದ್ದ ಹಳೆಯ ಚಿತ್ರವೊಂದನ್ನು ಟ್ಯಾಗ್ ಮಾಡಿ ಸರಣಿ ಟ್ವೀಟ್ ಮಾಡಿತ್ತು.

ಅದಕ್ಕೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, 'ರಾಕೇಶ್ ನಮ್ಮನ್ನಗಲಿ ಐದು ವರ್ಷಗಳಾಗಿವೆ, ಪುತ್ರಶೋಕ ನಿರಂತರ. ತನ್ನ ಮೇಲಿನ ಆರೋಪಕ್ಕೆ ಆತ ಪ್ರತಿಕ್ರಿಯಿಸಲೂ ಸಾಧ್ಯವಿಲ್ಲ. ಇಂತಹ ಸಮಯದಲ್ಲಿ ಬಿಜೆಪಿಯು ನನ್ನ ಮಗನ ಹೆಸರನ್ನು ಎಳೆದು ರಾಜಕೀಯ ಮಾಡಲು ಹೊರಟಿರುವುದು ಅತ್ಯಂತ ವೈಯಕ್ತಿಕ ಮತ್ತು ಕ್ಷುಲ್ಲಕತನದ ರಾಜಕಾರಣ' ಎಂದಿದ್ದಾರೆ.

'ರಾಕೇಶ್ ಜೊತೆಗೆ ಬಿಟ್‌ಕಾಯಿನ್ ಹಗರಣದ ಆರೋಪಿ ಶ್ರೀಕೃಷ್ಣನ ಗೆಳೆಯ ಹೇಮಂತ್ ಮುದ್ದಪ್ಪ ಇದ್ದಾನೆ ಎಂದು ಬಿಜೆಪಿ ಆರೋಪಿಸಿದೆ. ಹಾಗಿದ್ದರೆ 2018ರಲ್ಲಿ ದಾವೋಸ್ ನಲ್ಲಿ ನಡೆದ ವಿಶ್ವ ಆರ್ಥಿಕ ಶೃಂಗ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದ್ದರು. ಆ ಸಭೆಯಲ್ಲಿ ಬ್ಯಾಂಕ್ ಲೂಟಿಕೋರ ನೀರವ್ ಮೋದಿ ಕೂಡ ಇದ್ದರು. ಈ ಫೋಟೋವನ್ನು ಹೇಗೆ ವ್ಯಾಖ್ಯಾನಿಸುವುದು' ಎಂದು ಅವರು ಪ್ರಶ್ನಿಸಿದ್ದಾರೆ.

'ಕೃಷ್ಣನ ಜೊತೆ ಬಂಧನಕ್ಕೊಳಗಾದ ಹೇಮಂತ್ ಮುದ್ದಪ್ಪನ ಬಿಡುಗಡೆಗಾಗಿ ಪೊಲೀಸರ ಜೊತೆ ಬಿಜೆಪಿಯ ನಾಯಕರೊಬ್ಬರು ಸಂಧಾನ ನಡೆಸಿದ್ದರು. ಆ ಸೇವೆಗಾಗಿ ಬಿಜೆಪಿ ನಾಯಕ ಬಿಟ್ ಕಾಯಿನ್ ಪಡೆದಿದ್ದ ಎಂಬ ಆರೋಪ ಇದೆ. ಆ ನಾಯಕ ಯಾರೆಂದು ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್‌ಗೆ ಗೊತ್ತಿರಬಹುದು' ಎಂದು ಕುಟುಕಿದ್ದಾರೆ.

'ಈ ವರೆಗಿನ ಪೊಲೀಸರ ತನಿಖೆ ಯಾರೋ ಪ್ರಭಾವಿಗಳನ್ನು ರಕ್ಷಿಸಲು ನಡೆಸಿರುವ ನಾಟಕದಂತಿದೆ. ನಮ್ಮ ಬುಟ್ಟಿಯಲ್ಲಿ ಹಾವು ಇಲ್ಲ ಎಂದಾದರೆ ಬಿಜೆಪಿ ನಾಯಕರು ಯಾಕೆ ಹಾವು ಕಂಡ ಹಾಗೆ ಬೆಚ್ಚಿ ಬೀಳುತ್ತಿದ್ದಾರೆ? ಯಾಕೆ ಸರದಿ ಸಾಲಿನಲ್ಲಿ ನಿಂತು ಹೆಗಲು ಮುಟ್ಟಿ ನೋಡಿಕೊಂಡು 'ಸರ್ಕಾರ ತಪ್ಪುಮಾಡಿಲ್ಲ, ನಾವೆಲ್ಲ ನಿರಪರಾಧಿಗಳು' ಎಂದು ಎದೆ ಬಡಿದು ಕೊಳ್ಳುತ್ತಿರುವುದೇಕೆ' ಎಂದು ಪ್ರಶ್ನಿಸಿದ್ದಾರೆ.

'ಹ್ಯಾಕರ್ ಶ್ರೀಕಿ ಸ್ನೇಹಿತರ ಜತೆ ರಾಕೇಶ್'

ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯ ಸ್ನೇಹಿತರಾದ ಸುನೀಶ್ ಹೆಗ್ಡೆ ಮತ್ತು ಹೇಮಂತ್ ಜತೆಗೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರ ಪುತ್ರ ದಿವಂಗತ ರಾಕೇಶ್ ಅವರು ಇದ್ದ ಹಳೆಯ ಚಿತ್ರವನ್ನು ಬಿಡುಗಡೆ ಮಾಡಿದ ಬಿಜೆಪಿ, ಸರಣಿ ಟ್ವೀಟ್ ಮಾಡಿದೆ.

'ಈ ಚಿತ್ರದಲ್ಲಿರುವ ಸುನೀಶ್ ಹೆಗ್ಡೆ ಮತ್ತು ಹೇಮಂತ್ ಮುದ್ದಪ್ಪ ಅವರ ಜೊತೆಗಿರುವ ಎಲ್ಲರನ್ನೂ ನೀವು ಗುರುತಿಸಬಲ್ಲಿರಿ ಎಂಬುದು ನಮ್ಮ ನಂಬಿಕೆ. ಆ ನಂಬಿಕೆ ನಿಜವೇ ಆದರೆ, ಬಿಟ್‌ಕಾಯಿನ್ ಹ್ಯಾಕಿಂಗ್ ದಂಧೆ ನಿಮ್ಮ ಕಾಲದಲ್ಲೇ ಆರಂಭವಾಗಿತ್ತು. ಈ ಬಗ್ಗೆ ನೀವು ಸ್ಪಷ್ಟ ಮಾಹಿತಿ ಹೊಂದಿದ್ದೀರಿ ಅಲ್ಲವೆ' ಎಂದು ಬಿಜೆಪಿ ಪ್ರಶ್ನಿಸಿದೆ.

'ನಿಮ್ಮ ಅತ್ಯಾಪ್ತರ ವಹಿವಾಟು ನಿಮ್ಮನ್ನು ಅಸಹಾಯಕನನ್ನಾಗಿ ಮಾಡಿದೆಯೇ? ಬಿಟ್‌ಕಾಯಿನ್ ಪ್ರಭಾವಲಯ ನಿಮ್ಮನ್ನೇ ಸುತ್ತಿಕೊಳ್ಳಬಹುದೆಂಬ ಭಯ ಕಾಡುತ್ತಿದೆಯೇ' ಎಂದು ಹೇಳಿದೆ.

'ಶ್ರೀಕಿ ಮೂಲಕ ಗೇಮಿಂಗ್ ಸೈಟ್ ಮತ್ತು ಇ-ಪೋರ್ಟಲ್ ಹ್ಯಾಕ್ ಮಾಡಿಸಿದ್ದರು ಎಂಬುದು ಪೊಲೀಸ್ ದಾಖಲೆಯಲ್ಲಿದೆ. ಡ್ರಗ್ಸ್ ಮತ್ತು ಬಿಟ್‌ಕಾಯಿನ್ ಅವ್ಯವಹಾರ ಬಹಿರಂಗವಾಗಿದ್ದು ನಿಮ್ಮ ಕಾಲದಲ್ಲಿ. ಒಂದು ಕಡೆ ದಾಳಿ ನಡೆದರೂ ಬಳಿಕ ತನಿಖೆ ಹಠಾತ್ ಸ್ಥಗಿತಗೊಂಡಿತು. ಬೆಂಗಳೂರಿನ ಪ್ರತಿಷ್ಠಿತ ಹೋಟೆಲ್‌ನಲ್ಲಿ ನಡೆಯುತ್ತಿದ್ದ ಹುಕ್ಕಾ ಬಾರ್ ಆ ಎಲ್ಲ ಚಟುವಟಿಕೆಗಳ ಕೇಂದ್ರವಾಗಿತ್ತು. ಆಗ ಸುನೀಶ್ ಹೆಗ್ಡೆ, ಹೇಮಂತ್ ಮುದ್ದಪ್ಪ, ಶ್ರೀಕಿ ಮೊದಲಾದವರು ನಿಮ್ಮ ಮನೆಯ ಸುತ್ತಮುತ್ತಲೂ ಓಡಾಡಿರಬಹುದಲ್ಲವೇ' ಎಂದೂ ಬಿಜೆಪಿ ಪ್ರಶ್ನಿಸಿದೆ.

ಕಾಂಗ್ರೆಸ್ ಶಿಸ್ತು ಪಾಲನಾ ಸಮಿತಿಗೆ ಪರಮೇಶ್ವರ

ಪ್ರಜಾವಾಣಿ ವಾರ್ತೆ



ಜಿ.ಪರಮೇಶ್ವರ

ನವದೆಹಲಿ: ಪಕ್ಷದ ಶಿಸ್ತು ಪಾಲನಾ ಸಮಿತಿಯನ್ನು ಗುರುವಾರ ಪುನರ್ ರಚಿಸಿರುವ ಕಾಂಗ್ರೆಸ್, ಇದುವರೆಗೆ ಸಮಿತಿಯ ಭಾಗವಾಗಿದ್ದ ಹಿರಿಯ ಮುಖಂಡ ಗುಲಾಂ ನಬಿ ಆಜಾದ್ ಹಾಗೂ ಸುಶೀಲ್‌ಕುಮಾರ್ ಶಿಂಧೆ ಅವರನ್ನು ಕೈಬಿಟ್ಟಿದೆ.

ಕೇರಳದ ಎ.ಕೆ. ಆಂಟನಿ ಅವರನ್ನು ಸಮಿತಿಯ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದ್ದು, ರಾಜ್ಯದ ಮಾಜಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ಸೇರಿದಂತೆ ನಾಲ್ವರು ಹೊಸ ಸದಸ್ಯರನ್ನು ಸೇರ್ಪಡೆ ಮಾಡಲಾಗಿದೆ.

ಪಕ್ಷದಲ್ಲಿ ಬದಲಾವಣೆ ಬಯಸಿ ಬಂಡೆದ್ದಿದ್ದ ಜಿ–23 ತಂಡದ ಸದಸ್ಯರಾಗಿರುವ ಆಜಾದ್ ಅವರ ವಿರುದ್ಧ ಜಮ್ಮು ಮತ್ತು ಕಾಶ್ಮೀರ ಘಟಕದ ಅಧ್ಯಕ್ಷ ಗುಲಾಮ್ ಅಹಮದ್ ಮಿರ್ ಅವರು ದನಿ ಎತ್ತಿದ ಮಾರನೇ ದಿನವೇ ಈ ಬದಲಾವಣೆ ತಂದಿರುವುದು ವಿಶೇಷವಾಗಿದೆ.

ಮೋತಿಲಾಲ್ ವೋಹ್ರಾ ಅವರ ನಿಧನದ ಹಿನ್ನೆಲೆಯಲ್ಲಿ, ಸಮಿತಿಯ ಪುನರ್‌ರಚನೆ ಸಾಧ್ಯತೆ ಕುರಿತು ಚಿಂತನೆ ನಡೆಸಿದ್ದ ಪಕ್ಷ, ಇದೀಗ ಆಜಾದ್, ಶಿಂಧೆ ಅವರಲ್ಲದೆ, ಅರುಣಾಚಲ ಪ್ರದೇಶದ ಮಾಜಿ ಮುಖ್ಯಮಂತ್ರಿ ಮುಕುಟ್ ಮಿಥಿ ಅವರನ್ನೂ ಕೈಬಿಟ್ಟಿದೆ.

ಪಕ್ಷದ ಪ್ರಧಾನ ಕಾರ್ಯದರ್ಶಿ ತಾರಿಕ್ ಅನ್ವರ್ ಅವರು ಹೊಸ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿದ್ದು, ಪಕ್ಷದ ಕಾರ್ಯಕಾರಿ ಸಮಿತಿ ಸದಸ್ಯೆ ಅಂಬಿಕಾ ಸೋನಿ, ದೆಹಲಿಯ ಹಿರಿಯ ಮುಖಂಡ ಜೈಪ್ರಕಾಶ್ ಅಗರ್‌ವಾಲ್ ಅವರು ಪರಮೇಶ್ವರ ಅವರೊಂದಿಗೆ ಸಮಿತಿಗೆ ಸೇರ್ಪಡೆಯಾಗಿರುವ ಇತರರು.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಈಗಾಗಲೇ ಪಕ್ಷದ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ)ಯ ಸದಸ್ಯರಾಗಿರುವ ರಾಜ್ಯದ ಪ್ರಮುಖ ನಾಯಕರಾಗಿದ್ದಾರೆ. ಪಕ್ಷದ ತಮಿಳುನಾಡು, ಪುದುಚೇರಿ ಮತ್ತು ಗೋವಾದ ಉಸ್ತುವಾರಿ ಹುದ್ದೆಯಲ್ಲಿರುವ ದಿನೇಶ್ ಗುಂಡೂರಾವ್, ಮಹಾರಾಷ್ಟ್ರ ಉಸ್ತುವಾರಿಯಾಗಿರುವ ಎಚ್‌.ಕೆ. ಪಾಟೀಲ್, ಮಾಜಿ ಸಂಸದ ಕೆ.ಎಚ್. ಮುನಿಯಪ್ಪ ಅವರು ಸಿಡಬ್ಲ್ಯುಸಿಯ ಖಾಯಂ ಆಹ್ವಾನಿತರಾಗಿರುವ ರಾಜ್ಯದ ಇತರ ಮುಖಂಡರಾಗಿದ್ದಾರೆ.

ತಿರುಪತಿ: ದೇವಸ್ಥಾನದ ಮಾರ್ಗಗಳು ಬಂದ್

ಪ್ರಜಾವಾಣಿ ವಾರ್ತೆ



ಭಾರಿ ಮಳೆಯ ಕಾರಣ ಜಲಾವೃತವಾಗಿದ್ದ ಪುದುಚೇರಿಯ ರೈನ್‌ಬೋ ನಗರದ ರಸ್ತೆಯೊಂದರಲ್ಲಿ ಗುರುವಾರ ಅಗತ್ಯ ವಸ್ತುಗಳನ್ನು ಹೊತ್ತೊಯ್ದ ಜನರು –ಪಿಟಿಐ ಚಿತ್ರ

ಹೈದರಾಬಾದ್: ತಿರುಪತಿಯಲ್ಲಿ ಭಾರಿ ಮಳೆಯಾಗುತ್ತಿದೆ. ಯಾತ್ರಿಗಳ ಸುರಕ್ಷತೆ ದೃಷ್ಟಿಯಿಂದ, ಬೆಟ್ಟದ ಮೇಲಿರುವ ದೇವಸ್ಥಾನಕ್ಕೆ ತೆರಳುವ ಎರಡೂ ಪಾದಚಾರಿ ಮಾರ್ಗಗಳನ್ನು ಬಂದ್ ಮಾಡಲಾಗಿದೆ. ಮುಂದಿನ ಆದೇಶದ ವರೆಗೂ ಈ ನಿಯಮ ಜಾರಿಯಲ್ಲಿ ಇರಲಿದೆ ಎಂದು ತಿರುಪತಿ ತಿರುಮಲ ದೇವಸ್ಥಾನಂ ಟ್ರಸ್ಟ್ ತಿಳಿಸಿದೆ.

ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತ ಪೂರ್ವ ಕರಾವಳಿ ತೀರಗಳ ಹತ್ತಿರಕ್ಕೆ ಸಾಗುತ್ತಿರುವ ಕಾರಣ ನಲ್ಲೂರು, ಚಿತ್ತೂರು ಮತ್ತು ಕಡಪ ಜಿಲ್ಲೆಗಳಲ್ಲಿ ಭಾರಿ ಮಳೆ ಆಗುತ್ತಿದೆ. ಈ ಭಾಗದಲ್ಲಿ ನದಿ, ತೊರೆಗಳು ಉಕ್ಕಿ ಹರಿಯುತ್ತಿವೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಭಾರಿ ಮಳೆಯಿಂದ ತಿರುಪತಿಯಲ್ಲಿ ಜನ ಜೀವನಕ್ಕೂ ಅಡ್ಡಿ ಉಂಟಾಗಿದೆ. ಮಳೆಯಿಂದಾಗಿ ಯಾತ್ರಿಕರೂ ತೊಂದರೆ ಅನುಭವಿಸುತ್ತಿದ್ದಾರೆ ಎನ್ನಲಾಗಿದೆ.

ವೆಂಕಟೇಶ್ವರ ದೇವಸ್ಥಾನಕ್ಕೆ ಸಾಗುವ ರಸ್ತೆಗಳ ಮೇಲೆ ಬಿದ್ದಿರುವ ಬಂಡೆ ಮತ್ತು ಮಣ್ಣಿನ ರಾಶಿಯನ್ನು ತೆರವುಗೊಳಿಸುವ ಕೆಲಸದಲ್ಲಿ ಅಧಿಕಾರಿಗಳು ನಿರತರಾಗಿದ್ದಾರೆ. ವೈಕುಂಟಂನ ಸರದಿ ಸಾಲಿನ ಜಾಗದಲ್ಲೂ ಮಳೆ ನೀರು ನಿಂತಿದೆ. ತಿರುಪತಿಯಲ್ಲಿ ಶುಕ್ರವಾರ ನಡೆಯಬೇಕಿದ್ದ ಕಾರ್ತಿಕ ದೀಪೋತ್ಸವವನ್ನು ಮುಂದೂಡುವ ನಿರ್ಧಾರವನ್ನೂ ದೇವಸ್ಥಾನ ಮಂಡಳಿ ತೆಗೆದುಕೊಂಡಿದೆ.

ತಿರುಪತಿಯ ರೇಣಿಗುಂಟ ವಿಮಾನ ನಿಲ್ದಾಣ ಕೂಡಾ ಜಲಾವೃತವಾಗಿದ್ದು, ಇಲ್ಲಿ ಇಳಿಯಬೇಕಿದ್ದ ವಿಮಾನಗಳನ್ನು ಬೆಂಗಳೂರು ಮತ್ತು ಹೈದರಾಬಾದಿನ ಕಡೆ ತಿರುಗಿಸಲಾಯಿತು. ತಗ್ಗು ಪ್ರದೇಶದ ಹಲವು ಪ್ರದೇಶಗಳು, ಕೊಳೆಗೇರಿಗಳು ಜಲಾವೃತಗೊಂಡಿವೆ.

ಚಿತ್ತೂರು ಜಿಲ್ಲಾ ಆಡಳಿತವು ಶಾಲಾ ಕಾಲೇಜುಗಳಿಗೆ ಗುರುವಾರ ಮತ್ತು ಶುಕ್ರವಾರ ರಜೆ ಘೋಷಿಸಿದೆ. ವಿಪತ್ತು ನಿರ್ವಹಣಾ ತಂಡಗಳನ್ನು ಸಿದ್ಧವಿರಿಸಿದೆ.

ತಮಿಳುನಾಡು, ಆಂಧ್ರ: ಇನ್ನೆರಡು ದಿನ ಮಳೆ

ಚೆನ್ನೈ (ಪಿಟಿಐ): ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತವಾಗಿರುವ ಕಾರಣ ತಮಿಳುನಾಡು, ಆಂಧ್ರಪ್ರದೇಶ, ಪುದುಚೇರಿ ಮತ್ತು ಕರ್ನಾಟಕದ ಹಲವೆಡೆ ಗುರುವಾರ ಭಾರಿ ಮಳೆಯಾಗಿದೆ. ತಮಿಳುನಾಡು, ಆಂಧ್ರಪ್ರದೇಶ ಮತ್ತು ಪುದುಚೇರಿಯ ಹಲವೆಡೆ ಜನಜೀವನ ಅಸ್ತವ್ಯಸ್ತವಾಗಿದೆ.

ವಾಯುಭಾರ ಕುಸಿತದಿಂದ ಉಂಟಾಗಿರುವ ಮಳೆಮಾರುತವು ಶುಕ್ರವಾರ ಬೆಳಿಗ್ಗೆ ಚೆನ್ನೈ ಮತ್ತು ಪುದುಚೇರಿ ನಡುವೆ ನೆಲಸ್ಪರ್ಶ ಮಾಡಲಿದೆ. ಆಗ ಗಾಳಿಯು 45–65 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆ ಇದೆ. ಆದರೆ ಇನ್ನೂ ಎರಡು ದಿನ ಈ ರಾಜ್ಯಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ನೆಲಸ್ಪರ್ಶದ ನಂತರದ 24 ಗಂಟೆಗಳವರೆಗೂ ಮಾರುತವು ತೀವ್ರವಾಗಿರಲಿದೆ. ಹೀಗಾಗಿ ತಮಿಳುನಾಡಿನ ಚೆನ್ನೈ, ತಿರುವಳ್ಳೂರ್, ಕಾಂಚೀಪುರಂ ಮತ್ತು ಚೆಂಗಲ್‌ಪೇಟ್ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ. ಆಂಧ್ರಪ್ರದೇಶದ ರಾಯಲಸೀಮಾದ ಹಲವು ಜಿಲ್ಲೆಗಳು ಮತ್ತು ಕರ್ನಾಟಕದ ಎಲ್ಲೆಡೆ ಶುಕ್ರವಾರ ಮತ್ತು ಶನಿವಾರ ಭಾರಿ ಮಳೆಯಾಗಲಿದೆ. ಭಾನುವಾರದ ನಂತರ ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿ ಮಳೆ ಕಡಿಮೆಯಾಗಲಿದೆ ಎಂದು ಮುನ್ಸೂಚನೆಯಲ್ಲಿ ವಿವರಿಸಲಾಗಿದೆ.

ಶುಕ್ರವಾರಕ್ಕೆ ಅನ್ವಯವಾಗುವಂತೆ ತಮಿಳುನಾಡು, ಆಂಧ್ರಪ್ರದೇಶ ಮತ್ತು ಒಡಿಶಾಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಕರ್ನಾಟಕ, ಕೇರಳ ಮತ್ತು ತೆಲಂಗಾಣದಲ್ಲಿ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಶನಿವಾರಕ್ಕೆ ಅನ್ವಯವಾಗುವಂತೆ ಈ ಎಲ್ಲಾ ರಾಜ್ಯಗಳಲ್ಲಿ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಮಳೆ ವೇಳೆ ಜಲಾವೃತವಾಗುವ ಸಂಭವವಿರುವ ತಮಿಳುನಾಡಿನ ಕರಾವಳಿಯಲ್ಲಿ ಈಗಾಗಲೇ 5,106 ನಿರಾಶ್ರಿತ ಶಿಬಿರಗಳನ್ನು ಆರಂಭಿಸಲಾಗಿದೆ. ಈಗಾಗಲೇ ಸಾವಿರಾರು ಮಂದಿ ಶಿಬಿರಗಳಿಗೆ ಬಂದಿದ್ದಾರೆ.

ಆಗುಂಬೆ ಘಾಟಿ ರಸ್ತೆ ಬಿರುಕು: ಆತಂಕ

ಪ್ರಜಾವಾಣಿ ವಾರ್ತೆ

ಹೆಬ್ರಿ: ಕರಾವಳಿ ಹಾಗೂ ಮಲೆನಾಡು ಭಾಗವನ್ನು ಸಂಪರ್ಕಿಸುವ ಪ್ರಮುಖ ರಸ್ತೆಯಾಗಿರುವ ಆಗುಂಬೆ ಘಾಟಿ ರಾಷ್ಟ್ರೀಯ ಹೆದ್ದಾರಿ ರಸ್ತೆ ಬಿರುಕುಬಿಟ್ಟಿದ್ದು, ಕುಸಿಯುವ ಭೀತಿ ಎದುರಾಗಿದೆ.

ಹೆಬ್ರಿ ಹಾಗೂ ಆಗುಂಬೆ ಪರಿಸರದಲ್ಲಿ ನಿರಂತರ ಸುರಿದ ಭಾರಿ ಮಳೆಗೆ ಘಾಟಿಯ ಮಣ್ಣು ಸಡಿಲಗೊಂಡಿದ್ದು, ಅಲ್ಲಲ್ಲಿ ರಸ್ತೆ ಬಿರುಕುಬಿಟ್ಟಿದೆ. ಘಾಟಿಯ 12 ಹಾಗೂ 13ನೇ ತಿರುವಿನ ಮಧ್ಯೆಯ ರಸ್ತೆ ಬಿರುಕು ಬಿಟ್ಟಿದ್ದು, ಕುಸಿಯುವ ಭೀತಿ ಎದುರಾಗಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

2 ವರ್ಷದ ಹಿಂದೆ ಘಾಟಿಯಲ್ಲಿ ರಸ್ತೆ ಕುಸಿದು 1 ತಿಂಗಳು ಸಂಚಾರ ಬಂದ್ ಆಗಿತ್ತು. ಈ ವರ್ಷ ಸಮಸ್ಯೆ ಮರುಕಳಿಸದಂತೆ ಅಧಿಕಾರಿಗಳು ಎಚ್ಚರವಹಿಸಬೇಕು. ನಿಗದಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಸರಕುಗಳನ್ನು ಕೊಂಡೊಯ್ಯುವ ಭಾರಿ ವಾಹನಗಳ ಸಂಚಾರದಿಂದ ರಸ್ತೆ ಕುಸಿಯುವ ಭೀತಿ ಎದುರಾಗಿದ್ದು, ಈ ಬಗ್ಗೆ ತುರ್ತು ಕ್ರಮ ತೆಗೆದುಕೊಳ್ಳಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಟೆಂಡರ್: ಕಾಂಚಾಣ ಕುಣಿತ

ಒಂದನೇ ಪುಟದಿಂದ

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಗುರುವಾರ ಭೇಟಿಮಾಡಿದ ಸಂಘದ ಪದಾಧಿಕಾರಿಗಳು, ರಾಜ್ಯ ಸರ್ಕಾರದ ವಿವಿಧ ಕಾಮಗಾರಿಗಳ ಗುತ್ತಿಗೆಯಲ್ಲಿ ನಡೆಯುತ್ತಿರುವ ಲಂಚಾವತಾರಕ್ಕೆ ಕಡಿವಾಣ ಹಾಕುವಂತೆ ಮನವಿ ಸಲ್ಲಿಸಿದ್ದಾರೆ. 'ಗುತ್ತಿಗೆದಾರರು ಶೇ 40ರಷ್ಟು ಮೊತ್ತವನ್ನು ಲಂಚದ ರೂಪದಲ್ಲಿ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ನೀಡಬೇಕಾಗಿರುವುದರಿಂದಲೇ ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಲಂಚಕ್ಕೆ ಕಡಿವಾಣ ಹಾಕಿದರೆ ಭವಿಷ್ಯದ ದಿನಗಳಲ್ಲಿ ಗುಣಮಟ್ಟದ ಕಾಮಗಾರಿಯನ್ನು ನಿರೀಕ್ಷಿಸಬಹುದು' ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಅಡಿಯಿಂದ ಮುಡಿವರೆಗೆ ಲಂಚ: 'ಕೆಲವು ಸಚಿವರು ಟೆಂಡರ್ ಅನುಮೋದನೆಗೂ ಮೊದಲು ಲಂಚಕ್ಕೆ ಒತ್ತಾಯಿಸುತ್ತಿದ್ದಾರೆ. ಕಾಮಗಾರಿ ಆರಂಭಿಸುವ ಮುನ್ನವೇ ಒಟ್ಟು ಮೊತ್ತದ ಶೇ 2ರಷ್ಟನ್ನು ತಮಗೆ ನೀಡುವಂತೆ ರಾಜ್ಯದ ಕೆಲವು ಸಂಸದರು ಗುತ್ತಿಗೆದಾರರಿಗೆ ಕಿರುಕುಳ ನೀಡುತ್ತಿದ್ದಾರೆ. ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಕಟ್ಟಡ ಕಾಮಗಾರಿಗಳಲ್ಲಿ ಶೇ 5ರಷ್ಟು ಮತ್ತು ರಸ್ತೆ ಕಾಮಗಾರಿಗಳಲ್ಲಿ ಶೇ 10ರಷ್ಟು ಲಂಚವನ್ನು ಮುಂಗಡವಾಗಿ ನೀಡುವಂತೆ ಒತ್ತಡ ಹೇರುತ್ತಿದ್ದಾರೆ' ಎಂಬ ಆರೋಪ ಪ್ರಧಾನಿಗೆ ನೀಡಿದ ದೂರಿನಲ್ಲಿದೆ.

'ರಾಜ್ಯದ ಒಬ್ಬ ಹಿರಿಯ ಸಚಿವರು ಟೆಂಡರ್ ಅನುಮೋದನೆಗೂ ಮೊದಲು ಶೇ 15ರಷ್ಟು ಲಂಚ ನೀಡುವುದನ್ನು ಕಡ್ಡಾಯಗೊಳಿಸಿದ್ದಾರೆ. ಇನ್ನೊಬ್ಬ ಸಚಿವರು ಶೇ 10ರಷ್ಟು ನಿಗದಿಪಡಿಸಿದ್ದು, ತಾವೇ ನೇರವಾಗಿ ಗುತ್ತಿಗೆದಾರರಿಗೆ ಕರೆಮಾಡಿ ಕರೆಸಿಕೊಳ್ಳುತ್ತಾರೆ. ಗುತ್ತಿಗೆದಾರರಿಂದ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು ಲಂಚ ಪಡೆಯುವುದು ಹೊಸದೇನೂ ಅಲ್ಲ. ಆದರೆ, 2019ರಿಂದ ಲಂಚದ ಪ್ರಮಾಣ ದುಪ್ಪಟ್ಟಾಗಿದೆ. ಕೆಲವು ಪ್ರಕರಣಗಳಲ್ಲಿ ಶೇ 52ರಷ್ಟು ಮೊತ್ತ ಲಂಚಕ್ಕೇ ಬಳಕೆಯಾದ ಉದಾಹರಣೆಗಳೂ ಇವೆ' ಎಂದು ಕೆಂಪಣ್ಣ 'ಪ್ರಜಾವಾಣಿ'ಗೆ ತಿಳಿಸಿದರು.

ಮುಖ್ಯಮಂತ್ರಿ ನೇತೃತ್ವದಲ್ಲಿ ಸಭೆ?

ಗುತ್ತಿಗೆದಾರರ ಸಂಘದ ದೂರಿನ ಕುರಿತು ಉನ್ನತಮಟ್ಟದ ಸಭೆ ನಡೆಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಿರ್ಧರಿಸಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ದೂರಿನಲ್ಲಿರುವ ಆರೋಪಗಳ ಕುರಿತು ಮುಖ್ಯಮಂತ್ರಿಯವರ ಸಚಿವಾಲಯ ವಿವಿಧ ಇಲಾಖೆಗಳಿಂದ ಮಾಹಿತಿ ಕೋರಿದೆ. ಪ್ರಾಥಮಿಕ ಹಂತದಲ್ಲಿ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಸಭೆ ನಡೆಸಲಿದ್ದಾರೆ. ನಂತರ ಮುಖ್ಯಮಂತ್ರಿಯವರು ಸಭೆ ನಡೆಸುತ್ತಾರೆ ಎಂದು ಮೂಲಗಳು ತಿಳಿಸಿವೆ.

ಬಿಲ್ ಪಾವತಿಯಲ್ಲೂ ಅಕ್ರಮ

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗುತ್ತಿಗೆದಾರರಿಗೆ ಬಿಲ್ ಪಾವತಿಸುವಲ್ಲೂ ಅಕ್ರಮ ನಡೆಯುತ್ತಿದೆ ಎಂದು ಗುತ್ತಿಗೆದಾರರ ಸಂಘ ಆರೋಪಿಸಿದೆ.

'ಬಿಡುಗಡೆಯಾದ ಒಟ್ಟು ಮೊತ್ತದಲ್ಲಿ ಶೇ 80ರಷ್ಟನ್ನು ಜ್ಯೇಷ್ಠತೆ ಆಧಾರದಲ್ಲಿ ಮತ್ತು ಶೇ 20ರಷ್ಟನ್ನು ಕಾಮಗಾರಿ ಮುಕ್ತಾಯಗೊಳಿಸುವ ತುರ್ತು, ನ್ಯಾಯಾಲಯದ ಆದೇಶ ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ಗುತ್ತಿಗೆದಾರರಿಗೆ ಪಾವತಿಸಬೇಕು ಎಂದು 2001ರಲ್ಲಿ ಆದೇಶ ಹೊರಡಿಸಲಾಗಿತ್ತು. ಅದನ್ನು ಯಾವ ಇಲಾಖೆಗಳೂ ಪಾಲಿಸುತ್ತಿಲ್ಲ' ಎಂದು ಸಂಘದ ಅಧ್ಯಕ್ಷ ಕೆಂಪಣ್ಣ ದೂರುತ್ತಾರೆ.

'ಇಲಾಖೆಗಳಿಗೆ ಬಿಲ್ ಪಾವತಿಗೆ ಹಣ ಬಿಡುಗಡೆಯ ಹಂತದಲ್ಲೇ ಶೇ 6ರಿಂದ ಶೇ 8ರಷ್ಟು ಲಂಚಕ್ಕೆ ಬೇಡಿಕೆ ಇದೆ. ಹಣ ಕೊಟ್ಟವರಿಗೆ ಬಿಲ್ ಪಾವತಿಸುವ ವ್ಯವಸ್ಥೆ ಜಾರಿಯಲ್ಲಿದೆ. ಇತ್ತೀಚೆಗೆ ಪೂರ್ಣಗೊಂಡ ಕಾಮಗಾರಿಗಳ ಬಿಲ್ ಪಾವತಿಸಿ, ನಾಲ್ಕು ವರ್ಷದ ಹಳೆಯ ಪ್ರಕರಣಗಳನ್ನು ಬಾಕಿ ಇರಿಸಿರುವುದೇ ಅಕ್ರಮಕ್ಕೆ ಸಾಕ್ಷ್ಯ ನೀಡುತ್ತದೆ' ಎನ್ನುತ್ತಾರೆ ಅವರು.

ಸ್ಪರ್ಧೆಯಿಂದ ಹಿಂದೆ ಸರಿದ ಎಂಎಲ್‌ಸಿ ಜಿ.ರಘು ಆಚಾರ್

ಅಭ್ಯರ್ಥಿ ಹುಡುಕಾಟದಲ್ಲಿ ಕಾಂಗ್ರೆಸ್

• ಜಿ.ಬಿ.ನಾಗರಾಜ್

ಚಿತ್ರದುರ್ಗ: ಚಿತ್ರದುರ್ಗ–ದಾವಣಗೆರೆ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ತಿಗೆ ಘೋಷಣೆಯಾಗಿರುವ ಚುನಾವಣೆಗೆ ಕಾಂಗ್ರೆಸ್ ಹೊಸ ಅಭ್ಯರ್ಥಿಯನ್ನು ಕಣಕ್ಕೆ ಇಳಿಸುವ ಆಲೋಚನೆ ಮಾಡುತ್ತಿದೆ. ಬಿಜೆಪಿ ಅಭ್ಯರ್ಥಿ ಆಯ್ಕೆ ಬಹುತೇಕ ಪೂರ್ಣಗೊಂಡಿದ್ದು, ಘೋಷಣೆ ಮಾತ್ರ ಬಾಕಿ ಇದೆ.

ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದ ವಿಧಾನಪರಿಷತ್ ಸದಸ್ಯ ಜಿ.ರಘು ಆಚಾರ್ ಸ್ಪರ್ಧೆಯಿಂದ ಹಿಂದೆ ಸರಿಯುವ ನಿಲುವಿಗೆ ಗಟ್ಟಿಯಾಗಿ ಅಂಟಿಕೊಂಡಿರುವುದು ಕಾಂಗ್ರೆಸ್‌ಗೆ ತಲೆನೋವಾಗಿ ಪರಿಣಮಿಸಿದೆ. ಅವರು ನಿಲುವು ಬದಲಾಯಿಸದೇ ಇರುವುದರಿಂದ ಹೊಸ ಅಭ್ಯರ್ಥಿಯ ಹುಡುಕಾಟ ಪಕ್ಷಕ್ಕೆ ಅನಿವಾರ್ಯವಾಗಿದೆ. ಆಕಾಂಕ್ಷಿಗಳ ಪಟ್ಟಿ ಕೆಪಿಸಿಸಿ ಅಂಗಳ ತಲುಪಿದ್ದು, ನ.20ರಂದು ತೀರ್ಮಾನ ಹೊರಬೀಳುವ ಸಾಧ್ಯತೆ ಇದೆ.

ಚುನಾವಣೆ ಸಿದ್ಧತೆಯನ್ನು ಎಲ್ಲ ಪಕ್ಷಗಳಿಗಿಂತ ಮೊದಲು ಶುರು ಮಾಡಿದ್ದ ಬಿಜೆಪಿಯ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆ ಕೊನೆ ಘಟ್ಟ ತಲುಪಿದೆ. ಶಾಸಕರು, ಸಂಸದರು ಹಾಗೂ ಪಕ್ಷದ ನಾಯಕರ ಅಭಿಪ್ರಾಯ ಪಡೆದ ಪಕ್ಷ, ವರಿಷ್ಠರಿಗೆ ವರದಿ ಸಲ್ಲಿಸಿದೆ. ಬಿಜೆಪಿ ರಾಜ್ಯ ಘಟಕದ ಕಾರ್ಯದರ್ಶಿ ಕೆ.ಎಸ್. ನವೀನ್, ರಾಜ್ಯ ಖನಿಜ ನಿಗಮದ ಅಧ್ಯಕ್ಷ ಎಸ್.ಲಿಂಗಮೂರ್ತಿ, ಒಬಿಸಿ ಮೋರ್ಚಾದ ಉಪಾಧ್ಯಕ್ಷ ಸಿದ್ದೇಶ್ ಯಾದವ ಸೇರಿ ನಾಲ್ಕು ಹೆಸರುಗಳನ್ನು ಶಿಫಾರಸು ಮಾಡಲಾಗಿತ್ತು. ಇದರಲ್ಲಿ ಕೆ.ಎಸ್.ನವೀನ್ ಅವರ ಹೆಸರು ಅಂತಿಮಗೊಳ್ಳುವ ಸಾಧ್ಯತೆ ಇದೆ.

ಜೆಡಿಎಸ್ ಈವರೆಗೆ ತನ್ನ ನಿಲುವು ಸ್ಪಷ್ಟಪಡಿಸಿಲ್ಲ. ಉದ್ಯಮಿ ಬಿ.ಟಿ.ಚನ್ನಬಸಪ್ಪ ಅವರ ಕುಟುಂಬ ಜೆಡಿಎಸ್‌ನಿಂದ ಹಲವು ಬಾರಿ ಈ ಕ್ಷೇತ್ರವನ್ನು ಪ್ರತಿನಿಧಿಸಿದೆ. ಇತ್ತೀಚೆಗೆ ನಡೆದ ಮೂರು ಚುನಾವಣೆಗಳಲ್ಲಿ ಪಕ್ಷಕ್ಕೆ ನಿರೀಕ್ಷಿತ ಬೆಂಬಲ ಸಿಕ್ಕಿಲ್ಲ. ಸ್ಥಳೀಯರು ಸ್ಪರ್ಧೆಗೆ ಹಿಂದೇಟು ಹಾಕುತ್ತಿದ್ದಾರೆ. ಯಾರನ್ನು ಕಣಕ್ಕೆ ಇಳಿಸಬೇಕು ಎಂಬುದಕ್ಕೆ ಸಂಬಂಧಿಸಿದಂತೆ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ನೇತೃತ್ವದಲ್ಲಿ ಸಭೆ ನಡೆದಿದೆ. ಅಭ್ಯರ್ಥಿ ಆಯ್ಕೆ ಇನ್ನಷ್ಟೇ ಪೂರ್ಣಗೊಳ್ಳಬೇಕಿದೆ.

ಈ ಕ್ಷೇತ್ರವನ್ನು ಅತಿ ಹೆಚ್ಚು ಬಾರಿ ಪ್ರತಿನಿಧಿಸಿದ್ದು ಕಾಂಗ್ರೆಸ್. 2013ರಲ್ಲಿ ನಡೆದ ಉಪಚುನಾವಣೆಯಲ್ಲಿ ಜಿ. ರಘು ಆಚಾರ್ ಪಕ್ಷೇತರ ಅಭ್ಯರ್ಥಿಯಾಗಿ ಗೆಲುವು ಸಾಧಿಸಿ ಕಾಂಗ್ರೆಸ್ ಸೇರಿದ್ದರು. ಆ ಬಳಿಕ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಅಧಿಕೃತವಾಗಿ ಕಣಕ್ಕೆ ಇಳಿದು ವಿಜೇತರಾಗಿದ್ದರು. ಸತತ ಎರಡು ಬಾರಿ ಆಯ್ಕೆಯಾಗಿದ್ದ ಇವರು ವಿಧಾನಸಭಾ ಚುನಾವಣೆಯತ್ತ ಮುಖ ಮಾಡಲು ಮುಂದಾಗಿದ್ದಾರೆ. ಪರಿಷತ್ ಚುನಾವಣೆಯಲ್ಲಿ ಹೊಸಬರಿಗೆ ಅವಕಾಶ ನೀಡುವಂತೆ ಪಕ್ಷಕ್ಕೆ ಸಲಹೆ ನೀಡಿದ್ದಾರೆ.

ಚಿತ್ರದುರ್ಗ ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ಅವರು 2009ರಲ್ಲಿ ಬಿಜೆಪಿ ಪ್ರತಿನಿಧಿಸಿದ್ದು ಹೊರತುಪಡಿಸಿ 'ಕಮಲ' ಪಕ್ಷ ಈವರೆಗೆ ಈ ಕ್ಷೇತ್ರದಲ್ಲಿ ನೆಲೆ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಕೆ.ಎಸ್. ನವೀನ್ ಅವರು ರಘು ಆಚಾರ್ ವಿರುದ್ಧ ಸತತ ಎರಡು ಬಾರಿ ಪರಾಭವಗೊಂಡಿದ್ದರು. ಮತ್ತೆ ಇದೇ ಸಾಂಪ್ರದಾಯಿಕ ಅಭ್ಯರ್ಥಿಗಳು ಕಣಕ್ಕೆ ಇಳಿಯುವ ಲೆಕ್ಕಾಚಾರ ಕ್ಷೇತ್ರದಲ್ಲಿತ್ತು. ಮೂಲತಃ ಚಿತ್ರದುರ್ಗದವರೇ ಆಗಿರುವ ಬೆಂಗಳೂರು ನಿವಾಸಿ ಸೋಮಶೇಖರ್ ಎಂಬುವರನ್ನು ಕಣಕ್ಕೆ ಇಳಿಸಲು ಕಾಂಗ್ರೆಸ್ ಆಲೋಚಿಸುತ್ತಿದೆ.

ಚಿತ್ರದುರ್ಗ ಜಿಲ್ಲೆಯ ಆರು ವಿಧಾನಸಭಾ ಕ್ಷೇತ್ರ, ದಾವಣಗೆರೆ ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳು ಇದರ ವ್ಯಾಪ್ತಿಯಲ್ಲಿವೆ. 5,070 ಮತದಾರರು ವಿಧಾನಪರಿಷತ್ ಕ್ಷೇತ್ರದಲ್ಲಿದ್ದಾರೆ. ಅತಿ ಹೆಚ್ಚು ಮತಗಳು ಚಿತ್ರದುರ್ಗ ಜಿಲ್ಲೆಯಲ್ಲೇ ಇರುವುದರಿಂದ ದಾವಣಗೆರೆ ಜಿಲ್ಲೆಯಲ್ಲಿ ಆಕಾಂಕ್ಷಿಗಳ ಸಂಖ್ಯೆ ವಿರಳ. ಗ್ರಾಮ ಪಂಚಾಯಿತಿ ಸದಸ್ಯರ ಮತಗಳೇ ಈ ಚುನಾವಣೆಗೆ ನಿರ್ಣಾಯಕ. ತಮ್ಮದೇ ಪಕ್ಷದ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವುದಾಗಿ ಕಾಂಗ್ರೆಸ್ ಹಾಗೂ ಬಿಜೆಪಿ ಹೇಳಿಕೊಳ್ಳುತ್ತಿವೆ.



ವಿಧಾನಪರಿಷತ್ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂಬ ನಿಲುವಿಗೆ ಬದ್ಧನಾಗಿದ್ದೇನೆ. ಯಾರೇ ಅಭ್ಯರ್ಥಿಯಾದರೂ ಗೆಲುವಿಗೆ ಶ್ರಮಿಸುವೆ.
ಜಿ.ರಘು ಆಚಾರ್, ವಿಧಾನಪರಿಷತ್ ಸದಸ್ಯ



ನಾಲ್ವರು ಹೆಸರುಗಳಲ್ಲಿ ಅಂತಿಮವಾಗಿ ಇಬ್ಬರ ಬಗ್ಗೆ ವರಿಷ್ಠರು ಒಲವು ತೋರಿದ್ದು, ಜನಸ್ವರಾಜ್ ಯಾತ್ರೆ ಮುಗಿಯುವ ಮುನ್ನವೇ ಅಭ್ಯರ್ಥಿ ಆಯ್ಕೆ ಆಗಲಿದೆ.
ಎ.ಮುರುಳಿ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ

ಮಂಡ್ಯ: ದಿನೇಶ್ ಕಾಂಗ್ರೆಸ್ ಅಭ್ಯರ್ಥಿ?



ಬೆಂಗಳೂರು: ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರ ವಿಶೇಷಾಧಿಕಾರಿಯಾಗಿದ್ದ ದಿನೇಶ್ ಗೂಳಿಗೌಡ ಅವರು ವಿಧಾನ ಪರಿಷತ್‌ನ ಮಂಡ್ಯ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ.

ಬಿಜೆಪಿ ಮುಖಂಡ ಎಸ್.ಎಂ. ಕೃಷ್ಣ ಅವರಿಗೂ ದಿನೇಶ್ ಆಪ್ತರಾಗಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಸಂಪರ್ಕಿಸಿದ್ದ ಕೃಷ್ಣ, ಆಪ್ತನಿಗೆ ಟಿಕೆಟ್ ನೀಡುವಂತೆ ಪ್ರಭಾವ ಬೀರಿದ್ದರು. ದಿನೇಶ್ ಹೆಸರನ್ನು ಶಿವಕುಮಾರ್, ಈ ಕ್ಷೇತ್ರಕ್ಕೆ ಒಂದೇ ಹೆಸರನ್ನು ಹೈಕಮಾಂಡ್‌ಗೆ ಕಳಿಸಲಾಗಿದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ. ಶಿವಕುಮಾರ್ ಸೂಚನೆಯಂತೆ ದಿನೇಶ್, ಸಹಕಾರ ಸಚಿವರ ವಿಶೇಷಾಧಿಕಾರಿ ಹುದ್ದೆ ತೊರೆದಿದ್ದಾರೆ. ಮೂರು ದಿನಗಳಿಂದ ಮಂಡ್ಯ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಸದಸ್ಯರನ್ನು ಭೇಟಿಮಾಡಿ, ಮತ ಯಾಚಿಸುತ್ತಿದ್ದಾರೆ. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಕೂಡ ದಿನೇಶ್ ಅಭ್ಯರ್ಥಿಯಾಗುವುದನ್ನು ಸಮ್ಮತಿಸಿದ್ದಾರೆ ಎಂದು ಗೊತ್ತಾಗಿದೆ.

ಮಂಡ್ಯ ಜಿಲ್ಲೆಯವರಾದ ದಿನೇಶ್, ದೀರ್ಘ ಕಾಲ ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿದ್ದರು. ಹಿಂದಿನ ಕಾಂಗ್ರೆಸ್ ಸರ್ಕಾರ ಹಾಗೂ ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಸಚಿವರಾಗಿದ್ದ ಡಾ.ಜಿ. ಪರಮೇಶ್ವರ ಅವರ ವಿಶೇಷಾಧಿಕಾರಿಯಾಗಿ ಕೆಲಸ ಮಾಡಿದ್ದರು. ಸೋಮಶೇಖರ್ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ ಬಳಿಕ ದಿನೇಶ್ ಅವರೊಂದಿಗೆ ಗುರುತಿಸಿಕೊಂಡಿದ್ದರು.

ಮಂಡ್ಯ ಜಿಲ್ಲೆಯ ಕಾಂಗ್ರೆಸ್ ಮುಖಂಡರಾದ ಎನ್. ಚೆಲುವರಾಯಸ್ವಾಮಿ, ಪಿ.ಎಂ. ನರೇಂದ್ರಸ್ವಾಮಿ ಮತ್ತು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ವಿಧಾನ ಪರಿಷತ್‌ನ ಮಾಜಿ ಸದಸ್ಯ ರಾಮಕೃಷ್ಣ ಅವರೊಂದಿಗೆ ಸಿದ್ದರಾಮಯ್ಯ ಅವರನ್ನು ಬುಧವಾರ ಭೇಟಿ ಮಾಡಿರುವ ದಿನೇಶ್, ತಮ್ಮ ಸ್ಪರ್ಧೆಗೆ ಬೆಂಬಲ ಕೋರಿದ್ದಾರೆ. ಬಳಿಕ ಶಿವಕುಮಾರ್ ಅವರನ್ನೂ ಭೇಟಿಮಾಡಿ ಚರ್ಚಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ದಿನೇಶ್, 'ಹಲವು ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಕೆಲಸ ಮಾಡಿದ್ದೇನೆ. ಅದನ್ನು ಪರಿಗಣಿಸಿ ಟಿಕೆಟ್ ನೀಡುವುದಾಗಿ ನಾಯಕರು ಭರವಸೆ ನೀಡಿದ್ದಾರೆ. ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರ ಸೂಚನೆಯಂತೆ ಕ್ಷೇತ್ರದಲ್ಲಿ ಪ್ರವಾಸ ಆರಂಭಿಸಿದ್ದೇನೆ' ಎಂದರು.

ಜೆಡಿಎಸ್‌ನಿಂದ ಸೂರಜ್ ರೇವಣ್ಣ ಸ್ಪರ್ಧೆ



ಡಾ.ಸೂರಜ್ ರೇವಣ್ಣ

ಹಾಸನ: 'ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಗೆ ಜೆಡಿಎಸ್ ಅಭ್ಯರ್ಥಿಯಾಗಿ ಶಾಸಕ ಎಚ್‌.ಡಿ.ರೇವಣ್ಣ ಅವರ ಪುತ್ರ ಡಾ.ಸೂರಜ್ ರೇವಣ್ಣ ಅವರನ್ನು ಕಣಕ್ಕಿಳಿಸಲು ನಿರ್ಧರಿಸಲಾಗಿದೆ' ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಕೆ. ಕುಮಾರಸ್ವಾಮಿ ತಿಳಿಸಿದರು.

'ವಿಧಾನಸಭಾ ಕ್ಷೇತ್ರವಾರು ಸಭೆ ನಡೆಸಿ, ಕಾರ್ಯಕರ್ತರು, ಮುಖಂಡರು, ಶಾಸಕರ ಅಭಿಪ್ರಾಯ ಪಡೆಯಲಾಗಿದೆ. ಅಭ್ಯರ್ಥಿ ಆಯ್ಕೆಯಲ್ಲಿ ಯಾವುದೇ ಭಿನ್ನಾಭಿಪ್ರಾಯ ಬರಲಿಲ್ಲ. ಪ್ರಸ್ತುತ ಸಂದರ್ಭದಲ್ಲಿ ಎದುರಾಳಿಗಳ ವಿರುದ್ಧ ಹೋರಾಡಲು ಸೂರಜ್ ಸಮರ್ಥ ಅಭ್ಯರ್ಥಿಯಾಗಿದ್ದು, ಶುಕ್ರವಾರ ಮಧ್ಯಾಹ್ನ ನಾಮಪತ್ರ ಸಲ್ಲಿಸಲಿದ್ದಾರೆ. ಭವಾನಿ ಅವರಿಗೆ ಟಿಕೆಟ್ ನೀಡಬೇಕೆಂದು ಕಾರ್ಯಕರ್ತರು ಒತ್ತಾಯಿಸಿದ್ದರು. ಆದರೆ, ಅವರು ಆಸಕ್ತಿ ತೋರಲಿಲ್ಲ' ಎಂದು ಗುರುವಾರ ರಾತ್ರಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಪ್ರಚಾರಕ್ಕೆ ಸಮಾನ ಅವಕಾಶ: ಬಿಜೆಪಿ ಮನವಿ

ಬೆಂಗಳೂರು: ವಿಧಾನಪರಿಷತ್ ಚುನಾವಣೆ ಪ್ರಚಾರದ ಸಂದರ್ಭದಲ್ಲಿ ಎಲ್ಲ ಪಕ್ಷಗಳಿಗೂ ಒಂದೇ ರೀತಿಯ ನಿಯಮ ಪಾಲನೆಗೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಎಂದು ಬಿಜೆಪಿ ಮುಖ್ಯಚುನಾವಣಾಧಿಕಾರಿಗಳಿಗೆ ಮನವಿ ಮಾಡಿದೆ.

ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಮತ್ತು ವಕೀಲ ವಿವೇಕ್ ಸುಬ್ಬಾರೆಡ್ಡಿ ಮತ್ತು ಪಕ್ಷದ ಚುನಾವಣಾ ಆಯೋಗ ವಿಭಾಗದ ರಾಜ್ಯ ಸಂಚಾಲಕ ದತ್ತಗುರು ಹೆಗಡೆ ಅವರು ಗುರುವಾರ ಮನವಿ ಸಲ್ಲಿಸಿದರು.

ಮಂಡ್ಯ ಜಿಲ್ಲೆಯಲ್ಲಿ ಪಕ್ಷದ ಕಾರ್ಯಕರ್ತರು ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿಗಳೇ ಅಡ್ಡಿಪಡಿಸಿದ್ದಾರೆ. ಸಾರ್ವಜನಿಕ ಸ್ಥಳ, ಸಾರ್ವಜನಿಕ ಸಭಾ ಭವನ ಇವೆಲ್ಲವನ್ನೂ ಎಲ್ಲಾ ಪಕ್ಷಗಳಿಗೂ ಸಮಾನವಾಗಿ ಉಪಯೋಗಿಸಲು ಅನುವು ಮಾಡಿಕೊಡಬೇಕು ಎಂದು ಮನವಿಯಲ್ಲಿ ಹೇಳಿದ್ದಾರೆ.

ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಸಹೋದರ ಸುಜಾ ಕುಶಾಲಪ್ಪ ಟಿಕೆಟ್‌ಗೆ ಕಸರತ್ತು

ಬಿಜೆಪಿಯಲ್ಲಿ ತಳಮಳ, ಕಾಂಗ್ರೆಸ್‌ನಲ್ಲಿ ಸ್ಥಳೀಯರಿಗೆ ಪಟ್ಟು

• ಆದಿತ್ಯ ಕೆ.ಎ.

ಮಡಿಕೇರಿ: ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆಯಲ್ಲಿ ಕೊಡಗು ಕ್ಷೇತ್ರದ ಅಭ್ಯರ್ಥಿ ಆಯ್ಕೆಗೆ ಬಿಜೆಪಿಯಲ್ಲಿ ತಳಮಳ ಆರಂಭವಾಗಿದ್ದರೆ, ಕಾಂಗ್ರೆಸ್‌ನಲ್ಲಿ ಸ್ಥಳೀಯ ಅಭ್ಯರ್ಥಿಗೇ ಟಿಕೆಟ್ ನೀಡಬೇಕೆಂದು ಮುಖಂಡರು ಪಟ್ಟು ಹಿಡಿದಿದ್ದಾರೆ. ಜಿಲ್ಲೆಯಲ್ಲಿ ಭದ್ರ ನೆಲೆಯಿಲ್ಲದ ಕಾರಣಕ್ಕೆ ಜೆಡಿಎಸ್‌ನಲ್ಲಿ ರಾಜಕೀಯ ಚಟುವಟಿಕೆ ಇನ್ನೂ ಬಿರುಸು ಪಡೆದಿಲ್ಲ.

ಬಿಜೆಪಿಯಲ್ಲಿ 10ಕ್ಕೂ ಹೆಚ್ಚು ಮಂದಿ ಟಿಕೆಟ್ ಆಕಾಂಕ್ಷಿಗಳಿದ್ದು, ಮಡಿಕೇರಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಸಹೋದರ ಸುಜಾ ಕುಶಾಲಪ್ಪ ಪ್ರಬಲವಾಗಿ ಲಾಬಿ ನಡೆಸುತ್ತಿದ್ದಾರೆ. ಅವರ ಮತ್ತೊಬ್ಬ ಸಹೋದರ ಎಂ.ಪಿ. ಸುನಿಲ್ ಸುಬ್ರಮಣಿ ಈ ಕ್ಷೇತ್ರದಿಂದಲೇ ಕಳೆದ ಬಾರಿ ಜಯಿಸಿ ಮೇಲ್ಮನೆಗೆ ಆಯ್ಕೆಯಾಗಿದ್ದರು. ಕಾನೂನು ತೊಡಕಿನಿಂದ ಸುಜಾ ಕುಶಾಲಪ್ಪಗೆ ಅಂದು ಸ್ಪರ್ಧಿಸಲು ಸಾಧ್ಯವಾಗಿರಲಿಲ್ಲ. ತಮ್ಮ ಸುನಿಲ್‌ಗೆ ಟಿಕೆಟ್ ಸಿಕ್ಕಿತ್ತು. ಈಗ ಕ್ಷೇತ್ರ ಬಿಟ್ಟುಕೊಡುವಂತೆ ಸುಜಾ ಪಟ್ಟು ಹಿಡಿದಿರುವುದು ತಮ್ಮನಿಗೆ ನುಂಗಲಾರದ ತುತ್ತಾಗಿದೆ. ಸಹೋದರರಲ್ಲಿ ಯಾರಿಗೆ ಟಿಕೆಟ್ ಎಂಬ ಚರ್ಚೆ ಜಿಲ್ಲೆಯಲ್ಲಿ ನಡೆಯುತ್ತಿದೆ.

ಶಾಸಕ ಕೆ.ಜಿ.ಬೋಪಯ್ಯ ಅವರ ಆತ್ಮೀಯ, ಪಶ್ಚಿಮಘಟ್ಟಗಳ ಕಾರ್ಯಪಡೆ ಅಧ್ಯಕ್ಷ ರವಿ ಕುಶಾಲಪ್ಪ ಹೆಸರೂ ಕೇಳಿ ಬರುತ್ತಿದೆ.

'ಪಕ್ಷ ಹೇಳಿದಂತೆ ಕೇಳುವ ವ್ಯಕ್ತಿ ನಾನು. ಪಕ್ಷ ಅವಕಾಶ ಕೊಟ್ಟರೆ ಮತ್ತೆ ಸ್ಪರ್ಧಿಸುತ್ತೇನೆ. ಇಲ್ಲದಿದ್ದರೆ ಸುಮ್ಮನಿರುತ್ತೇನೆ' ಎಂದು ಸುನಿಲ್ ಆಪ್ತರೊಂದಿಗೆ ಹೇಳಿಕೊಂಡಿದ್ದಾರೆ

ಮಾಜಿ ಸಚಿವ ಎ.ಮಂಜು ಅವರ ಪುತ್ರ, ಹಾಸನದ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮಂಥರ್‌ಗೌಡ ಕಾಂಗ್ರೆಸ್ ಟಿಕೆಟ್ ನಿರೀಕ್ಷೆಯಲ್ಲಿದ್ದಾರೆ. ರಾಜ್ಯ ವರಿಷ್ಠರ ಪಟ್ಟಿಯಲ್ಲೂ ಅವರ ಹೆಸರಿದೆ ಎನ್ನಲಾಗಿದೆ. ಕೆಪಿಸಿಸಿ ಪ್ರಧಾನ ಹುದ್ದೆಯಲ್ಲಿರುವ ಜಿಲ್ಲೆಯ ಮುಖಂಡರೊಬ್ಬರು ಮಂಥರ್ ಪರ ಲಾಬಿ ನಡೆಸುತ್ತಿದ್ದಾರೆ. ಆದರೆ, ಸ್ಥಳೀಯ ಕಾಂಗ್ರೆಸ್ ಮುಖಂಡರು ಜಿಲ್ಲೆಯ ಅಭ್ಯರ್ಥಿಗೇ ಟಿಕೆಟ್ ನೀಡಬೇಕೆಂದು ಪಟ್ಟು ಹಿಡಿದಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದಿದ್ದ ಸಭೆಯಲ್ಲಿ ಸೋಮವಾರಪೇಟೆ ಬ್ಲಾಕ್ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಕೆ.ಎಂ. ಲೋಕೇಶ್‌ಗೆ ಟಿಕೆಟ್ ನೀಡಬೇಕೆಂಬ ತೀರ್ಮಾನಕ್ಕೆ ಬರಲಾಗಿದೆ. ರಾಜ್ಯ ವರಿಷ್ಠರಿಗೂ ಲೋಕೇಶ್ ಹೆಸರೊಂದನ್ನು ಶಿಫಾರಸು ಮಾಡಲಾಗಿದೆ. ಈ ಹಿಂದೆ ಮಡಿಕೇರಿ ವಿಧಾನಸಭೆ ಕ್ಷೇತ್ರದಿಂದ ಲೋಕೇಶ್ ಸ್ಪರ್ಧಿಸಿ ಪರಾಭವಗೊಂಡಿದ್ದರು.

'ಆರಂಭದಲ್ಲಿ ಅವರು ಸ್ಪರ್ಧೆಗೆ ಉತ್ಸಾಹ ತೋರಿಸಿರಲಿಲ್ಲ. ಈಗ ಸ್ಪರ್ಧೆಗೆ ನಿರ್ಧರಿಸಿದ್ದಾರೆ' ಎಂದು ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಜಿಲ್ಲೆಯ ಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿ ಬೆಂಬಲಿತರ ಪ್ರಾಬಲ್ಯವಿದೆ. ಜಿಲ್ಲೆಯಲ್ಲಿ 1,334 ಮಂದಿಗೆ ಹಕ್ಕು ಚಲಾವಣೆಯ ಅವಕಾಶವಿದೆ. ಬಿಜೆಪಿಯು ಕ್ಷೇತ್ರ ಉಳಿಸಿಕೊಳ್ಳುವ ತವಕದಲ್ಲಿದೆ. ಈ ಕ್ಷೇತ್ರವನ್ನು ಕಾಂಗ್ರೆಸ್ ವಶಕ್ಕೆ ಪಡೆಯಲು ಕಸರತ್ತು ನಡೆಸುತ್ತಿದೆ.



ಸುಜಾ ಕುಶಾಲಪ್ಪ



ಸುನಿಲ್ ಸುಬ್ರಮಣಿ



ಕೆ.ಎಂ. ಲೋಕೇಶ್



ಮಂಥರ್‌ಗೌಡ

ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಕೊಡಗಿನವರಿಗೇ ಅವಕಾಶ ನೀಡಬೇಕು. ಸ್ಥಳೀಯರಿಗೆ ಅವಕಾಶ ಕೊಟ್ಟರೆ ಮಾತ್ರ ಬಿಜೆಪಿ ವಿರುದ್ಧ ಹೋರಾಡಲು ಸಾಧ್ಯ.
ಟಿ.ಪಿ.ರಮೇಶ್, ಕೆಪಿಸಿಸಿ ಮಾಧ್ಯಮ ಸಂವಹನ ವಕ್ತಾರ

ಸ್ಥಳೀಯ ಅಭ್ಯರ್ಥಿಗೇ ಟಿಕೆಟ್ ನೀಡುವಂತೆ ನಿರ್ಣಯ ಕೈಗೊಂಡು ವರಿಷ್ಠರಿಗೆ ಹೆಸರು ಶಿಫಾರಸು ಮಾಡಲಾಗಿದೆ. ವರಿಷ್ಠರು ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ
ಧರ್ಮಜ ಉತ್ತಪ್ಪ, ಕಾರ್ಯಾಧ್ಯಕ್ಷ, ಜಿಲ್ಲಾ ಕಾಂಗ್ರೆಸ್

ಸ್ಥಳೀಯ ಸಂಸ್ಥೆಗಳಲ್ಲಿ ನಮ್ಮ ಪ್ರಾಬಲ್ಯವಿಲ್ಲ. ಆದರೂ, ನಮ್ಮ ಅಭ್ಯರ್ಥಿ ಸ್ಪರ್ಧಿಸುವುದು ಖಚಿತ
ಕೆ.ಎಂ.ಬಿ.ಗಣೇಶ್, ಜಿಲ್ಲಾ ಅಧ್ಯಕ್ಷ, ಜೆಡಿಎಸ್

'₹ 15 ಕೋಟಿ ಬ್ಯಾಂಕ್ ಗ್ಯಾರಂಟಿ ತೋರಿಸಿದವರಿಗೆ ಟಿಕೆಟ್'

ಮೈಸೂರು: 'ವಿಧಾನ ಪರಿಷತ್ ಚುನಾವಣೆಗೆ ಸ್ಪರ್ಧಿಸಬೇಕಾದವರು ₹ 1 ಲಕ್ಷ ಠೇವಣಿ ಇಡಬೇಕು ಹಾಗೂ ₹ 15 ಕೋಟಿ ಬ್ಯಾಂಕ್ ಗ್ಯಾರಂಟಿ ತೋರಿಸಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಕಾಂಕ್ಷಿಗಳಿಗೆ ಹೇಳಿದ್ದಾರೆ' ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಎಚ್ ವಿಶ್ವನಾಥ್ ಆರೋಪಿಸಿದರು.

'ಕಾಂಗ್ರೆಸ್ ಮಾತ್ರವಲ್ಲ ಎಲ್ಲ ಪ್ರಮುಖ ಪಕ್ಷಗಳಲ್ಲೂ ಹಣ ಇದ್ದವರಷ್ಟೇ ಸ್ಪರ್ಧಿಸಬೇಕಾದ ಸ್ಥಿತಿ ಇದೆ. ಸಾಮಾಜಿಕ ನ್ಯಾಯವನ್ನು ಕೇಳುವವರೇ ಇಲ್ಲದ ಪರಿಸ್ಥಿತಿಯಲ್ಲಿ ಚುನಾವಣೆ ನಡೆಯುತ್ತಿದೆ. ಇಂಥ ಭ್ರಷ್ಟಾಚಾರದ ಬಗ್ಗೆ ದನಿ ಎತ್ತುವವರು ಯಾರು' ಎಂದು ಇಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು. 'ಬಿಜೆಪಿಗೆ ಬಾರದೇ ಟಿಕೆಟ್ ಕೊಡಿ ಎಂದು ಸಂದೇಶ್ ನಾಗರಾಜ್ ಕೇಳುವುದು ಸರಿಯಲ್ಲ. ಅವರಿಗೆ 75 ವರ್ಷ ದಾಟಿದೆ. ಮೊದಲಿನಿಂದಲೂ ಪಕ್ಷಕ್ಕಾಗಿ ದುಡಿದಿರುವ ರಘು ಕೌಟಿಲ್ಯ ಅವರಿಗೆ ಟಿಕೆಟ್ ನೀಡಬೇಕು' ಎಂದರು.

ಸ್ಪರ್ಧೆ ಖಚಿತ: ಸಂದೇಶ್ ನಾಗರಾಜ್

ಮೈಸೂರು: 'ಬಿಜೆಪಿ ಟಿಕೆಟ್ ಘೋಷಣೆಯಾಗುವವರೆಗೆ ಕಾಯುತ್ತೇನೆ. ಟಿಕೆಟ್ ನೀಡದಿದ್ದರೂ ಸ್ಪರ್ಧೆ ಖಚಿತ. ಪಕ್ಷೇತರನಾಗಿಯೋ ಅಥವಾ ಬೇರೆ ಪಕ್ಷದಿಂದಲೋ ಎಂಬುದನ್ನು ಆಮೇಲೆ ಹೇಳುತ್ತೇನೆ' ಎಂದು ಬಿಜೆಪಿ ಟಿಕೆಟ್ ಆಕಾಂಕ್ಷಿ ಸಂದೇಶ್ ನಾಗರಾಜ್ ಹೇಳಿದರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಕೂಡ ಭರವಸೆ ನೀಡಿದ್ದು, ಟಿಕೆಟ್ ಸಿಗುವ ವಿಶ್ವಾಸವಿದೆ. ಘೋಷಣೆ ಆಗುತ್ತಿದ್ದಂತೆ ಜೆಡಿಎಸ್‌ಗೆ ರಾಜೀನಾಮೆ ನೀಡಿ ಬಿಜೆಪಿ ಸದಸ್ಯತ್ವ ಪಡೆಯುತ್ತೇನೆ' ಎಂದು ಅವರು 'ಪ್ರಜಾವಾಣಿ'ಗೆ ಗುರುವಾರ ತಿಳಿಸಿದರು.

ಕಾಂಗ್ರೆಸ್‌ನ ಹಾಲಿ ಸದಸ್ಯ ಪ್ರಸನ್ನಕುಮಾರ್ ಅವರೇ ಮತ್ತೆ ಕಣಕ್ಕೆ

ಬಿಜೆಪಿ: ಅಭ್ಯರ್ಥಿ ಆಯ್ಕೆಯ ಕಗ್ಗಂಟು

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ ಸ್ಥಾನಕ್ಕೆ ಡಿ.10ರಂದು ನಡೆಯುವ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿ ಈಗಾಗಲೇ ನಾಮಪತ್ರ ಸಲ್ಲಿಸಿದ್ದಾರೆ. ಬಿಜೆಪಿಯಲ್ಲಿ ಆಕಾಂಕ್ಷಿಗಳ ದೊಡ್ಡ ಪಟ್ಟಿಯೇ ಇದ್ದು, ಆಯ್ಕೆಯ ಕಸರತ್ತು ನಡೆದಿದೆ. ಹಿಂದಿನ ಚುನಾವಣೆಯಲ್ಲಿ ತೀವ್ರ ಪೈಪೋಟಿ ನೀಡಿದ್ದ ಜೆಡಿಎಸ್ ಈ ಬಾರಿ ಅಭ್ಯರ್ಥಿಗಾಗಿ ಪರದಾಡುತ್ತಿದೆ.

2015ರಲ್ಲಿ ನಡೆದ ಚುನಾವಣೆಯಲ್ಲಿ ಅಂದು ವಿಧಾನ ಪರಿಷತ್ ಸದಸ್ಯರಾಗಿದ್ದ ಬಿಜೆಪಿಯ ಆರ್‌.ಕೆ.ಸಿದ್ದರಾಮಣ್ಣ, ಕಾಂಗ್ರೆಸ್‌ನ ಆರ್.ಪ್ರಸನ್ನಕುಮಾರ್, ಜೆಡಿಎಸ್ ಅಭ್ಯರ್ಥಿ ನಿರಂಜನ್ ಮಧ್ಯೆ ತ್ರಿಕೋನ ಸ್ಪರ್ಧೆ ನಡೆದಿತ್ತು. ತೀವ್ರ ಪೈಪೋಟಿ ನಡೆದಿದ್ದ ಆ ಚುನಾವಣೆಯಲ್ಲಿ ಆರ್.ಪ್ರಸನ್ನಕುಮಾರ್ ಆಯ್ಕೆಯಾಗಿದ್ದರು. ಈ ಬಾರಿ ಕಾಂಗ್ರೆಸ್ ಪ್ರಸನ್ನಕುಮಾರ್ ಅವರನ್ನೇ ಮತ್ತೆ ಕಣಕ್ಕೆ ಇಳಿಸಿದೆ.

ಬಿಜೆಪಿಯಲ್ಲಿ ಆಕಾಂಕ್ಷಿಗಳ ದೊಡ್ಡಪಟ್ಟಿಯೇ ಇದೆ. ಈ ಬಾರಿ ಸ್ಪರ್ಧೆ ಬಯಸಿ 8 ಮುಖಂಡರು ಟಿಕೆಟ್ ನೀಡುವಂತೆ ಒತ್ತಡ ತಂತ್ರ ಅನುಸರಿಸುತ್ತಿದ್ದಾರೆ. ವಿಧಾನ ಪರಿಷತ್ ಮಾಜಿ ಸದಸ್ಯರಾದ ಆರ್‌.ಕೆ.ಸಿದ್ದರಾಮಣ್ಣ, ಎಂ.ಬಿ.ಭಾನುಪ್ರಕಾಶ್, ರಾಜ್ಯ ಆರ್ಯವೈಶ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಿ.ಎಸ್.ಅರುಣ್, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಟಿ.ಡಿ.ಮೇಘರಾಜ್, ರಾಜ್ಯ ಕ್ರೀಡಾ ಪ್ರಾಧಿಕಾರದ ಮಾಜಿ ಉಪಾಧ್ಯಕ್ಷ ಗಿರೀಶ್ ಪಟೇಲ್, 'ಸೂಡಾ' ಅಧ್ಯಕ್ಷ ಎಸ್‌.ಎಸ್‌.ಜ್ಯೋತಿಪ್ರಕಾಶ್ ಟಿಕೆಟ್‌ಗಾಗಿ ತೀವ್ರ ಪೈಪೋಟಿ ನಡೆಸಿದ್ದಾರೆ. ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಅವರ ಪುತ್ರ ಕೆ.ಇ.ಕಾಂತೇಶ್ ಹೆಸರು ಮಂಜೂಣಿಯಲ್ಲಿ ಇತ್ತಾದರೂ, ಈ ವದಂತಿಯನ್ನು ಸ್ವತಃ ಈಶ್ವರಪ್ಪ ಅವರೇ ತಳ್ಳಿಹಾಕಿದ್ದಾರೆ. ಯಾರೇ ಅಭ್ಯರ್ಥಿಯಾದರೂ ಈ ಬಾರಿ ಗೆಲುವು ಪಡೆದು ಕಳೆದ ಬಾರಿಯ ಸೋಲಿಗೆ ಸೇಡು ತೀರಿಸಿಕೊಳ್ಳುತ್ತೇವೆ ಎನ್ನುವುದು ಬಿಜೆಪಿ ಮುಖಂಡರ ಒಮ್ಮತದ ವಿಶ್ವಾಸ.

2015ರಲ್ಲಿ ನಡೆದಿದ್ದ ಚುನಾವಣೆಯಲ್ಲಿ ಅನಿರೀಕ್ಷಿತ ಅಭ್ಯರ್ಥಿ ಕಣಕ್ಕೆ ಇಳಿಸಿ ತೀವ್ರ ಪೈಪೋಟಿ ನೀಡಿದ್ದ ಜೆಡಿಎಸ್ ಈ ಬಾರಿ ಅಭ್ಯರ್ಥಿಗಾಗಿ ಪರದಾಡುತ್ತಿದೆ. ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಹುದ್ದೆಯಿಂದ ನಿವೃತ್ತರಾಗಿದ್ದ ನಿರಂಜನ್ ಅವರನ್ನು ಕರೆತಂದು ಕಣಕ್ಕೆ ಇಳಿಸಲಾಗಿತ್ತು. ನಿರಂಜನ್ ಬಿಜೆಪಿ ಅಭ್ಯರ್ಥಿಗಿಂತ ಅಧಿಕ ಮತ ಪಡೆದು ಅಚ್ಚರಿ ಮೂಡಿಸಿದ್ದರು. ಆಗ ಜೆಡಿಎಸ್ ಅಭ್ಯರ್ಥಿ ಪರ ಟೊಂಕಕಟ್ಟಿ ನಿಂತಿದ್ದ ಅಂದಿನ ಶಾಸಕರಾದ ಮಧುಬಂಗಾರಪ್ಪ ಪಕ್ಷ ತೊರೆದಿದ್ದಾರೆ. ಭದ್ರಾವತಿಯ ಅಪ್ಪಾಜಿ ಗೌಡ ನಿಧನರಾಗಿದ್ದಾರೆ. ಜಿಲ್ಲೆಯಲ್ಲಿ ಜೆಡಿಎಸ್ ಪ್ರಾಬಲ್ಯ ಕ್ಷೀಣಿಸಿದೆ. ಸೂಕ್ತ ಅಭ್ಯರ್ಥಿಗಾಗಿ ಪಕ್ಷ ಪರದಾಡುತ್ತಿದೆ.



ನಾನು ಸಚಿವನಾಗಿ ಇರುವವರೆಗೂ ಪುತ್ರ ಕಾಂತೇಶ್‌ಗೆ ಅವಕಾಶ ನೀಡುವಂತೆ ಕೋರುವುದಿಲ್ಲ. ವಿಧಾನ ಪರಿಷತ್ ಅಲ್ಲ, ವಿಧಾನಸಭಾ ಚುನಾವಣೆಗೂ ನಿಲ್ಲಿಸುವುದಿಲ್ಲ.
ಕೆ.ಎಸ್.ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಸಚಿವ



ಆಕಾಂಕ್ಷಿಗಳ ಪಟ್ಟಿ ದೊಡ್ಡದಿರಬಹುದು. ಪಕ್ಷದ ವರಿಷ್ಠರು ಯಾರಿಗೆ ಟಿಕೆಟ್ ನೀಡಿದರೂ ಅವರ ಗೆಲುವಿಗೆ ಎಲ್ಲರೂ ಶ್ರಮಿಸುವೆವು.
ಟಿ.ಡಿ.ಮೇಘರಾಜ್, ಅಧ್ಯಕ್ಷ, ಜಿಲ್ಲಾ ಬಿಜೆಪಿ ಘಟಕ.



ಜಿಲ್ಲೆಯಲ್ಲಿ ಮುಖಂಡರ ಕೊರತೆ ಇದ್ದರೂ, ಪಕ್ಷದ ಪ್ರಾಬಲ್ಯ ಕ್ಷೀಣಿಸಿಲ್ಲ. ಈ ಬಾರಿಯೂ ಅಚ್ಚರಿಯ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲಾಗುವುದು.
ಎಂ.ಶ್ರೀಕಾಂತ್, ರಾಜ್ಯ ಪ್ರಧಾನ ಕಾರ್ಯದರ್ಶಿ, ಜೆಡಿಎಸ್



6 ವರ್ಷ ಮಾಡಿದ ಉತ್ತಮ ಕೆಲಸ. ಸ್ಥಳೀಯ ಸಂಸ್ಥೆಗಳ ಜತೆಗಿನ ಒಡನಾಟ, ಶೇ 40ರಷ್ಟು ಹಿಂದಿನ ಸದಸ್ಯರೇ ಗ್ರಾಮ ಪಂಚಾಯಿತಿಗಳಿಗೆ ಆಯ್ಕೆಯಾಗಿರುವುದು.
ಆರ್.ಪ್ರಸನ್ನಕುಮಾರ್, ಕಾಂಗ್ರೆಸ್ ಅಭ್ಯರ್ಥಿ

ಡಿಕೆಶಿ ಸಂಬಂಧಿ ಎಸ್. ರವಿಗೆ ಮತ್ತೊಮ್ಮೆ ಕಾಂಗ್ರೆಸ್ ಟಿಕೆಟ್



ಎಸ್. ರವಿ

ರಾಮನಗರ: ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಕ್ಷೇತ್ರದಿಂದ ಹಾಲಿ ವಿಧಾನ ಪರಿಷತ್ ಸದಸ್ಯ ಎಸ್. ರವಿ ಅವರಿಗೆ ಕಾಂಗ್ರೆಸ್ ಟಿಕೆಟ್ ಖಾತ್ರಿಯಾಗಿದ್ದು, ಶುಕ್ರವಾರ ಅವರು ನಾಮಪತ್ರ ಸಲ್ಲಿಸಲಿದ್ದಾರೆ.

ನಾಲ್ಕನೇ ಬಾರಿ ರವಿ ಪರಿಷತ್ ಚುನಾವಣಾ ಕಣಕ್ಕೆ ಇಳಿಯುತ್ತಿದ್ದಾರೆ. ಈ ಪೈಕಿ ಎರಡರಲ್ಲಿ ಗೆಲುವು ಕಂಡಿದ್ದು, ಒಮ್ಮೆ ಪರಾಭವಗೊಂಡಿದ್ದಾರೆ. ಮಾಜಿ ಶಾಸಕ ಎಚ್‌.ಸಿ. ಬಾಲಕೃಷ್ಣರ ಸಹೋದರ ಎಚ್‌.ಎನ್. ಅಶೋಕ್ ಸೇರಿದಂತೆ ಹಲವರು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಆಗಿದ್ದರು. ಅಂತಿಮವಾಗಿ ಡಿ.ಕೆ. ಶಿವಕುಮಾರ್ ಸಂಬಂಧಿಯೂ ಆಗಿರುವ ರವಿ ಅವರಿಗೆ ಕಾಂಗ್ರೆಸ್ ಮಣೆ ಹಾಕಿದೆ.

'ರವಿ ಅವರನ್ನು ಒಮ್ಮತದ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದ್ದು, ಶುಕ್ರವಾರ ಮಧ್ಯಾಹ್ನ ಅವರು ಉಮೇದುವಾರಿಕೆ ಸಲ್ಲಿಸಲಿದ್ದಾರೆ' ಎಂದು ರಾಮನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಗಂಗಾಧರ್ 'ಪ್ರಜಾವಾಣಿ'ಗೆ ತಿಳಿಸಿದರು.

ಜೆಡಿಎಸ್‌ನಿಂದ ಸದಸ್ಯ ರಮೇಶ್ ಗೌಡ ಸೇರಿದಂತೆ ಹಲವರ ಹೆಸರು ಚಾಲ್ತಿಯಲ್ಲಿದ್ದು, ಇನ್ನೂ ಅಭ್ಯರ್ಥಿ ಘೋಷಣೆ ಆಗಿಲ್ಲ. ಬಿಜೆಪಿ ಸಹ ಇನ್ನೂ ಅಭ್ಯರ್ಥಿಯನ್ನು ಅಂತಿಮಗೊಳಿಸಿಲ್ಲ.

ರಮೇಶ ಜಾರಕಿಹೊಳಿ– ರಾಜು ಕಾಗೆ ಭೇಟಿ: ಕುತೂಹಲ

ಬೆಳಗಾವಿ: ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ, ಗೋಕಾಕದ ಶಾಸಕ ರಮೇಶ ಜಾರಕಿಹೊಳಿ ಅವರು ಕಾಗವಾಡದ ಕಾಂಗ್ರೆಸ್ ನಾಯಕ ಭರಮಗೌಡ (ರಾಜು) ಕಾಗೆ ಅವರನ್ನು ಗುರುವಾರ ಭೇಟಿಯಾಗಿ ಚರ್ಚಿಸಿರುವುದು ಹಲವು ಚರ್ಚೆಗಳಿಗೆ ಗ್ರಾಸವಾಗಿದೆ.

ಕಾಗವಾಡ ತಾಲ್ಲೂಕಿನ ಉಗಾರ ಖುರ್ದ್ ಪಟ್ಟಣದ ನಿವಾಸದಲ್ಲಿ ಕಾಗೆ ಅವರನ್ನು ರಮೇಶ ಭೇಟಿಯಾದರು. 'ಸಹೋದರ ಲಖನ್ ಜಾರಕಿ ಹೊಳಿ ವಿಧಾನಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದು ನೀವು ಬೆಂಬಲಿಸಬೇಕು' ಎಂದಿದ್ದಾರೆ.

ನಂತರ ಮಾತನಾಡಿದ ಅವರು, 'ಮಾಜಿ ಶಾಸಕ ರಾಜು ಕಾಗೆ ಹಾಗೂ ನಾನು ಹಳೆಯ ಸ್ನೇಹಿತರು. ಅವರಿಗೆ ಆರೋಗ್ಯ ಸರಿ ಇಲ್ಲದಿದ್ದಾಗ ಭೇಟಿ ಸಾಧ್ಯವಾಗಿರಲಿಲ್ಲ. ಅಥಣಿಗೆ ತೆರಳು ವ ಮಾರ್ಗ ಮಧ್ಯದಲ್ಲಿ ಗೆಳೆಯನ ನೆನಪಾಯಿತು. ಭೇಟಿಯಾಗಿ ಆರೋಗ್ಯ ವಿಚಾರಿಸಿದ್ದೇನೆ. ರಾಜಕೀಯ ಚರ್ಚೆ ನಡೆಸಿಲ್ಲ.' ಎಂದರು.

'ವಿಧಾನಪರಿಷತ್ ಚುನಾವಣೆಯಲ್ಲಿ ಅವರು ಅವರ ಪಕ್ಷದ ಪರ ಪ್ರಚಾರ ಕೈಗೊಳ್ಳುತ್ತಾರೆ. ನಾನು ಬಿಜೆಪಿ ಪರ ಪ್ರಚಾರ ಮಾಡುತ್ತೇನೆ' ಎಂದರು.

'ನಾನು ಕಾಂಗ್ರೆಸ್ ಪಕ್ಷದ ಶಿಸ್ತಿನ ಶಿಪಾಯಿ. ವರಿಷ್ಠರು ಯಾರಿಗೆ ಟಿಕೆಟ್ ಕೊಡುತ್ತಾರೋ ಅವರ ಪರ ಪ್ರಚಾರ ಮಾಡುತ್ತೇನೆ' ಎಂದು ರಾಜು ಕಾಗೆ ತಿಳಿಸಿದರು. ಕಾಂಗ್ರೆಸ್ ಕಾಗವಾಡ ಬ್ಲಾಕ್ ಅಧ್ಯಕ್ಷ ವಿಜಯಕುಮಾರ ಅಕಿವಾಟೆ, ಮುಖಂಡರಾದ ಅಭಿನಂದನ ಪಾಟೀಲ ಮತ್ತು ಉತ್ತಮ ಪಾಟೀಲ ಇದ್ದರು.

ಜೆಡಿಎಸ್ ಅಭ್ಯರ್ಥಿ ಘೋಷಣೆ ಇಂದು

ಕೊರಟಗೆರೆ (ತುಮಕೂರು): ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆಗೆ ತುಮಕೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯನ್ನು ಶುಕ್ರವಾರ ಪ್ರಕಟಿಸಲಾಗುವುದು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೆಎಎಸ್ ಅಧಿಕಾರಿ ಅನಿಲ್ ರಾಜಿನಾಮೆ ಅಂಗೀಕಾರಕ್ಕೂ, ನಮ್ಮ ಪಕ್ಷಕ್ಕೂ ಸಂಬಂಧವಿಲ್ಲ. ಸ್ಥಳೀಯ ನಾಯಕರ ತೀರ್ಮಾನದ ಬಳಿಕ ಅಭ್ಯರ್ಥಿ ಘೋಷಿಸಲಾಗುವುದು' ಎಂದು ಸ್ಪಷ್ಟಪಡಿಸಿದ್ದಾರೆ.

ಇಂದ್ರಕಲಾ ಲಂಚ ಪ್ರಕರಣ ಸಿಬಿಐಗೆ

ಬೆಂಗಳೂರು: ರಾಜ್ಯಪಾಲರ ಹುದ್ದೆ ಪಡೆಯುವುದಕ್ಕಾಗಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎಸ್. ಇಂದ್ರಕಲಾ ಅವರು ಬಿಜೆಪಿ ಮತ್ತು ಸಂಘ ಪರಿವಾರದ ನಾಯಕರ ಆಪ್ತನೆಂದು ಗುರುತಿಸಿಕೊಂಡಿದ್ದ ಯುವರಾಜ ಸ್ವಾಮಿ ಅಲಿಯಾಸ್ ಸ್ವಾಮಿಗೆ ₹ 8.2 ಕೋಟಿ ಲಂಚ ನೀಡಿರುವ ಆರೋಪಕ್ಕೆ ಸಂಬಂಧಿಸಿದ ದೂರನ್ನು ರಾಜ್ಯದ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಸಿಬಿಐಗೆ ವರ್ಗಾವಣೆ ಮಾಡಿದೆ.

ಇಂದ್ರಕಲಾ ಅವರು ನಗರದ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ್ದ ದೂರನ್ನು ಆಧರಿಸಿ ತನಿಖೆ ನಡೆಸಲಾಗಿತ್ತು. ಆ ಪ್ರಕರಣದ ಮಾಹಿತಿ ಮತ್ತು ದಾಖಲೆಗಳನ್ನು ಸಂಗ್ರಹಿಸಿದ್ದ ಜನಾಧಿಕಾರ ಸಂಘರ್ಷ ಪರಿಷತ್ ಸಹ ಸಂಸ್ಥಾಪಕ ಆದರ್ಶ್ ಆರ್. ಅಯ್ಯರ್, ಎಸಿಬಿಗೆ ದೂರು ನೀಡಿದ್ದರು. 'ಕೇಂದ್ರ ಸರ್ಕಾರದ ಮಟ್ಟದಲ್ಲಿ ಉನ್ನತ ಹುದ್ದೆ ಪಡೆಯಲು ಲಂಚ ನೀಡಿರುವುದಾಗಿ ಒಪ್ಪಿಕೊಂಡಿರುವ ಇಂದ್ರಕಲಾ ಮತ್ತು ಲಂಚ ಪಡೆದಿರುವವರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಿ ತನಿಖೆ ನಡೆಸಬೇಕು' ಎಂದು ಕೋರಿದ್ದರು. 'ಪ್ರಕರಣವು ಕೇಂದ್ರ ಸರ್ಕಾರದ ವಿಷಯವನ್ನು ಒಳಗೊಂಡಿರುವ ಕಾರಣದಿಂದ ತಮ್ಮ ವ್ಯಾಪ್ತಿಗೆ ಬರುವುದಿಲ್ಲ. ಆದ್ದರಿಂದ ದೂರನ್ನು ಸೂಕ್ತ ಕ್ರಮಕ್ಕಾಗಿ ಸಿಬಿಐಗೆ ವರ್ಗಾವಣೆ ಮಾಡಲಾಗಿದೆ' ಎಂದು ಎಸಿಬಿ ಡಿವೈಎಸ್‌ಪಿ ಎಂ.ಕೆ. ತಮ್ಮಯ್ಯ ನ. 11ರಂದು ಆದರ್ಶ್ ಅವರಿಗೆ ಬರೆದಿರುವ ಪತ್ರದಲ್ಲಿ ಮಾಹಿತಿ ನೀಡಿದ್ದಾರೆ.

ತೀರ್ಪು ರದ್ದುಪಡಿಸಿದ ಸುಪ್ರೀಂ ಕೋರ್ಟ್

ಒಂದನೇ ಪುಟದಿಂದ

'ಶಾಸಕಾಂಗವು ಕಾಯ್ದೆಯ ಉದ್ದೇಶವನ್ನು ಸ್ಪಷ್ಟವಾಗಿ ತಿಳಿಸಿರುವಾಗ ನ್ಯಾಯಾಲಯಗಳು ಗೊಂದಲ ಸೃಷ್ಟಿಸಲು ಯತ್ನಿಸಬಾರದು. ಗೊಂದಲವನ್ನು ಹುಡುಕುವುದಕ್ಕೆ ಅತ್ಯುತ್ಸಾಹ ತೋರುವುದು ಸರಿಯಲ್ಲ' ಎಂದು ನ್ಯಾಯಮೂರ್ತಿಗಳಾದ ಎಸ್. ರವೀಂದ್ರ ಭಟ್ ಮತ್ತು ಬೇಲಾ ಎಂ. ತ್ರಿವೇದಿ ಅವರೂ ಇದ್ದ ಪೀಠ ಸ್ಪಷ್ಟಪಡಿಸಿದೆ.

'ಕಾನೂನನ್ನು ವ್ಯಾಖ್ಯಾನದ ಮೂಲಕ ಇನ್ನಷ್ಟು ಬಲಪಡಿಸಬೇಕೇ ಹೊರತು ನಾಶಪಡಿಸಲು ಯತ್ನಿಸಬಾರದು. ಸಂಕುಚಿತವಾದ ವ್ಯಾಖ್ಯಾನದಿಂದ ಕಾನೂನಿನ ಉದ್ದೇಶವನ್ನೇ ಸೋಲಿಸುವುದನ್ನು ಒಪ್ಪಲಾಗದು. ವಿಸ್ತಾರವಾದ ವ್ಯಾಖ್ಯಾನ ನೀಡದೇ ಇದ್ದರೆ ಕಾನೂನಿನ ಉದ್ದೇಶವನ್ನೇ ಈಡೇರಿಸಲಾಗದು' ಎಂದು ಪೀಠವು ಹೇಳಿದೆ.

ಬಾಂಬೆ ಹೈಕೋರ್ಟ್‌ನ ತೀರ್ಪು ಅಪಾಯಕಾರಿ ಮತ್ತು ಅತಿರೇಕದ ಪೂರ್ವನಿದರ್ಶನ ಸೃಷ್ಟಿಸುತ್ತದೆ. ಇದನ್ನು ರದ್ದುಪಡಿಸಬೇಕು ಎಂದು ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರು ಸುಪ್ರೀಂ ಕೋರ್ಟ್‌ಗೆ ಇತ್ತೀಚೆಗೆ ಹೇಳಿದ್ದರು.

ಅಟಾರ್ನಿ ಜನರಲ್ ಮತ್ತು ರಾಷ್ಟ್ರೀಯ ಮಹಿಳಾ ಆಯೋಗವು ಸಲ್ಲಿಸಿದ್ದ ಮೇಲ್ಮನವಿಗಳನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಿ ತೀರ್ಪು ಕೊಟ್ಟಿತು. ಆರೋಪಿಯು ಬಾಲಕಿಯ ಬಟ್ಟೆಯ ಮೇಲಿನಿಂದ ಎದೆ ಸವರಿದ್ದಾನೆ. ಹಾಗಾಗಿ, ಲೈಂಗಿಕ ದೌರ್ಜನ್ಯ ಎಂದು ಪೋಕ್ಸೊ ಅಡಿಯಲ್ಲಿ ಪರಿಗಣಿಸಲಾಗದು ಎಂದು ಬಾಂಬೆ ಹೈಕೋರ್ಟ್‌ನ ನಾಗಪುರ ಪೀಠದ ನ್ಯಾಯಮೂರ್ತಿ ಪುಷ್ಪಾ ಗನೆದಿವಾಲಾ ನೀಡಿದ್ದ ತೀರ್ಪಿನ ವಿರುದ್ಧ ಈ ಮೇಲ್ಮನವಿಗಳು ಸಲ್ಲಿಕೆಯಾಗಿದ್ದವು.

12 ವರ್ಷದ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ 39 ವರ್ಷದ ಅಪರಾಧಿಗೆ ಮೂರು ವರ್ಷಗಳ ಶಿಕ್ಷೆ ವಿಧಿಸಿ ಸೆಷನ್ಸ್ ಕೋರ್ಟ್ ಆದೇಶ ನೀಡಿತ್ತು. ಅದನ್ನು ನ್ಯಾಯಮೂರ್ತಿ ಪುಷ್ಪಾ ಅವರು ಪರಿಷ್ಕರಿಸಿದ್ದರು. ಪೋಕ್ಸೊ ಅಡಿಯಲ್ಲಿ ನೀಡಿದ್ದ ಶಿಕ್ಷೆಯನ್ನು ರದ್ದುಪಡಿಸಿದ್ದರು. ಆದರೆ, ಭಾರತೀಯ ದಂಡ ಸಂಹಿತೆಯ 354ನೇ ಸೆಕ್ಷನ್ ಅಡಿ ನೀಡಿದ್ದ ಶಿಕ್ಷೆಯನ್ನು ಎತ್ತಿ ಹಿಡಿದಿದ್ದರು.

ಗ್ರಾಮಗಳ ನಿರ್ಮಾಣಕ್ಕೆ ಕಾಂಗ್ರೆಸ್ ಟೀಕೆ

'ದೇಶದ ಭದ್ರತೆ ಕಡೆಗಣನೆ'

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಭದ್ರತೆ ಮತ್ತು ಗಡಿಯನ್ನು ಕಡೆಗಣಿಸಿದ್ದಾರೆ. ಈ ವಿಚಾರದಲ್ಲಿ ಅವರು ರಾಜಿ ಆಗಿದ್ದಾರೆ' ಎಂದು ಕಾಂಗ್ರೆಸ್ ಆರೋಪಿಸಿದೆ.

2017ರಲ್ಲಿ ಭೂತಾನ್‌ನ ದೋಕಲಾ ಪ್ರದೇಶದಲ್ಲಿ ಚೀನಾ ಸೇನೆಯ ಅತಿಕ್ರಮಣವನ್ನು ಭಾರತೀಯ ಸೇನೆ ತಡೆದಿತ್ತು. ಈಗ ಈ ಪ್ರದೇಶದಲ್ಲಿ ಚೀನಾ ಹಲವು ಗ್ರಾಮಗಳನ್ನು ನಿರ್ಮಿಸಿದೆ ಎಂದು ಕೆಲವು ಸುದ್ದಿಸಂಸ್ಥೆಗಳು ವರದಿ ಮಾಡಿವೆ. ಈ ವರದಿಗಳನ್ನು ಆಧರಿಸಿ ಕಾಂಗ್ರೆಸ್, ಕೇಂದ್ರ ಸರ್ಕಾರದ ಮೌನವನ್ನು ಪ್ರಶ್ನಿಸಿದೆ.

'ಭಾರತ–ಭೂತಾನ್–ಚೀನಾದ ಗಡಿಗಳು ಸಂಧಿಸುವ ದೋಕಲಾ ಪ್ರದೇಶದಲ್ಲಿ ಚೀನಾ ಹೊಸದಾಗಿ ನಾಲ್ಕು ಗ್ರಾಮಗಳನ್ನು ನಿರ್ಮಿಸಿದೆ. ದೋಕಲಾ ಪ್ರದೇಶದಲ್ಲಿ ಚೀನಾವು 100 ಚದರ ಕಿ.ಮೀ. ಜಾಗವನ್ನು ಕಬಳಿಸಿದೆ. ಆದರೆ ಪ್ರಧಾನಿ ನರೇಂದ್ರ ಮೋದಿ ಅವರು ಈ ಬಗ್ಗೆ ಮೌನವಹಿಸಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ಗೌರವ್ ವಲ್ಲಭ್ ಅವರು ಆರೋಪಿಸಿದ್ದಾರೆ.

'ಬಹಳ ಹಿಂದಿನಿಂದಲೂ ಭೂತಾನ್‌ನ ವಿದೇಶಾಂಗ ವ್ಯವಹಾರಗಳಲ್ಲಿ ಭಾರತವು ಸಲಹೆ ನೀಡುತ್ತಾ ಬಂದಿದೆ ಮತ್ತು ಭೂತಾನ್ ಸೇನೆಗೆ ಭಾರತೀಯ ಸೇನೆಯೇ ತರಬೇತಿ ನೀಡುತ್ತಿದೆ. ಪರಿಸ್ಥಿತಿ ಹೀಗಿರುವಾಗ ಭೂತಾನ್‌ನ ನೆಲವನ್ನು ಚೀನಾ ಅತಿಕ್ರಮಿಸಿಕೊಂಡಿದ್ದು, ಭಾರತದ ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ದೊಡ್ಡ ಅಪಾಯ' ಎಂದು ವಲ್ಲಭ್ ಕಳವಳ ವ್ಯಕ್ತಪಡಿಸಿದ್ದಾರೆ.

ಚೀನಾದ ಅತಿಕ್ರಮಣವನ್ನು ನಾವು ಏಕೆ ಸಹಿಸಿಕೊಳ್ಳಬೇಕು? ಪ್ರಧಾನಿ ನರೇಂದ್ರ ಮೋದಿ ಅವರು ಬೇರೆ ವಿಚಾರಗಳ ಹಿಂದೆ ಅವಿತುಕೊಳ್ಳುವುದನ್ನು ಬಿಡಬೇಕು
ಗೌರವ್ ವಲ್ಲಭ್
ಕಾಂಗ್ರೆಸ್ ನಾಯಕ

ಚೀನಾ ನಮ್ಮ ನೆಲವನ್ನು ಅತಿಕ್ರಮಿಸುತ್ತಲೇ ಇದೆ. ಚೀನಾದ ಈ ಭೌಗೋಳಿಕ, ಸೇನಾ ಅತಿಕ್ರಮಣವನ್ನು ಪ್ರಧಾನಿ ಮೋದಿ ಎದುರಿಸುವುದು ಯಾವಾಗ?
ರಣದೀಪ್ ಸಿಂಗ್ ಸುರ್ಜೇವಾಲಾ
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

'ಭಾರತದ ನೆಲದಲ್ಲಿ ಚೀನಾ ವಸತಿ ಪ್ರದೇಶ'

ಒಂದನೇ ಪುಟದಿಂದ

'ಮ್ಯಾಕ್ಸರ್, ಪ್ಲಾನೆಟ್ ಲ್ಯಾಬ್ಸ್ ತೆಗೆದಿರುವ ಚಿತ್ರಗಳಲ್ಲಿ ಪ್ರದೇಶದ ಅಕ್ಷಾಂಶ ಮತ್ತು ರೇಖಾಂಶವನ್ನು ನಮೂದಿಸಲಾಗಿದೆ. ಅದನ್ನು ಭಾರತ ಸರ್ಕಾರದ ಉಪಗ್ರಹ ನಕ್ಷೆ ಪೋರ್ಟಲ್ 'ಭಾರತ್ ಮ್ಯಾಪ್ಸ್'ನಲ್ಲಿ ಹಾಕಿದರೆ, ಆ ಸ್ಥಳವು ಭಾರತದ ಗಡಿಯೊಳಗೆ ಇದೆ ಎಂದು ತೋರಿಸುತ್ತದೆ. 'ಭಾರತ್ ಮ್ಯಾಪ್ಸ್' ಅನ್ನು ಭಾರತೀಯ ಸರ್ವೇಯರ್ ಜನರಲ್ ಮೂಲಕ ಧೃಡಪಡಿಸಲಾಗಿದೆ. ಈ ಪ್ರಕಾರ ಕಟ್ಟಡಗಳನ್ನು ನಿರ್ಮಿಸಿರುವ ಪ್ರದೇಶವು ಭಾರತದ ಗಡಿಯೊಳಗೇ ಇದೆ' ಎಂದು ವರದಿ ಹೇಳಿದೆ.

ವಸತಿ ಪ್ರದೇಶಗಳ ಇರುವಿಕೆ, ಆ ಪ್ರದೇಶದ ಮೇಲೆ ದೇಶವೊಂದರ ನಿಯಂತ್ರಣವಿರುವುದರ ಪ್ರತೀಕ ಎಂದು ಅಂತರರಾಷ್ಟ್ರೀಯ ಕಾನೂನುಗಳು ಹೇಳುತ್ತವೆ. ಈ ಕಾನೂನನ್ನು ಬಳಸಿಕೊಂಡು, ಈ ಪ್ರದೇಶವು ತನ್ನದೆಂದು ಹೇಳುವ ಉದ್ದೇಶದಿಂದಲೇ ಭಾರತದ ನೆಲದಲ್ಲಿ ಚೀನಾ ವಸತಿ ಪ್ರದೇಶವನ್ನು ನಿರ್ಮಿಸಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ ಎಂದು ವರದಿ ವಿವರಿಸಿದೆ.

ಈ ವಸತಿ ಪ್ರದೇಶದಿಂದ 93 ಕಿ.ಮೀ. ದೂರದಲ್ಲಿ, ಭಾರತದ ನೆಲದಲ್ಲಿ ಮತ್ತೊಂದು ದೊಡ್ಡ ಗ್ರಾಮವನ್ನು ಚೀನಾ ನಿರ್ಮಿಸಿದೆ ಎಂದು ಜನವರಿಯಲ್ಲಿ ಎನ್‌ಡಿ ಟಿ.ವಿ ವರದಿ ಮಾಡಿತ್ತು. ಆ ವರದಿಯಲ್ಲಿರುವ ಅಂಶಗಳನ್ನು, ಅಮೆರಿಕದ ರಕ್ಷಣಾ ಸಚಿವಾಲಯವೂ ದೃಢೀಕರಿಸಿತ್ತು. ಆದರೆ ಅಮೆರಿಕದ ವರದಿಯನ್ನು ಭಾರತದ ರಕ್ಷಣಾ ಸಚಿವಾಲಯವು ತಿರಸ್ಕರಿಸಿತ್ತು.

'ಎಲ್‌ಎಸಿಯಿಂದ ಉತ್ತರಕ್ಕಿದೆ'

'ಈ ವಸತಿ ಪ್ರದೇಶವು ಎಲ್‌ಎಸಿಯಿಂದ ಉತ್ತರಕ್ಕೆ ಇದೆ' ಎಂದು ಭಾರತೀಯ ಸೇನೆ ಸಮಜಾಯಿಷಿ ನೀಡಿದೆ ಎಂದು ಎನ್‌ಡಿ ಟಿ.ವಿ ಹೇಳಿದೆ.

ಉಪಗ್ರಹ ಚಿತ್ರಗಳನ್ನು ತೋರಿಸಿ, ಭಾರತೀಯ ಸೇನೆಯ ಅಧಿಕಾರಿಗಳನ್ನು ಪ್ರಶ್ನಿಸಲಾಯಿತು. ಅದಕ್ಕೆ ಅವರು, 'ನೀವು ಕೊಟ್ಟಿರುವ ಅಕ್ಷಾಂಶ ಮತ್ತು ರೇಖಾಂಶವನ್ನು ಪರಿಶೀಲಿಸಲಾಗಿದೆ. ಅದು ಎಲ್‌ಎಸಿಯಿಂದ ಉತ್ತರಕ್ಕೆ ಇದೆ' ಎಂದಷ್ಟೇ ಹೇಳಿದ್ದಾರೆ. ಎಲ್‌ಎಸಿಯಿಂದ ಉತ್ತರಕ್ಕೆ ಅಂತರರಾಷ್ಟ್ರೀಯ ಗಡಿ ಇದೆ. ಆ ಭಾಗದಲ್ಲಿ ಈ ಪ್ರದೇಶವಿದೆ ಎಂಬುದನ್ನು ಭಾರತೀಯ ಸೇನೆ ನಿರಾಕರಿಸುತ್ತಿಲ್ಲ ಎಂದು ಎನ್‌ಡಿ ಟಿ.ವಿ ವರದಿ ಮಾಡಿದೆ.

ಡಿ.9ರಿಂದ ಪಿಯು ಮಧ್ಯವಾರ್ಷಿಕ ಪರೀಕ್ಷೆ

ಒಂದನೇ ಪುಟದಿಂದ

ದ್ವಿತೀಯ ಪಿಯುಸಿ ತರಗತಿಯ ವಿದ್ಯಾರ್ಥಿಗಳಿಗೆ ಇದೇ 29ರಿಂದ ನಡೆಸಲು ಉದ್ದೇಶಿಸಲಾಗಿದ್ದ ಮಧ್ಯವಾರ್ಷಿಕ ಪರೀಕ್ಷೆಗಳಿಗೆ ವಿರೋಧ ವ್ಯಕ್ತವಾಗಿತ್ತು. ಹೀಗಾಗಿ, ಇಲಾಖೆ ವೇಳಾಪಟ್ಟಿಯನ್ನು ಬದಲಾಯಿಸಿದೆ.

ದ್ವಿತೀಯ ಪಿಯುಸಿ ಮಧ್ಯ ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಎಲ್ಲ ಜಿಲ್ಲಾ ಉಪನಿರ್ದೇಶಕರಿಗೆ ಒದಗಿಸಲಾಗುವುದು. ಪ್ರಶ್ನೆ ಪತ್ರಿಕೆಗಳನ್ನು ಅಗತ್ಯಕ್ಕೆ ಅನುಸಾರವಾಗಿ ಮುದ್ರಿಸಿ ನೋಡಲ್ ಕೇಂದ್ರಗಳ ಮೂಲಕ ಆಯಾ ವಿಷಯದ ಪರೀಕ್ಷಾ ದಿನದಂದು ಕಾಲೇಜುಗಳಿಗೆ ವಿತರಿಸುವ ಸಂಪೂರ್ಣ ಜವಾಬ್ದಾರಿ ಆಯಾ ಜಿಲ್ಲಾ ಉಪನಿರ್ದೇಶಕರದ್ದು ಎಂದು ಸುತ್ತೋಲೆಯಲ್ಲಿ ಉಲ್ಲೇಖಿಸಲಾಗಿದೆ.

'ಮೌಲ್ಯಮಾಪನ ಕಾರ್ಯವನ್ನು ಆಯಾ ಕಾಲೇಜಿನ ಉಪನ್ಯಾಸಕರಿಂದ ಕಾಲೇಜು ಹಂತದಲ್ಲೇ ಪ್ರಾಂಶುಪಾಲರ ನೇತೃತ್ವದಲ್ಲಿ ಕೈಗೊಳ್ಳಬೇಕು. ವಿದ್ಯಾರ್ಥಿಗಳಿಗೆ ವಿಷಯವಾರು ಅಂಕಗಳನ್ನು ತಿಳಿಸಿ, ಪರೀಕ್ಷೆ ಮುಗಿದ 15 ದಿನಗಳ ಒಳಗೆ 'ಎಸ್‌ಎಟಿಎಸ್' ಪೋರ್ಟಲ್‌ನಲ್ಲಿ ಸೇರಿಸಬೇಕು. ಪರೀಕ್ಷೆಯನ್ನು ಕಟ್ಟುನಿಟ್ಟಾಗಿ ನಡೆಸುವುದು ಮತ್ತು ಯಾವುದೇ ಲೋಪಗಳಿಲ್ಲದೆಯೇ ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸುವ ಸಂಪೂರ್ಣ ಜವಾಬ್ದಾರಿ ಆಯಾ ಕಾಲೇಜುಗಳ ಪ್ರಾಂಶುಪಾಲರದ್ದಾಗಿರುತ್ತದೆ' ಎಂದು ಆರ್. ಸ್ನೇಹಲ್ ಸೂಚಿಸಿದ್ದಾರೆ.

'ಪ್ರಥಮ ಪಿಯುಸಿ ಮಧ್ಯವಾರ್ಷಿಕ ಪರೀಕ್ಷೆಯನ್ನು ಕಾಲೇಜು ಹಂತದಲ್ಲೇ ನಡೆಸಬೇಕು. ಪ್ರಾಂಶುಪಾಲರು ತಮ್ಮ ಉಸ್ತುವಾರಿಯಲ್ಲಿ ಸಂಬಂಧಪಟ್ಟ ವಿಷಯಗಳ ಉಪನ್ಯಾಸಕರಿಂದ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಿ, ಪರೀಕ್ಷೆ ನಡೆಸಿ ಮೌಲ್ಯಮಾಪನ ಮಾಡಿಸುವುದು ಹಾಗೂ ವಿದ್ಯಾರ್ಥಿಗಳಿಗೆ ವಿಷಯವಾರು ಅಂಕಗಳನ್ನು ತಿಳಿಸಿ ಪರೀಕ್ಷೆ ಮುಗಿದ 15 ದಿನಗಳ ಒಳಗೆ 'ಎಸ್‌ಎಟಿಎಸ್' ಪೋರ್ಟಲ್‌ನಲ್ಲಿ ಸೇರಿಸಬೇಕು' ಎಂದು ತಿಳಿಸಿದ್ದಾರೆ.

ಫೋನ್‌ಪೆ: 200 ಕೋಟಿ ದಾಟಿದ ತಿಂಗಳ ವಹಿವಾಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಜಿಟಲ್ ಪಾವತಿ ಸೇವೆಗಳನ್ನು ನೀಡುವ ಫೋನ್‌ಪೆ ಕಂಪನಿಯ ತನ್ನ ವೇದಿಕೆಯ ಮೂಲಕ ಅಕ್ಟೋಬರ್‌ನಲ್ಲಿ 200 ಕೋಟಿಗೂ ಅಧಿಕ ಸಂಖ್ಯೆಯ ವಹಿವಾಟು ನಡೆದಿದೆ ಎಂದು ಹೇಳಿಕೊಂಡಿದೆ.

ಇದೇ ವರ್ಷದ ಫೆಬ್ರುವರಿಯಲ್ಲಿ ತಿಂಗಳ ವಹಿವಾಟಿನ ಸಂಖ್ಯೆಯು 100 ಕೋಟಿಯನ್ನು ತಲುಪಿತ್ತು.

ತಿಂಗಳಿನಲ್ಲಿ ನಡೆದಿರುವ ಒಟ್ಟಾರೆ ವಹಿವಾಟಿನಲ್ಲಿ ಶೇಕಡ 80ರಷ್ಟು ಎರಡು, ಮೂರನೇ ದರ್ಜೆಯ ಮತ್ತು ಇತರೆ ನಗರಗಳಿಂದ ಬಂದಿದೆ. ಈ ಮೂಲಕ ಡಿಜಿಟಲ್ ಪಾವತಿಯು ದೇಶದಾದ್ಯಂತ ವ್ಯಾಪಿಸುತ್ತಿದೆ ಎನ್ನುವುದು ತೋರಿಸುತ್ತಿದೆ ಎಂದು ಫೋನ್‌ಪೆ ಕಂಪನಿಯ ಸ್ಥಾಪಕ ಸಮೀರ್ ನಿಗಮ್ ಹೇಳಿದ್ದಾರೆ.

ರಿಟೇಲ್ ವಹಿವಾಟಿಗೆ ನೀತಿ: ಸಚಿವ

ನವದೆಹಲಿ (ಪಿಟಿಐ): ರಿಟೇಲ್ ವಹಿವಾಟಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ನೀತಿ ರೂಪಿಸಲು ಕೇಂದ್ರ ವಾಣಿಜ್ಯ ಸಚಿವಾಲಯವು ಸಮಾಲೋಚನೆ ಆರಂಭಿಸಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ರಾಜ್ಯ ಸಚಿವ ಸೋಮ್ ಪ್ರಕಾಶ್ ತಿಳಿಸಿದ್ದಾರೆ.

ಈ ವಲಯದಲ್ಲಿ ಸಮತೋಲನದ ಬೆಳವಣಿಗೆ ಸಾಧ್ಯವಾಗಬೇಕು ಎಂದಾದರೆ ದೇಶದ ಎಲ್ಲ ಕಡೆಗೂ ಅನ್ವಯವಾಗುವ ನೀತಿಯೊಂದರ ಅಗತ್ಯ ಇದೆ ಎಂದು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

18-11-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	10050-10100
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9350-9450

ಶೇಂಗಾ ಎಣ್ಣೆ (10 ಕೆಜಿಗೆ)


ಕಚ್ಚಾ (ತೆರಿಗೆ ಬಿಟ್ಟು)	1370 (1370)
ಒಂದು ವಾರದ ಡೆಲಿವರಿ	1365 (1365)
ಸೋಯಾ ಕಚ್ಚಾ	1195 (1190)
ಪಾಮ್ ವಾರದ ಡೆಲಿವರಿ	1200 (1192)
ಸೂರ್ಯಕಾಂತಿ ಎಣ್ಣೆ ಕಚ್ಚಾ	1215 (1205)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
48,900 (48,975)
ಬೆಳ್ಳಿ ಕೆ.ಜಿ 66,300 (66,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,898
ಇಂದಿನ ಅಂತ್ಯ	17,764
▼	134
ದಿನದ ಕನಿಷ್ಠ	17,688

ವಿನಿಮಯ ದರ

$ ಡಾಲರ್	74.24
£ ಪೌಂಡ್	100.15
€ ಯುರೊ	84.10
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹470
12 ಮೊಟ್ಟೆಗೆ ₹63
ಮೈಸೂರು
100 ಮೊಟ್ಟೆಗೆ ₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1360 (1360)
ಸೋಯಾ (ರಿಫೈನ್ಡ್)	₹1248(1245)
ಸೂರ್ಯಕಾಂತಿ (ರಿಫೈನ್ಡ್)	₹1305 (1290)
ಪಾಮೋಲಿನ್	₹1202 (1194)

‘ಸಿಡ್ನಿ ಡಯಲಾಗ್’ ವೇದಿಕೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಷಣ

ಕ್ರಿಪ್ಟೊ ಕರೆನ್ಸಿ ಸುರಕ್ಷತೆ: ಸಹಕಾರಕ್ಕೆ ಆಗ್ರಹ

ಮುಂಬೈ (ರಾಯಿಟರ್ಸ್/ಪಿಟಿಐ): ಬಿಟ್‌ಕಾಯಿನ್ ಹಾಗೂ ಅದರಂತಹ ಇತರ ಕ್ರಿಪ್ಟೊ ಕರೆನ್ಸಿಗಳು ಅಪಾತ್ರರ ಕೈಗೆ ಸಿಗದಂತೆ ನೋಡಿಕೊಳ್ಳಲು ಜಗತ್ತಿನ ಪ್ರಜಾತಂತ್ರ ದೇಶಗಳು ಪರಸ್ಪರ ಸಹಕಾರ ನೀಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಒತ್ತಾಯಿಸಿದರು.

ಸೈಬರ್ ತಂತ್ರಜ್ಞಾನ ಕುರಿತ ‘ಸಿಡ್ನಿ ಡಯಲಾಗ್’ ವೇದಿಕೆಯಲ್ಲಿ ವರ್ಚುವಲ್ ಆಗಿ ಭಾಷಣ ಮಾಡಿದ ಮೋದಿ ಅವರು ಈ ಮಾತು ಹೇಳಿದರು. ಕ್ರಿಪ್ಟೊ ಕರೆನ್ಸಿಗಳನ್ನು ಭಯೋತ್ಪಾದಕ ಸಂಘಟನೆಗಳು ಹಾಗೂ ಸಂಘಟಿತ ಅಪರಾಧ ಎಸಗುವ ಗುಂಪುಗಳು ಬಳಕೆ ಮಾಡಿಕೊಳ್ಳುವ ಸಾಧ್ಯತೆಗಳ ಬಗ್ಗೆ ಭಾರತ ಮತ್ತು ಇತರ ಹಲವು ದೇಶಗಳಲ್ಲಿ ಆತಂಕ ವ್ಯಕ್ತವಾಗಿದೆ. ಇಂತಹ ಕ್ರಿಪ್ಟೊ ಕರೆನ್ಸಿಗಳು ಅರ್ಥ ವ್ಯವಸ್ಥೆಗಳನ್ನು ಅಸ್ಥಿರಗೊಳಿಸುವ ಅಪಾಯವನ್ನೂ ತಂದೊಡ್ಡಿವೆ ಎಂಬ ಕಳವಳ ಕೂಡ ವ್ಯಕ್ತವಾಗಿದೆ.

‘ಕ್ರಿಪ್ಟೊ ಕರೆನ್ಸಿಗಳು ನಮ್ಮ ಯುವಕರನ್ನು ಹಾಳು ಮಾಡಬಲ್ಲವು. ಇವು ಅಪಾತ್ರರ ಕೈಗೆ ಸಿಗದಂತೆ ನೋಡಿಕೊಳ್ಳುವುದು ಮುಖ್ಯ’ ಎಂದು ಮೋದಿ ಅವರು ಹೇಳಿದರು. ಕ್ರಿಪ್ಟೊ ಕರೆನ್ಸಿಗಳನ್ನು ಯಾವುದೇ ಪಾವತಿಗಳಿಗೆ ಬಳಸುವಂತೆ ಇಲ್ಲ, ಅವುಗಳಲ್ಲಿ ಹಣ ಹೂಡಿಕೆ ಮಾತ್ರ ಮಾಡಬಹುದು ಎಂದು ಹೇಳಬಹುದಾದ ನಿಯಮಗಳನ್ನು ಕೇಂದ್ರದ ಅಧಿಕಾರಿಗಳು ರೂಪಿಸುತ್ತಿದ್ದಾರೆ ಎಂದು ಎಕನಾಮಿಕ್ ಟೈಮ್ಸ್ ಪತ್ರಿಕೆ ವರದಿ ಮಾಡಿದೆ.

‘ಭಾರತದಲ್ಲಿ ತಂತ್ರಜ್ಞಾನದ ಅತಿದೊಡ್ಡ ಉತ್ಪನ್ನ ದತ್ತಾಂಶ. ನಾವು ದತ್ತಾಂಶ ಸುರಕ್ಷತೆಗೆ, ಖಾಸಗಿತನದ ರಕ್ಷಣೆಗೆ ಶಕ್ತ ವ್ಯವಸ್ಥೆಯೊಂದನ್ನು ಕಟ್ಟಿಕೊಂಡಿದ್ದೇವೆ. ದತ್ತಾಂಶವನ್ನು ನಾವು ಜನರನ್ನು ಸಶಕ್ತಗೊಳಿಸಲು ಬಳಸುತ್ತಿದ್ದೇವೆ’ ಎಂದು ಪ್ರಧಾನಿ ಹೇಳಿದರು.



ಸಾಲ ನೀಡಿಕೆ ಮತ್ತು ಆರ್ಥಿಕ ಬೆಳವಣಿಗೆ ಕುರಿತ ವಿಚಾರ ಸಂಕಿರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಮಾತನಾಡಿದರು–ಪಿಟಿಐ ಚಿತ್ರ

‘ಹಿಂದಕ್ಕೆ ಕರೆಸಲು ಯತ್ನ’: ಆರ್ಥಿಕ ಅಪರಾಧಗಳನ್ನು ಎಸಗಿ, ವಿದೇಶಕ್ಕೆ ಪರಾರಿಯಾಗಿರುವವರನ್ನು ದೇಶಕ್ಕೆ ವಾಪಸ್ ಕರೆತರಲು ಎಲ್ಲ ಬಗೆಯ ಪ್ರಯತ್ನಗಳನ್ನು ನಡೆಸಲಾಗಿದೆ ಎಂದು ಪ್ರಧಾನಿಯವರು ಸಾಲ ನೀಡಿಕೆ ಮತ್ತು ಆರ್ಥಿಕ ಬೆಳವಣಿಗೆ ಕುರಿತ ವಿಚಾರ ಸಂಕಿರಣವೊಂದರಲ್ಲಿ ಹೇಳಿದರು.

‘ಬ್ಯಾಂಕ್‌ಗಳು ಸಂಪತ್ತು ಸೃಷ್ಟಿಸುವವರಿಗೆ ಮತ್ತು ಉದ್ಯೋಗ ಸೃಷ್ಟಿಸುವವರಿಗೆ ಬೆಂಬಲ ನೀಡಬೇಕು’ ಎಂದರು. ಆರು–ಏಳು ವರ್ಷಗಳಿಂದ ಬ್ಯಾಂಕಿಂಗ್ ವಲಯದಲ್ಲಿ ತಂದಿರುವ ಸುಧಾರಣೆಗಳ ಫಲವಾಗಿ ದೇಶದ ಬ್ಯಾಂಕ್‌ಗಳು ಇಂದು ಹೆಚ್ಚು ಶಕ್ತಿಯುತವಾಗಿದೆ ಎಂದು ತಿಳಿಸಿದರು.

2022ರ ಆಗಸ್ಟ್ 15ರ ವೇಳೆಗೆ ಬ್ಯಾಂಕ್‌ಗಳ ಪ್ರತಿ ಶಾಖೆಯೂ ಡಿಜಿಟಲ್ ಆಗಿ ವಹಿವಾಟು ನಡೆಸುವ ಕನಿಷ್ಠ 100 ಗ್ರಾಹಕರನ್ನು ಹೊಂದಿರಬೇಕು ಎಂದು ತಾಕೀತು ಮಾಡಿದರು.

‘6.5 ಕೋಟಿ ಡೋಸ್ ಲಸಿಕೆ ರಫ್ತು’

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷ ಭಾರತ ಸುಮಾರು 100 ದೇಶಗಳಿಗೆ 6.5 ಕೋಟಿಯಷ್ಟು ಕೋವಿಡ್ ಲಸಿಕೆಯನ್ನು ರಫ್ತು ಮಾಡಿದೆ ಎಂದು ಪ್ರಧಾನಿ ಮೋದಿ ಗುರುವಾರ ಹೇಳಿದ್ದಾರೆ.

ಜಾಗತಿಕ ನಾವೀನ್ಯತೆ ಶೃಂಗಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತೀಯ ಆರೋಗ್ಯ ವಲಯವು ಗಳಿಸಿರುವ ಜಾಗತಿಕ ನಂಬಿಕೆಯಿಂದ ದೇಶವನ್ನು ಈಗ ‘ಜಗತ್ತಿನ ಔಷಧಾಲಯ’ ಎಂದು ಕರೆಯಲು ಸಾಧ್ಯವಾಗಿದೆ ಎಂದು ಹೇಳಿದ್ದಾರೆ.

ಹಬ್ಬದ ಋತು: ವಾಹನಗಳ ರಿಟೇಲ್ ಮಾರಾಟ ಇಳಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಹಬ್ಬದ ಋತುವಿನಲ್ಲಿ ವಾಹನಗಳ ರಿಟೇಲ್ ಮಾರಾಟವು ಶೇಕಡ 18ರಷ್ಟು ಇಳಿಕೆ ಕಂಡಿದೆ ಭಾರತೀಯ ವಾಹನ ವಿತರಕರ ಸಂಘಟನೆಗಳ ಒಕ್ಕೂಟವು (ಎಫ್‌ಎಡಿಎ) ಗುರುವಾರ ಹೇಳಿದೆ.

ಸೆಮಿಕಂಡಕ್ಟರ್ ಕೊರತೆಯು ವಾಹನ ತಯಾರಿಕೆಯ ಮೇಲೆ ಪರಿಣಾಮ ಉಂಟುಮಾಡಿದೆ. ಇದರಿಂದಾಗಿ ಬೇಡಿಕೆಗೆ ತಕ್ಕಂತೆ ವಾಹನಗಳನ್ನು ವಿತರಕರಿಗೆ ಪೂರೈಸಲು ಕಂಪನಿಗಳಿಗೆ ಸಾಧ್ಯವಾಗದ ಕಾರಣ ಮಾರಾಟ ಇಳಿಕೆಯಾಗಿದೆ ಎಂದು ತಿಳಿಸಿದೆ.

ತ್ರಿಚಕ್ರ ಮತ್ತು ವಾಣಿಜ್ಯ ವಾಹನಗಳನ್ನು ಹೊರತುಪಡಿಸಿ ಉಳಿದೆಲ್ಲಾ ವಾಹನಗಳ ಮಾರಾಟವು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಇಳಿಕೆ ಕಂಡಿವೆ. ಪ್ರಯಾಣಿಕ ವಾಹನಗಳ ಮಾರಾಟವು ಶೇ 26ರಷ್ಟು ಇಳಿಕೆ ಆಗಿದೆ. ದ್ವಿಚಕ್ರ ವಾಹನ ಮಾರಾಟ ಶೇ 18ರಷ್ಟು ಇಳಿಕೆ ಆಗಿದೆ.



ಟ್ರ್ಯಾಕ್ಟರ್ ಮಾರಾಟವು ಶೇ 23ರಷ್ಟು ಇಳಿಕೆ ಆಗಿದ್ದು, 56,841ಕ್ಕೆ ತಲುಪಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ 73,925 ಟ್ರ್ಯಾಕ್ಟರ್‌ಗಳು ಮಾರಾಟ ಆಗಿದ್ದವು.

ತ್ರಿಚಕ್ರ ವಾಹನಗಳ ಮಾರಾಟವು ಶೇ 53ರಷ್ಟು ಹೆಚ್ಚಾಗಿದ್ದು, 52,802ಕ್ಕೆ ತಲುಪಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 34,419 ವಾಹನಗಳು ಮಾರಾಟ ಆಗಿದ್ದವು. ಅದೇ ರೀತಿ ವಾಣಿಜ್ಯ ವಾಹನಗಳ ಮಾರಾಟವು ಶೇ 10ರಷ್ಟು ಹೆಚ್ಚಾಗಿದೆ.

10 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಹಬ್ಬದ ಋತುವಿನ ಮಾರಾಟವು ಹೆಚ್ಚಿನ ಕುಸಿತ ಕಂಡಿದೆ. ಬೇಡಿಕೆ ಸುಧಾರಿಸಿದ್ದರೂ ಸೆಮಿಕಂಡಕ್ಟರ್ ಕೊರತೆಯು ಮಾರಾಟದ ಮೇಲೆ ತೀವ್ರ ಪರಿಣಾಮ ಉಂಟುಮಾಡಿದೆ. ಎಸ್‌ಯುವಿ, ಕಾಂಪ್ಯಾಕ್ಟ್ ಎಸ್‌ಯುವಿ ಮತ್ತು ಐಷಾರಾಮಿ ವಿಭಾಗದ ವಾಹನಗಳನ್ನು ಗ್ರಾಹಕರಿಗೆ ನೀಡಲು ಆಗುತ್ತಿಲ್ಲ ಎಂದು ಒಕ್ಕೂಟದ ಅಧ್ಯಕ್ಷ ವಿಂಕೇಶ್ ಗುಲಾಟಿ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	540
ಅಡಿಕೆ	
ಬೆಳ್ತಂಗಡಿ	
ಕೋಕ	26000-26000
ಹೊಸತು	29000-42000
ಹಳತು	47500-50500
ಕಾರ್ಕಳ	
ಹೊಸತು	35000-42500
ಹಳತು	46000-50000
ಕುಮಟ	
ಚಿಪ್ಪು	24099-41924
ಕೋಕ	21399-26205
ಹಳೆಚಾಲಿ	46449-48069
ಹೊಸಚಾಲಿ	38170-40624
ಪುತ್ತೂರು	
ಕೋಕ	10500-26000
ಹೊಸತು	27500-42500
ಸಿದ್ದಾಪುರ	
ಬಿಳಿಗೋಟು	34660-40599
ಚಾಲಿ	47380-48009
ಕೋಕ	27799-38699
ಹೊಸಚಾಲಿ	32612-34611
ಕೆಂಪುಗೋಟು	24899-31089
ರಾಶಿ	44389-47499
ತಟ್ಟಿಬೆಟ್ಟೆ	35889-42799
ಶಿರಸಿ	
ಬೆಟ್ಟೆ	34123-44299
ಬಿಳಿಗೋಟು	30009-42799
ಚಾಲಿ	46099-48299
ರಾಶಿ	45599-48509
ಯಲ್ಲಾಪುರ	
ಬಿಳಿಗೋಟು	32899-40561
ಚಾಲಿ	43299-48199
ಕೋಕ	23231-30569
ಕೆಂಪುಗೋಟು	28899-33816
ರಾಶಿ	45199-52600
ತಟ್ಟಿಬೆಟ್ಟೆ	37850-44269
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	47599-53889
ಗೊರಬಲು	15069-39150
ರಾಶಿ	41969-46899
ಸರಕು	50009-72896
ಸಾಗರ	
ಬಿಳಿಗೋಟು	23699-37161
ಚಾಲಿ	35889-45700
ಕೋಕ	22099-36854
ಕೆಂಪುಗೋಟು	23899-36899
ರಾಶಿ	39199-46599
ತಟ್ಟಿಬೆಟ್ಟೆ	7100-25800
ರಾಮನಗರ ರೇಷ್ಮೆ	
ಮಿಶ್ರತಳಿ	275-515
ದ್ವಿತಳಿ	244-732

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14550	14000	---	232.60 ಸೆಂಟ್ಸ್
ಎಸಿ	6125	6000	---	
ಆರ್‌ಪಿ	6200	6100	6325	ಲಂಡನ್
ಆರ್‌ಸಿ	3640	3250	3700	2256ಡಾಲರ್ಸ್

ಸುದ್ದಿ 2 ನಿಮಿಷ

ಶೇ 27ರಷ್ಟು ಕುಸಿದ ಪೇಟಿಎಂ ಕಂಪನಿಯ ಷೇರು ಮೌಲ್ಯ

ನವದೆಹಲಿ (ಪಿಟಿಐ): ಪಾವತಿ ಸೇವೆಗಳನ್ನು ಒದಗಿಸುವ ‘ಪೇಟಿಎಂ’ನ ಮಾತೃಸಂಸ್ಥೆ ಒನ್97 ಕಮ್ಯುನಿಕೇಷನ್ಸ್‌ನ ಷೇರುಗಳ ಮೌಲ್ಯವು, ಷೇರು ಮಾರುಕಟ್ಟೆ ಪ್ರವೇಶಿಸಿದ ದಿನವೇ ಶೇಕಡ 27ರಷ್ಟು ಇಳಿಕೆ ಕಂಡಿದೆ. ಕಂಪನಿಯು ಐಪಿಒ ಸಂದರ್ಭದಲ್ಲಿ ಪ್ರತಿ ಷೇರಿಗೆ ₹ 2,150 ಬೆಲೆ ನಿಗದಿ ಮಾಡಿತ್ತು.

ಮುಂಬೈ ಷೇರುಪೇಟೆಯಲ್ಲಿ ಈ ಷೇರು ವಹಿವಾಟು ಆರಂಭಿಸುವಾಗಲೇ ಶೇ 9ರಷ್ಟು ಕುಸಿತ ಕಂಡಿತು. ದಿನದ ಅಂತ್ಯಕ್ಕೆ ಶೇ 27.24ರಷ್ಟು ಕುಸಿಯಿತು. ವಹಿವಾಟಿನ ಅಂತ್ಯದ ವೇಳೆಗೆ ಷೇರಿನ ಬೆಲೆ ₹ 1,564 ಆಗಿತ್ತು.

ಷೇರುಗಳು ಷೇರುಪೇಟೆಯಲ್ಲಿ ನೋಂದಾಯಿತ ಆಗುವ ಸಂದರ್ಭದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಕಂಪನಿಯ ಸಂಸ್ಥಾಪಕ ವಿಜಯ್ ಶೇಖರ್ ಶರ್ಮ, ‘ಪೇಟಿಎಂನ ಕಥನವು ಸಹಸ್ರಾರು ಉದ್ಯಮಿಗಳಿಗೆ ಪ್ರೇರಣೆ ಆಗುತ್ತದೆ ಎಂದು ಭಾವಿಸಿದ್ದೇನೆ’ ಎಂದರು.

ದಿನದ ಅಂತ್ಯಕ್ಕೆ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 37 ಸಾವಿರ ಕೋಟಿಯಷ್ಟು ಕಡಿಮೆ ಆಗಿದೆ. ‘ಭಾರತದ ಅತಿದೊಡ್ಡ ಐಪಿಒ ಪೇಟಿಎಂನದ್ದು. ಇದರ ಷೇರು ಮೌಲ್ಯವು ಶೇ 27ರಷ್ಟು ಇಳಿದಿದೆ. ಕಂಪನಿಯ ವಾಣಿಜ್ಯ ವಹಿವಾಟಿನ ಮಾದರಿಯನ್ನು, ಅದು ಲಾಭ ಗಳಿಸಿಲ್ಲದಿರುವುದನ್ನು ಮತ್ತು ಕಂಪನಿಯ ಮೌಲ್ಯ ನಿಗದಿ ಭಾರಿ ಪ್ರಮಾಣದಲ್ಲಿ ಇರುವುದನ್ನು ಹೂಡಿಕೆದಾರರು ಗಮನಿಸಿದ್ದಾರೆ’ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಸಂಸ್ಥೆಯ ಸಣ್ಣ ಹೂಡಿಕೆಗಳ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕಾ ಹೇಳಿದ್ದಾರೆ.

ಸ್ಕೋಡಾ ಸ್ಲಾವಿಯಾ ಅನಾವರಣ



ಸ್ಕೋಡಾ ಆಟೊ ಇಂಡಿಯಾದ ಬ್ರ್ಯಾಂಡ್ ನಿರ್ದೇಶಕ ಜಾಕ್ ಹಾಲಿಸ್ ಮತ್ತು ಸ್ಕೋಡಾ ಆಟೊ ಫೋಕ್ಸ್‌ವ್ಯಾಗನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಗುರುಪ್ರತಾಪ್ ಬೋಪರೈ ಅವರು ‘ಸ್ಲಾವಿಯಾ’ ಅನಾವರಣ ಮಾಡಿದರು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಸ್ಕೋಡಾ ಆಟೊ ಇಂಡಿಯಾ ಕಂಪನಿಯು ಹೊಸ ಸೆಡಾನ್ ‘ಸ್ಲಾವಿಯಾ’ಅನ್ನು ಗುರುವಾರ ಅನಾವರಣಗೊಳಿಸಿದೆ. ₹ 11 ಸಾವಿರ ಪಾವತಿಸಿ ಬುಕಿಂಗ್ ಮಾಡಬಹುದಾಗಿದೆ. 2022ರ ಮೊದಲಾರ್ಧದಲ್ಲಿ ವಿತರಣೆ ಆರಂಭ ಆಗಲಿದೆ ಎಂದು ಕಂಪನಿಯು ತಿಳಿಸಿದೆ.

ತನ್ನ ಜಾಗತಿಕ ಮಾರಾಟವನ್ನು ಒಂದು ವರ್ಷದಲ್ಲಿ 15 ಲಕ್ಷಕ್ಕೆ ಏರಿಸುವ ಗುರಿಯನ್ನು ತಲುಪಲು ಇದು ನೆರವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

3 ಸಿಲಿಂಡರ್ 1 ಲೀಟರ್ ಹಾಗೂ 4 ಸಿಲಿಂಡರ್ 1.5 ಲೀಟರಿನ ಎರಡು ರೀತಿಯ ಪೆಟ್ರೋಲ್ ಎಂಜಿನ್ ಆಯ್ಕೆಗಳನ್ನು ಈ ಸೆಡಾನ್ ಹೊಂದಿದೆ. 6 ಸ್ಪೀಡ್ ಮ್ಯಾನುಯಲ್ ಗಿಯರ್ ಬ್ಯಾಕ್ಸ್ ಸ್ಟ್ಯಾಂಡರ್ಡ್ ಆಯ್ಕೆ ಆಗಿರಲಿದ್ದು, 6 ಸ್ಪೀಡ್ ಆಟೊಮ್ಯಾಟಿಕ್ ಟ್ರಾನ್ಸ್‌ಮಿಷನ್ ಮತ್ತು 7 ಸ್ಪೀಡ್ ಡಿಎಸ್‌ಜಿ ಸಹ ಆಯ್ಕೆ ಮಾಡಿಕೊಳ್ಳಬಹುದಾಗಿದೆ.

ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿ: ಸೆಮಿಫೈನಲ್‌ಗೆ ಕರ್ನಾಟಕ ತಂಡ

ಮನೀಷ್ ಪಾಂಡೆ ಬಳಗಕ್ಕೆ ‘ಸೂಪರ್’ ಜಯ

ನವದೆಹಲಿ (ಪಿಟಿಐ): ಮನೀಷ್ ಪಾಂಡೆಯ ಒಂದು ನಿಖರ ಥ್ರೋ ಮತ್ತು ಒಂದು ಸಿಕ್ಸರ್‌ನಿಂದಾಗಿ ಕರ್ನಾಟಕ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿತು.

ಗುರುವಾರ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಬಂಗಾಳ ಎದುರು ಸೂಪರ್ ಓವರ್‌ನಲ್ಲಿ ಮನೀಷ್ ಪಾಂಡೆ ಬಳಗವು ಗೆದ್ದಿತು. ದೇಶಿ ಟ್ವೆಂಟಿ–20 ಕ್ರಿಕೆಟ್ ಇತಿಹಾಸದಲ್ಲಿಯೇ ಅತ್ಯಂತ ರೋಚಕ ಪಂದ್ಯಗಳಲ್ಲಿ ಒಂದಾಗಿ ದಾಖಲಾಯಿತು.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಕರ್ನಾಟಕ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 160 ರನ್ ಗಳಿಸಿತ್ತು.

ಗುರಿ ಬೆನ್ನಟ್ಟಿದ ಬಂಗಾಳ ತಂಡವೂ 19.5 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 160 ರನ್ ಗಳಿಸಿತ್ತು. ಕೊನೆಯ ಎಸೆತದಲ್ಲಿ ಇನ್ನೊಂದು ರನ್ ಗಳಿಸಿ ಜಯಿಸುವ ಒತ್ತಡದಲ್ಲಿತ್ತು. ವಿದ್ಯಾಧರ್ ಪಾಟೀಲ ಹಾಕಿದ ಎಸೆತವನ್ನು ಕವರ್ಸ್‌ನತ್ತ ಹೊಡೆದು ಒಂದು ರನ್ ಹೊಡೆಯಲು ಯತ್ನಿಸಿದ ಆಕಾಶ್ ದೀಪ್ ರನ್‌ಔಟ್ ಆಗಲು ಪಾಂಡೆಯ ನಿಖರ ಥ್ರೋ ಕಾರಣವಾಯಿತು.

ಸೂಪರ್ ಓವರ್‌ನಲ್ಲಿ ಬಂಗಾಳ ತಂಡವು ಮೊದಲು ಬ್ಯಾಟಿಂಗ್ ಮಾಡಿತು. 2 ವಿಕೆಟ್ ಕಳೆದುಕೊಂಡು 5 ರನ್ ಗಳಿಸುವಲ್ಲಿ ಮಾತ್ರ ಸಫಲವಾಯಿತು. ಸ್ಪಿನ್ನರ್ ಕೆ.ಸಿ. ಕಾರ್ಯಪ್ಪ ಹಾಕಿದ ಈ ಓವರ್‌ನ ಎರಡನೇ ಎಸೆತದಲ್ಲಿಯೇ ಕೈಫ್ ಅಹಮದ್ ವಿಕೆಟ್ ಗಳಿಸಿದರು. ಮೂರನೇ ಎಸೆತದಲ್ಲಿ ಬೌಂಡರಿ ಹೊಡೆದ ಶ್ರೀವತ್ಸ ಗೋಸ್ವಾಮಿ ನಾಲ್ಕನೇ ಓವರ್‌ನಲ್ಲಿ ರನ್‌ಔಟ್ ಆದರು. ಪ್ರವೀಣ್ ದುಬೆ ಚುರುಕಾದ ಫೀಲ್ಡಿಂಗ್‌ನಿಂದಾಗಿ ಇದು ಸಾಧ್ಯವಾಯಿತು.

ಗೆಲುವಿಗಾಗಿ ಆರು ರನ್‌ಗಳ ಗುರಿ ಬೆನ್ನಟ್ಟಿದ ಕರ್ನಾಟಕದ ನಾಯಕ ಮನೀಷ್ ಮೊದಲ ಎಸೆತದಲ್ಲಿ ಎರಡು ರನ್ ಗಳಿಸಿದರು. ಎರಡನೇ ಎಸೆತದಲ್ಲಿ ಸಿಕ್ಸರ್ ಎತ್ತಿ ಜಯದ ಮುದ್ರೆಯೊತ್ತಿದರು. ಇದರೊಂದಿಗೆ ಬಂಗಾಳದ ಅಜೇಯ ಓಟಕ್ಕೆ ತಡೆ ಬಿತ್ತು. ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಬಂಗಾಳ ಎದುರು ಅನುಭವಿಸಿದ್ದ ಸೋಲಿಗೆ ಪಾಂಡೆ ಬಳಗ ಮುಯ್ಯಿ ತೀರಿಸಿಕೊಂಡಿತು.



ಕರುಣ್ ನಾಯರ್ –ಪ್ರಜಾವಾಣಿ ಚಿತ್ರ

ಕರುಣ್ ನಾಯರ್ ಮಿಂಚು: ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡವು ಹೋರಾಟದ ಮೊತ್ತ ಗಳಿಸಲು ಕರುಣ್ ನಾಯರ್ (ಅಜೇಯ 55; 29ಎಸೆತ, 4ಬೌಂಡರಿ, 3ಸಿಕ್ಸರ್) ಮಿಂಚಿನ ಅರ್ಧಶತಕ ಕಾರಣವಾಯಿತು. ರೋಹನ್ ಕದಂ ಜೊತೆಗೆ ಇನಿಂಗ್ಸ್ ಆರಂಭಿಸಿದ ಬಿ.ಆರ್. ಶರತ್ (4 ರನ್) ಈ ಪಂದ್ಯದಲ್ಲಿಯೂ ವಿಫಲರಾದರು. ಈ ಹಂತದಲ್ಲಿ ರೋಹತ್ ಮತ್ತು ಪಾಂಡೆ ಇನಿಂಗ್ಸ್‌ಗೆ ಬಲ ತುಂಬುವ ಪ್ರಯತ್ನ ಮಾಡಿದರು. ಆದರೆ, ರನ್ ಗಳಿಕೆಯ ವೇಗ ಹೆಚ್ಚಲಿಲ್ಲ. ಒಂಬತ್ತನೇ ಓವರ್‌ನಲ್ಲಿ ರೋಹನ್ ಔಟಾದರು. ಕ್ರೀಸ್‌ಗೆ ಬಂದ ಅನುಭವಿ ಬ್ಯಾಟ್ಸ್‌ಮನ್ ಕರುಣ್ ಆಟಕ್ಕೆ ಬೌಲರ್‌ಗಳು ಸುಸ್ತಾದರು. ಅಭಿನವ್ ಮನೋಹರ್ (19; 9ಎಸೆತ, 3ಬೌಂಡರಿ, 1ಸಿಕ್ಸರ್) ಮತ್ತು ಅನಿರುದ್ಧ ಜೋಶಿ (16; 10ಎ) ಮಹತ್ವದ ಕಾಣಿಕೆ ನೀಡಿದರು.

ಬಂಗಾಳ ತಂಡಕ್ಕೆ ಆರಂಭದಲ್ಲಿಯೇ ಕರ್ನಾಟಕದ ಮಧ್ಯಮವೇಗಿ ವಿದ್ಯಾಧರ ಪಾಟೀಲ್ ಪೆಟ್ಟುಕೊಟ್ಟರು. ಅಭಿಷೇಕ್ ದಾಸ್ ಖಾತೆ ತೆರೆಯುವ ಮುನ್ನವೇ ಔಟಾದರು. ಋತಿಕ್ ಚಟರ್ಜಿ (51; 40ಎ), ಗೋಸ್ವಾಮಿ (22; 10ಎ) ತಂಡದ ಇನಿಂಗ್ಸ್‌ಗೆ ಬಲ ತುಂಬಿದರು. ಆದರೆ, ದರ್ಶನ್ ಎಂಬಿ. (26ಕ್ಕೆ3) ಮತ್ತು ಸ್ಪಿನ್ನರ್ ಜೆ. ಸುಚಿತ್ (24ಕ್ಕೆ2) ಅವರು ವಿಕೆಟ್‌ಗಳನ್ನು ಪಡೆಯುವಲ್ಲಿ ಸಫಲರಾದರು. ಆದರೆ, ಕೊನೆಯ ಹಂತದಲ್ಲಿ ಋತ್ವಿಕ್ ಚೌಧರಿ (ಔಟಾಗದೆ 36) ಅವರನ್ನು ನಿಯಂತ್ರಿಸುವಲ್ಲಿ ಹಿನ್ನಡೆ ಅನುಭವಿಸಿದರು. ಇದರಿಂದಾಗಿ ಬಂಗಾಳ ತಂಡವು ಸಮಬಲ ಸಾಧಿಸಿತು. ಪಂದ್ಯ ಟೈ ಆಯಿತು.

ಮುಖ್ಯಾಂಶಗಳು

- ಸೆಮಿಫೈನಲ್‌ನಲ್ಲಿ ವಿದರ್ಭ ಎದುರು ಆಡಲಿರುವ ಕರ್ನಾಟಕ
- ಗುಂಪು ಹಂತದಲ್ಲಿ ಬಂಗಾಳ ಎದುರು ಸೋತಿದ್ದ ಮನೀಷ್ ಬಳಗ
- ಕರುಣ್ ನಾಯರ್ ಅರ್ಧಶತಕದ ಭರಾಟೆ



ಕೆ.ಸಿ. ಕಾರ್ಯಪ್ಪ

ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಟೈ ಪಂದ್ಯಗಳು

ತಂಡ	ಎದುರಾಳಿ	ಸ್ಥಳ	ವರ್ಷ
ಗುಜರಾತ್	ಸೌರಾಷ್ಟ್ರ	ಮುಂಬೈ	2007
ಮಧ್ಯಪ್ರದೇಶ	ವಿದರ್ಭ	ಜೈಪುರ	2010
ಬರೋಡಾ	ಕರ್ನಾಟಕ	ಮುಂಬೈ	2012
ಕರ್ನಾಟಕ	ತಮಿಳುನಾಡು	ಶಿವಮೊಗ್ಗ	2013
ಪಂಜಾಬ್	ಜಮ್ಮು–ಕಾಶ್ಮೀರ	ಮೊಹಾಲಿ	2014
ದೆಹಲಿ	ಸರ್ವಿಸಸ್	ನವದೆಹಲಿ	2015
ಹರಿಯಾಣ	ಹಿಮಾಚಲಪ್ರದೇಶ	ನವದೆಹಲಿ	2018
ಪಂಜಾಬ್	ಕರ್ನಾಟಕ	ಕೋಲ್ಕತ್ತ	2018
ಗುಜರಾತ್	ರಾಜಸ್ಥಾನ	ಸೂರತ್	2019
ಛತ್ತೀಸಗಡ	ಉತ್ತರಾಖಂಡ	ವಡೋದರಾ	2021
ಹೈದರಾಬಾದ್	ಜಾರ್ಖಂಡ್	ಕೋಲ್ಕತ್ತ	2021
ಬಂಗಾಳ	ಕರ್ನಾಟಕ	ನವದೆಹಲಿ	2021

* ಟೂರ್ನಿಯ ಇತಿಹಾಸದಲ್ಲಿ 13 ಪಂದ್ಯಗಳು ಟೈ ಆಗಿವೆ
* ಕರ್ನಾಟಕ ತಂಡವು ಆಡಿದ ನಾಲ್ಕು ಪಂದ್ಯಗಳು ಟೈ ಆಗಿವೆ.

ಮಾಹಿತಿ: ಎಚ್.ಆರ್. ಗೋಪಾಲಕೃಷ್ಣ



ಮನೀಷ್ ಪಾಂಡೆ

ಸ್ಕೋರ್ ಕಾರ್ಡ್

ಕರ್ನಾಟಕ 5ಕ್ಕೆ160 (20 ಓವರ್)
ಕದಂ ಸಿ ಪ್ರಾಮಾಣಿಕ್ ಬಿ ಶಾಬಾಜ್ 30 (29ಎ, 4X3, 6X1), ಶರತ್ ಬಿ ಆಕಾಶದೀಪ್ 4(9ಎ), ಪಾಂಡೆ (29;34ಎ,4X1, 6X1), ಕರುಣ್ ಔಟಾಗದೆ 55 (29ಎ, 4X4, 6X3), ಅಭಿನವ್ ಸಿ ಅಭಿಷೇಕ್ ಬಿ ಚಟರ್ಜಿ 19 (9ಎ,4X3, 6X1), ಅನಿರುದ್ಧ ಸಿ ಚೌಧರಿ ಬಿ ಮುಖೇಶ್ 16 (10ಎ,4X2), ವೈಶಾಖ್ ಔಟಾಗದೆ 1 (1ಎ)
ಇತರೆ (ಲೆಗ್‌ಬೈ 1, ವೈಡ್ 4, ನೋಬಾಲ್ 1) 6
ವಿಕೆಟ್ ಪತನ: 1–19 (ಶರತ್; 3.5), 2–51 (ರೋಹನ್ ಕದಂ; 8.6), 3–87 (ಮನೀಷ್ ಪಾಂಡೆ; 13.4), 4–117 (ಅಭಿನವ್ ಮನೋಹರ್; 15.6), 5–148 (ಅನಿರುದ್ಧ ಜೋಶಿ; 19.2)
ಬೌಲಿಂಗ್: ಮುಖೇಶ್ ಕುಮಾರ್ 4–0–34–1, ಆಕಾಶದೀಪ್ 4–0–23–1, ಸಯಾನ್ ಘೋಷ್ 4–0–27–1, ಋತಿಕ್ ಚಟರ್ಜಿ 2–0–23–1, ಶಾಬಾಜ್ ಅಹಮದ್ 4–0–36–1, ಪ್ರದೀಪ್ತ ಪ್ರಾಮಾಣಿಕ್ 2–0–16–0.

ಬಂಗಾಳ 8ಕ್ಕೆ 160 (20 ಓವರ್)
ಗೋಸ್ವಾಮಿ ರನ್‌ಔಟ್ (ಶರತ್/ಕಾರ್ಯಪ್ಪ) 22 (10ಎ, 4X3, 6X1), ಅಭಿಷೇಕ್ ಸಿ ನಾಯರ್ ಬಿ ವಿದ್ಯಾಧರ್ 0(1ಎ), ಚಟರ್ಜಿ ಸಿ ಕದಂ ಬಿ ದರ್ಶನ್ 51 (40ಎ, 4X2, 6X3), ಸುದೀಪ್ ಸಿ ಪಾಂಡೆ ಬಿ ದರ್ಶನ್ 12 (9ಎ, 4X2), ಕೈಫ್ ಬಿ ಸುಚಿತ್ 20 (26ಎ, 4X2), ಶಾಬಾಜ್ ಸಿ ಅನಿರುದ್ಧ ಬಿ ಸುಚಿತ್ 0 (1ಎ), ರಿತ್ವಿಕ್ ಔಟಾಗದೆ 36 (18ಎ, 4X4, 6X2), ಪ್ರಾಮಾಣಿಕ್ ಸಿ ನಾಯರ್ ಬಿ ದರ್ಶನ್ 11 (12ಎ, 4X1), ಆಕಾಶದೀಪ್ ರನ್‌ಔಟ್ (ಪಾಂಡೆ) 6 (3ಎ, 4X1)
ಇತರೆ (ಲೆಗ್‌ಬೈ 1, ವೈಡ್ 1) 2
ವಿಕೆಟ್ ಪತನ: 1–20 (ಅಭಿಷೇಕ್ ದಾಸ್; 1.1), 2–29 (ಶೀವತ್ಸ;2.4), 3–51 (ಸುದೀಪ್ ಚಟರ್ಜಿ; 5.4), 4–100 (ಕೈಫ್ ಅಹಮದ್; 13.2), 5–100 (ಶಾಬಾಜ್ ಅಹಮದ್; 13.3), 6–108 (ಋತಿಕ್ ಚಟರ್ಜಿ; 14.5), 7–141 (ಪ್ರದೀಪ್ತ; 18.6), 8–160 (ಆಕಾಶದೀಪ್; 19.6).
ಬೌಲಿಂಗ್: ವಿಜಯಕುಮಾರ್ ವೈಶಾಖ್ 4–0–41–0, ವಿದ್ಯಾಧರ್ ಪಾಟೀಲ 4–0–47–1, ಕೆ.ಸಿ. ಕಾರ್ಯಪ್ಪ 4–0–21–0, ದರ್ಶನ್ ಎಂಬಿ 4–0–26–3, ಜೆ. ಸುಚಿತ್ 4–0–24–2.

ಫಲಿತಾಂಶ: ಕರ್ನಾಟಕಕ್ಕೆ ಸೂಪರ್ ಓವರ್‌ನಲ್ಲಿ ಜಯ

ಎಂಟರ ಘಟ್ಟದ ಸ್ಕೋರುಗಳು

ಅರುಣ್ ಜೇಟ್ಲಿ ಕ್ರೀಡಾಂಗಣ: ಕೇರಳ: 20 ಓವರ್‌ಗಳಲ್ಲಿ 4ಕ್ಕೆ181 (ಕುನ್ನುಮಯ್ 51, ಸಚಿನ್ ಬೇಬಿ 33, ವಿಷ್ಣು ವಿನೋದ್ ಔಟಾಗದೆ 65, ಸಂಜಯ್ ಯಾದವ್ 23ಕ್ಕೆ2) **ತಮಿಳುನಾಡು:** 19.3 ಓವರ್‌ಗಳಲ್ಲಿ 5ಕ್ಕೆ187 (ಹರಿ ನಿಶಾಂತ್ 32, ಸಾಯಿ ಸುದರ್ಶನ್ 46, ವಿಜಯಶಂಕರ್ 33, ಸಂಜಯ್ ಯಾದವ್ 32, ಉನ್ನಿಕೃಷ್ಣನ್ ಮನುಕೃಷ್ಣನ್ 26ಕ್ಕೆ3) **ಫಲಿತಾಂಶ:** ತಮಿಳುನಾಡಿಗೆ 5 ವಿಕೆಟ್‌ಗಳ ಜಯ.
ಪಾಲಂ ಎ ಕ್ರೀಡಾಂಗಣ: ರಾಜಸ್ಥಾನ: 20 ಓವರ್‌ಗಳಲ್ಲಿ 8ಕ್ಕೆ84 (ಕಮಲೇಶ್ ನಾಗರಕೋಟಿ 39, ಸೂರಜ್ ಅನುಜ್ 12, ಯಶ್ ಠಾಕೂರ್ 24ಕ್ಕೆ2) **ವಿದರ್ಭ:** 14.5 ಓವರ್‌ಗಳಲ್ಲಿ 1 ವಿಕೆಟ್‌ಗೆ 87 (ಅಥರ್ವ ಟೈಡೆ ಔಟಾಗದೆ 40, ಗಣೇಶ್ ಸತೀಶ್ 28, ಅನಿಕೇತ್ ಚೌಧರಿ 4ಕ್ಕೆ1) **ಫಲಿತಾಂಶ:** ವಿದರ್ಭ ತಂಡಕ್ಕೆ 9 ವಿಕೆಟ್‌ಗಳ ಜಯ.
ಪಾಲಂ ಎ ಕ್ರೀಡಾಂಗಣ: ಹೈದರಾಬಾದ್: 20 ಓವರ್‌ಗಳಲ್ಲಿ 5ಕ್ಕೆ 158 (ತನ್ಮಯ್ ಅಗರವಾಲ್ 31, ತಿಲಕ್ ವರ್ಮಾ 75, ಹಿಮಾಲಯ್ ಅಗರವಾಲ್ 23, ರಾಹುಲ್ ಬುದ್ಧಿ ಔಟಾಗದೆ 25, ಚಿಂತನ್ ಗಜಾ 32ಕ್ಕೆ2, ಪಿಯೂಷ್ ಚಾವ್ಲಾ 9ಕ್ಕೆ2) **ಗುಜರಾತ್:** 20 ಓವರ್‌ಗಳಲ್ಲಿ 8ಕ್ಕೆ 128 (ಹಿತ್ ಪಟೇಲ್ 25, ಪಿಯೂಷ್ ಚಾವ್ಲಾ 25, ರಿಪಲ್ ಪಟೇಲ್ 35, ಚಾಮಾ ಮಿಲಿಂದ್ 28ಕ್ಕೆ2, ತೆಲುಕುಪಲ್ಲಿ ರವಿ ತೇಜ 27ಕ್ಕೆ3) **ಫಲಿತಾಂಶ:** ಹೈದರಾಬಾದ್ ತಂಡಕ್ಕೆ 30 ರನ್‌ಗಳಿಂದ ಜಯ.

ಸೆಮಿಫೈನಲ್
ತಮಿಳುನಾಡು–ಹೈದರಾಬಾದ್
ಆರಂಭ: ಬೆಳಿಗ್ಗೆ 8.30
ಕರ್ನಾಟಕ–ವಿದರ್ಭ
ಆರಂಭ: ಮಧ್ಯಾಹ್ನ 1.00
ಸ್ಥಳ: ಅರುಣ್ ಜೇಟ್ಲಿ ಕ್ರೀಡಾಂಗಣ, ನವದೆಹಲಿ.

ಪ್ಯಾರಾ ಬ್ಯಾಡ್ಮಿಂಟನ್: ಪ್ರಮೋದ್ ಭಗತ್‌ಗೆ ಜಯ

ಕಂಪಾಲಾ (ಪಿಟಿಐ): ವಿಶ್ವದ ಅಗ್ರ-ಶ್ರೇಯಾಂಕದ ಪ್ಯಾರಾ ಬ್ಯಾಡ್ಮಿಂಟನ್ ಆಟಗಾರ ಪ್ರಮೋದ್ ಭಗತ್ ಗುರುವಾರ ಉಗಾಂಡ ಅಂತರರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟನ್ ಟೂರ್ನಿಯ ಪಂದ್ಯದಲ್ಲಿ ಜಯಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ಪ್ರಮೋದ್ 21–13, 21–9ರಿಂದ ಐವರಿ ಕೋಸ್ಟ್ ಆಟಗಾರ ಡೀಡಾ ಜೀನ್ ಯವೆಸ್ ಯೋ ವಿರುದ್ಧ ಜಯಿಸಿದರು. ಎಸ್‌ಎಲ್3 ವಿಭಾಗದಲ್ಲಿ ಪ್ರಮೋದ್‌ಗೆ ಇದು ಎರಡನೇ ಜಯವಾಗಿದೆ.

ಮಿಶ್ರ ಡಬಲ್ಸ್ ಪಂದ್ಯದಲ್ಲಿ ಪ್ರಮೋದ್ ಮತ್ತು ಪಲಕ್ ಕೊಹ್ಲಿ 21–11, 21–12ರಿಂದ ಭಾರತದ ಶಾಂತಿಯಾ ವಿಶ್ವನಾಥನ್ ಮತ್ತು ಉಗಾಂಡದ ಬಶೀರ್ ಮುತೈಬಾ ವಿರುದ್ಧ ಜಯಿಸಿದರು.



ಪ್ರಮೋದ್ ಭಗತ್ –ಟ್ವಿಟರ್ ಚಿತ್ರ

ನೊವಿ ಕಪಾಡಿಯಾ ನಿಧನ

ನವದೆಹಲಿ (ಪಿಟಿಐ): ಭಾರತದ ಫುಟ್‌ಬಾಲ್ ಕಾಮೆಂಟೇಟರ್ ನೊವಿ ಕಪಾಡಿಯಾ (67) ಗುರುವಾರ ನಿಧನರಾದರು.

ಹೋದ ತಿಂಗಳು ಅವರು ತೀವ್ರ ಬೆನ್ನುಹುರಿ ಸಂಬಂಧಿ ಕಾಯಿಲೆಯಿಂದ ಬಳಸಿದ್ದ ಅವರು, ಆಸ್ಪತ್ರೆಗೆ ದಾಖಲಾಗಿದ್ದರು. ಜೀವರಕ್ಷಕ ಸಾಧನದ ನೆರವು ನೀಡಲಾಗಿತ್ತು. ಕಪಾಡಿಯಾ ಅವರು ದೆಹಲಿ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಾಗಿದ್ದರು. ಫುಟ್‌ಬಾಲ್ ಬಗ್ಗೆ ಆಳವಾದ ಜ್ಞಾನ ಹೊಂದಿದ್ದ ಅವರು ಒಂಬತ್ತು ಫಿಫಾ ವಿಶ್ವಕಪ್ ಟೂರ್ನಿಗಳಲ್ಲಿ ಕಾರ್ಯನಿರ್ವಹಿಸಿದ್ದರು.

‘ಪ್ರತಿಭಾ ಶೋಧಕ್ಕೆ ಬ್ಯಾಸ್ಕೆಟ್‌ಬಾಲ್ ಲೀಗ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಳಮಟ್ಟದಲ್ಲಿ ಪ್ರತಿಭೆಗಳ ಗುರುತಿಸಲು ಮತ್ತು ದೇಶದಲ್ಲಿ ಬ್ಯಾಸ್ಕೆಟ್‌ಬಾಲ್ ಕ್ರೀಡೆಯ ಅಭಿವೃದ್ಧಿಗೆ ‘ಇಂಡಿಯನ್ ಬ್ಯಾಸ್ಕೆಟ್‌ಬಾಲ್ ಲೀಗ್’ ಆರಂಭಿಸುವುದಾಗಿ ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ (ಬಿಎಫ್‌ಐ) ಅಧ್ಯಕ್ಷ ಕೆ. ಗೋವಿಂದ ರಾಜು ಹೇಳಿದರು.

ಈ ಕುರಿತು ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಲೀಗ್ ಆರಂಭಿಸುವುದು ಬಹುದಿನಗಳ ಕನಸಾಗಿತ್ತು. ಅದು ಈಗ ಈಡೇರುತ್ತಿದೆ. ಆರಂಭದಲ್ಲಿ 3X3 ಮಾದರಿಯ ಲೀಗ್ ಆರಂಭಿಸಲಾಗುವುದು. ಈ ಯೋಜನೆಯನ್ನು ಕಾರ್ಯಗತಗೊಳಿಸುವ ಹೊಣೆಯನ್ನು ಹೆಡ್ ಸ್ಟಾರ್ಟ್ ಅರೆನಾ ಇಂಡಿಯಾ (ಎಚ್‌ಎಐ) ಸಂಸ್ಥೆಗೆ ವಹಿಸಲಾಗಿದೆ’ ಎಂದರು.



ಕೆ.ಗೋವಿಂದ ರಾಜು

‘ಇದೇ 20ರಿಂದ 3X3 ಲೀಗ್ ಅನ್ನು ಪ್ರಾಯೋಗಿಕವಾಗಿ ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ಆರಂಭಿಸಲಾಗುವುದು. ಶನಿವಾರ ಫೈನಲ್ ಪಂದ್ಯಗಳು ನಡೆಯಲಿದ್ದು, ಇದೇ ವೇಳೆ ಲೀಗ್‌ಗೆ ಅಧಿಕೃತವಾಗಿ ಚಾಲನೆ ನೀಡಲಾಗುವುದು. ರಾಜ್ಯಪಾಲ ಥಾವರ್‌ಚಂದ್ ಗೆಹಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಪ್ರಾಯೋಗಿಕ ಟೂರ್ನಿಯ ಬಳಿಕ ದೇಶದ 30 ನಗರಗಳಾದ್ಯಂತ ಪಂದ್ಯಗಳನ್ನು ಆಯೋಜಿಸಲಾಗುವುದು’ ಎಂದು ವಿವರಿಸಿದರು. ಪುರುಷ ಮತ್ತು ಮಹಿಳಾ ಎರಡೂ ವಿಭಾಗಗಳಲ್ಲಿ ತಲಾ 24 ತಂಡಗಳು ಆಡಲಿವೆ.

‘2024ರ ಪ್ಯಾರಿಸ್ ಒಲಿಂಪಿಕ್ಸ್, 2027ರ ಫಿಬಾ ಬ್ಯಾಸ್ಕೆಟ್‌ಬಾಲ್ ವಿಶ್ವಕಪ್ ಮತ್ತು 2030ರ ಮಹಿಳಾ ವಿಶ್ವಕಪ್‌ಗೆ ಭಾರತ ತಂಡಗಳು ಅರ್ಹತೆ ಗಳಿಸುವಂತೆ ಸಜ್ಜುಗೊಳಿಸುವುದು ಲೀಗ್‌ನ ಪ್ರಮುಖ ಗುರಿ’ ಎಂದರು.

ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದ ಬಿಎಫ್‌ಐ ಪ್ರಧಾನ ಕಾರ್ಯದರ್ಶಿ ಚಂದ್ರಮುಖಿ ಶರ್ಮಾ ಮಾತನಾಡಿ, ‘3X3 ಮಾದರಿಯಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುವ ಉತ್ತಮ ಅವಕಾಶ ನಮಗಿದೆ. ಫೆಬ್ರುವರಿಯಲ್ಲಿ 5X5 ಮಾದರಿಯ ಲೀಗ್ ಆರಂಭಿಸುವ ಚಿಂತನೆಯಿದೆ’ ಎಂದರು.

ರಾಜ್ಯ ತಂಡಕ್ಕೆ ಸುನಿಲ್ ನಾಯಕ

ಬೆಂಗಳೂರು: ಎಂ.ಸುನಿಲ್ ಕುಮಾರ್ ಅವರು ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯ ದಕ್ಷಿಣ ವಲಯ ಅರ್ಹತಾ ಸುತ್ತಿನಲ್ಲಿ ರಾಜ್ಯ ತಂಡವನ್ನು ಮುನ್ನಡೆಸುವರು. ಟೂರ್ನಿ 23ರಿಂದ 27ರ ವರೆಗೆ ನಗರದಲ್ಲಿ ನಡೆಯಲಿದೆ.

ಕರ್ನಾಟಕ ‘ಎ’ ಗುಂಪಿನಲ್ಲಿದ್ದು ಆಂಧ್ರಪ್ರದೇಶ, ತಮಿಳುನಾಡು ಮತ್ತು ತೆಲಂಗಾಣ ತಂಡಗಳು ಈ ಗುಂಪಿನಲ್ಲಿವೆ.

ಕರ್ನಾಟಕ ತಂಡ: ಜಯಂತ್ ಕೃಷ್ಣಮೂರ್ತಿ, ಶ್ರೀಜಿತ್ ಆರ್, ಕೆವಿನ್ ಕೋಶಿ, ಸಿಜು ಎಸ್, ರಾಬಿನ್ ಯಾದವ್, ಎಂ.ಸುನಿಲ್ ಕುಮಾರ್ (ನಾಯಕ), ಜಿ.ಜಾನ್ ಪೀಟರ್, ಹರಪ್ರೀತ್ ಸಿಂಗ್, ಪವನ್ ಎಸ್, ಎಡ್ವಿನ್ ರೊಸಾರಿಯೊ, ವಿಘ್ನೇಶ್ ಗುಣಶೇಖರ್, ಸೊಲೈಮಲೈ ಎನ್, ಕಮಲೇಶ್ ಪಿ, ಕ್ರಿಸ್ಟಿನ್ ಸಿ ಕ್ಲಿಟಸ್, ಆದಿತ್ಯ ಮೋಹನ್, ಶೆಲ್ಟನ್ ಪೌಲ್, ಸುಧೀರ್ ಕೋಟಿಕೇಲ, ಮಹೇಶ್ ಸೆಲ್ವ, ಅಂಕಿತ್ ಪಿ, ಮೊಹಮ್ಮದ್ ರಿಯಾಜ್, ಬಾವು ನಿಶಾದ್, ಜಗದೀಪ್ ಸಿಂಗ್. ಕೋಚ್: ಬೇಬಿ ಥಾಮಸ್, ಮ್ಯಾನೇಜರ್: ಎಸ್.ಎಂ.ಬಾಲು.

ಸಿಂಧು, ಪ್ರಣಯ್ ಮಿಂಚು

ಬಾಲಿ (ಪಿಟಿಐ): ಹಿನ್ನಡೆಯಿಂದ ಚೇತರಿಸಿಕೊಂಡು ಜಯ ಸಾಧಿಸಿದ ಭಾರತದ ಪಿ.ವಿ.ಸಿಂಧು, ಕಿದಂಬಿ ಶ್ರೀಕಾಂತ್ ಮತ್ತು ಎಚ್.ಎಸ್.ಪ್ರಣಯ್ ಅವರು ಇಂಡೊನೇಷ್ಯಾ ಮಾಸ್ಟರ್ಸ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದ ವಿಕ್ಟರ್ ಅಕ್ಸೆಲ್ಸನ್ ಅವರನ್ನು 14-21, 21-19, 21-16ರಲ್ಲಿ ಮಣಿಸಿದ ಪ್ರಣಯ್ ದಿನದ ಪ್ರಮುಖ ಆಕರ್ಷಣೆಯಾಗಿದ್ದರು.

ಒಂದು ತಾಸು 11 ನಿಮಿಷಗಳ ಹಣಾಹಣಿಯಲ್ಲಿ ಅವರು ಮೊದಲ ಗೇಮ್‌ನ ಸೋಲಿಗೆ ತಿರುಗೇಟು ನೀಡಿ ಗೆಲುವಿನ ಹಾದಿಯಲ್ಲಿ ಸಾಗಿದರು. ಇದು, ಅಕ್ಸೆಲ್ಸನ್ ಎದುರಿನ ಆರು ಪಂದ್ಯಗಳಲ್ಲಿ ಪ್ರಣಯ್ ಅವರ ಮೊದಲ ಜಯವಾಗಿದೆ.

ಮಹಿಳೆಯರ ಸಿಂಗಲ್ಸ್‌ನಲ್ಲಿ ಸಿಂಧು 17-21, 21-7, 21-12ರಲ್ಲಿ ಸ್ಪೇನ್‌ನ ಕ್ಲಾರಾ ಅಜುರ್‌ಮೆಂಡಿ ಅವರನ್ನು ಮಣಿಸಿದರು. ಕೇವಲ 47 ನಿಮಿಷಗಳಲ್ಲಿ ಪಂದ್ಯ ಮುಕ್ತಾಯ ಗೊಂಡಿತು. ಅಜುರ್‌ಮೆಂಡಿ ವಿರುದ್ಧ ಸಿಂಧು ಅವರ ಮೊದಲ ಪಂದ್ಯ ಇದಾಗಿತ್ತು. ಮೊದಲ ಗೇಮ್‌ನಲ್ಲಿ ಹಿನ್ನಡೆ ಅನುಭವಿಸಿದರೂ ನಂತರ ಭರ್ಜರಿ ಆಟದ ಮೂಲಕ ಜಯ ಸಾಧಿಸಿದರು.

ಇಂಡೊನೇಷ್ಯಾದ ಆರನೇ ಶ್ರೇಯಾಂಕದ ಆಟಗಾರ ಜೊನಾಥನ್ ಕ್ರಿಸ್ಟಿ ವಿರುದ್ಧ 13-21, 21-18, 21-15ರಲ್ಲಿ ಕಿದಂಬಿ ಶ್ರೀಕಾಂತ್ ಗೆಲುವು ದಾಖಲಿಸಿದರು.

ಶ್ರೇಯಾಂಕರಹಿತ ಶ್ರೀಕಾಂತ್ ಎಂಟರ ಘಟ್ಟದಲ್ಲಿ ಪ್ರಣಯ್ ಅವರ ಸವಾಲನ್ನು ಎದುರಿಸಲಿದ್ದಾರೆ.

ಲಕ್ಷ್ಯ ಸೇನ್‌ಗೆ ಸೋಲು: ಯುವ ಆಟಗಾರ ಲಕ್ಷ್ಯ ಸೇನ್ 13-21, 19-21ರಲ್ಲಿ ಅಗ್ರ ಶ್ರೇಯಾಂಕದ ಜಪಾನ್ ಆಟಗಾರ ಕೆಂಟೊ ಮೊಮೊಟ ಎದುರು ಸೋತರು. ಮಿಶ್ರ ಡಬಲ್ಸ್‌ನಲ್ಲಿ ಧ್ರುವ ಕಪಿಲ ಮತ್ತು ಎನ್.ಸಿಕ್ಕಿ ರೆಡ್ಡಿ 15-21, 23-21, 18-21ರಲ್ಲಿ ಥಾಯ್ಲೆಂಡ್‌ನ ಸುಪಕ್ ಜೊಮ್ಕೋಹ್ ಮತ್ತು ಸುಪಿಸರ ಪವ್ಸೆಂಪ್ರನ್‌ಗೆ ಮಣಿದರು.

ರಾಜ್ಯ ಸಬ್ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್

ಪ್ರೀ ಕ್ವಾರ್ಟರ್ ಫೈನಲ್‌ಗೆ ಪ್ರತೀಕ್

ಪ್ರಜಾವಾಣಿ ವಾರ್ತೆ

ಮೈಸೂರು: ಅಗ್ರ ಶ್ರೇಯಾಂಕದ ಆಟಗಾರ ಬೆಂಗಳೂರಿನ ಪ್ರತೀಕ್ ಕೌಂಡಿಲ್ಯ ಜಿಲ್ಲಾ ಬ್ಯಾಡ್ಮಿಂಟನ್ ಸಂಸ್ಥೆ ಆಶ್ರಯದಲ್ಲಿ ಗುರುವಾರ ಇಲ್ಲಿ ಆರಂಭವಾದ ರಾಜ್ಯ ಸಬ್ ಜೂನಿಯರ್ (13 ವರ್ಷದೊಳಗೆ) ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಬಾಲಕರ ವಿಭಾಗದ ಸಿಂಗಲ್ಸ್ ಪಂದ್ಯದಲ್ಲಿ ಅವರು 21–7, 21–10ರಲ್ಲಿ ಎಸ್.ಸನ್ನಿ ಅವರನ್ನು ಮಣಿಸಿದರು.

ಹಾರ್ದಿಕ್ ಮೊಹಾಂತಿ 21-13, 23-21 ರಲ್ಲಿ ಸಂಭ್ರಮ್ ಎಸ್.ಕೋಳಿವಾಡ ಎದುರೂ, ಆರವ್ 21-13, 21-15ರಲ್ಲಿ ಪಿಯೂಷ್ ತ್ರಿಪಾಠಿ ಮೇಲೂ, ದೇವಾಂಶ್ ಚೌಧರಿ 21-17, 21-15ರಲ್ಲಿ ಅರ್ಮಾನ್ ಖಾನ್ ವಿರುದ್ಧವೂ, ಸಾಯಿ ಪುಷ್ಕರ್ 22-20, 21-10ರಲ್ಲಿ ನೀಲೇಶ್ ಜಯರಾಜ್ ಎದುರೂ ಜಯ ಗಳಿಸಿದರು. ಎನ್.ಡಿ.ನಿಕೇತನ್ ಹರಿ 21-14, 19-21, 29-27 ರಲ್ಲಿ ನಂದೀಶ್ ಶಿವಕುಮಾರ್ ವಿರುದ್ಧವೂ, ಶ್ಯಾಮ್ ಬಿಂಡಿಗನವಿಲೆ 15-21, 21-18, 21-13ರಲ್ಲಿ ಆರ್.ಲೋಹಿತ್ ಎದುರೂ ಗೆದ್ದರು. ಬಾಲಕಿಯರ ವಿಭಾಗದ 32ನೇ ಸುತ್ತಿನ ಪಂದ್ಯದಲ್ಲಿ ಬೆಂಗಳೂರಿನ ಅದಿತಿ ದೀಪಕ್ ರಾಜ್ 21-8, 21-2ರಲ್ಲಿ ವೈ.ವೇದಶ್ರೀ ಎದುರು ಗೆದ್ದು ಪ್ರೀ ಕ್ವಾರ್ಟರ್ ಫೈನಲ್ ತಲುಪಿದರು.

ವೃದ್ಧಿ ಪೊನ್ನಮ್ಮ 21-16, 21-12ರಲ್ಲಿ ಆಶಿ ದಾಸ್ ಎದುರೂ, ಪಲ್ಲವಿ ವೆಂಕಟೇಶ್ 21-9, 21-17 ರಲ್ಲಿ ಶಾಯಿನಾ ಮಣಿಮುತ್ತು ಮೇಲೂ, ಗೌರಿ ಸತೀಶ್ 21-14, 21-7ರಲ್ಲಿ ನಿತ್ಯಾ ಅವಸ್ಥಿ ವಿರುದ್ಧವೂ ಜಯ ಗಳಿಸಿದರು.

ಇದಕ್ಕೂ ಮೊದಲು ನಡೆದ ಅರ್ಹತಾ ಸುತ್ತಿನ ಪಂದ್ಯದಲ್ಲಿ ಪಿಯೂಷ್ ತ್ರಿಪಾಠಿ 15–11, 13–15, 15–12ರಲ್ಲಿ ಕುಶಾಲ್ ಆತ್ರೇಯ ಎದುರು ಗೆದ್ದಿದರು.



ಪಿಯೂಷ್ ತ್ರಿಪಾಠಿ ಅವರು ಷಟಲ್ ಹಿಂದಿರುಗಿಸಿದ ರೀತಿ–ಪ್ರಜಾವಾಣಿ ಚಿತ್ರ

ರಾಂಚಿಯಲ್ಲಿ ಇಂದು ಭಾರತ–ನ್ಯೂಜಿಲೆಂಡ್ ಟಿ20 ಎರಡನೇ ಪಂದ್ಯ

ಸರಣಿ ಕೈವಶದತ್ತ ರೋಹಿತ್ ಪಡೆ ಕಣ್ಣು


ರಾಂಚಿ (ಪಿಟಿಐ): ಭಾರತ ತಂಡವು ರೋಹಿತ್ ಶರ್ಮಾ ನಾಯಕತ್ವ ಮತ್ತು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮಾರ್ಗದರ್ಶನದ ಮೊದಲ ಪಂದ್ಯದಲ್ಲಿಯೇ ರೋಚಕ ಜಯ ಸಾಧಿಸಿದ್ದು ಈಗ ಸರಣಿ ಕೈವಶ ಮಾಡಿಕೊಳ್ಳುವತ್ತ ಚಿತ್ತ ನೆಟ್ಟಿದೆ.

ಜಾರ್ಖಂಡ್ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆಯಲಿರುವ ನ್ಯೂಜಿಲೆಂಡ್ ಎದುರಿನ ಎರಡನೇ ಟಿ20 ಕ್ರಿಕೆಟ್ ಪಂದ್ಯದಲ್ಲಿ ಜಯಿಸುವ ವಿಶ್ವಾಸದಲ್ಲಿ ಭಾರತ ತಂಡವಿದೆ. ಬುಧವಾರ ಜೈಪುರದಲ್ಲಿ ನಡೆದ ಮೊದಲ ಪಂದ್ಯದಲ್ಲಿ ಭಾರತ ತಂಡವು ಗೆದ್ದು, ಮೂರು ಪಂದ್ಯಗಳ ಸರಣಿಯಲ್ಲಿ 1–0ಯಿಂದ ಮುನ್ನಡೆ ಸಾಧಿಸಿತ್ತು.

ವಿರಾಟ್ ಕೊಹ್ಲಿ ಗೈರುಹಾಜರಿಯಲ್ಲಿ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ ಸೂರ್ಯಕುಮಾರ್ ಯಾದವ್ ಮತ್ತು ನಾಯಕ ರೋಹಿತ್ ಅವರ ಅಮೋಘ ಬ್ಯಾಟಿಂಗ್‌ನಿಂದಾಗಿ ಭಾರತ ತಂಡವು ಜಯಿಸಿತು. ಕಿವೀಸ್ ತಂಡದ ಟ್ರೆಂಟ್ ಬೌಲ್ಟ್ ಕ್ಯಾಚ್ ಕೈಚೆಲ್ಲಿದ್ದು ಸೂರ್ಯನಿಗೆ ವರದಾನವಾಯಿತು. 42 ಎಸೆತಗಳಲ್ಲಿ 62 ರನ್ ಗಳಿಸಿದರು.

ಆರಂಭಿಕ ಜೋಡಿ ರಾಹುಲ್ ಮತ್ತು ರೋಹಿತ್ 50 ರನ್‌ಗಳನ್ನು ಸೇರಿಸಿ ಉತ್ತಮ ಆರಂಭ ನೀಡಿದರು. ಆದರೆ, ಮಧ್ಯಮ ಕ್ರಮಾಂಕದಲ್ಲಿ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದ್ದರು. ಅನುಭವಿ ಶ್ರೇಯಸ್ ಅಯ್ಯರ್ ಮತ್ತು ಹೊಸ ಪ್ರತಿಭೆ ವೆಂಕಟೇಶ್ ಅಯ್ಯರ್ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿದರೆ ಮಧ್ಯಮ ಕ್ರಮಾಂಕ ಬಲಿಷ್ಠವಾಗುವುದು ಖಚಿತ. ಆಲ್‌ರೌಂಡರ್ ಅಕ್ಷರ್ ಪಟೇಲ್ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ವೈಫಲ್ಯ ಅನುಭವಿಸಿದ್ದರು. ಆದರೆ ಅಶ್ವಿನ್ ಮತ್ತು ಭುವನೇಶ್ವರ್ ಕುಮಾರ್ ಉತ್ತಮವಾಗಿ ಬೌಲಿಂಗ ಮಾಡಿದ್ದರು. ಅದರಿಂದಾಗಿ ಕಿವೀಸ್ ತಂಡವು ದೊಡ್ಡ ಮೊತ್ತ ಕಲೆಹಾಕುವುದು ತಪ್ಪಿತ್ತು.

ಕೇನ್ ವಿಲಿಯಮ್ಸನ್ ಇಲ್ಲದ ಪ್ರವಾಸಿ ತಂಡವನ್ನು ಟಿಮ್ ಸೌಥಿ ಮುನ್ನಡೆಸುತ್ತಿದ್ದಾರೆ. ಮಾರ್ಟಿನ್ ಗಪ್ಟಿಲ್ ಮತ್ತು ಮಾರ್ಕ್ ಚಾಪ್‌ಮನ್ ಅವರಿಬ್ಬರೂ ಉತ್ತಮ ಲಯದಲ್ಲಿದ್ದಾರೆ. ಡೆರಿಲ್ ಮಿಚೆಲ್ ಮತ್ತು ಗ್ಲೆನ್ ಫಿಲಿಪ್ಸ್ ಲಯಕ್ಕೆ ಮರಳಿದರೆ ತಂಡದ ಬ್ಯಾಟಿಂಗ್ ಬಲಿಷ್ಠವಾಗುವುದು ಖಚಿತ. ಬೌಲಿಂಗ್‌ನಲ್ಲಿ ಸೌಥಿ, ಬೌಲ್ಟ್ ಮತ್ತು ಸ್ಯಾಂಟನರ್ ಅವರು ಪಂದ್ಯ ಗೆಲ್ಲಿಸಿಕೊಡುವ ಸಮರ್ಥರು.



ಕೋಚ್ ರಾಹುಲ್ ದ್ರಾವಿಡ್ ಮತ್ತು ನಾಯಕ ರೋಹಿತ್ ಶರ್ಮಾ –ಪಿಟಿಐ ಚಿತ್ರ

ತಂಡಗಳು: ಭಾರತ: ರೋಹಿತ್ ಶರ್ಮಾ (ನಾಯಕ), ಕೆ.ಎಲ್. ರಾಹುಲ್, ಶ್ರೇಯರ್ ಅಯ್ಯರ್, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್, ಇಶಾನ್ ಕಿಶನ್, ವೆಂಕಟೇಶ್ ಅಯ್ಯರ್, ಯಜುವೇಂದ್ರ ಚಾಹಲ್, ಆರ್. ಅಶ್ವಿನ್, ಅಕ್ಷರ್ ಪಟೇಲ್, ಆವೇಶ್ ಖಾನ್, ಭುವನೇಶ್ವರ್ ಕುಮಾರ್, ದೀಪಕ್ ಚಾಹರ್, ಹರ್ಷಲ್ ಪಟೇಲ್, ಮೊಹಮ್ಮದ್ ಸಿರಾಜ್, ಋತುರಾಜ್ ಗಾಯಕವಾಡ್.

ನ್ಯೂಜಿಲೆಂಡ್: ಟಿಮ್ ಸೌಥಿ (ನಾಯಕ), ಟಾಡ್ ಆಸ್ಲ್, ಟ್ರೆಂಟ್ ಬೌಲ್ಟ್, ಮಾರ್ಕ್ ಚಾಪಮನ್, ಲಾಗಿ ಫರ್ಗ್ಯುಸನ್, ಮಾರ್ಟಿನ್ ಗಪ್ಟಿಲ್, ಆ್ಯಡಂ ಮಿಲ್ನೆ, ಡೆರಿಲ್ ಮಿಚೆಲ್, ಜಿಮ್ಮಿ ನಿಶಾಮ್, ಗ್ಲೆನ್ ಫಿಲಿಪ್ಸ್, ಮಿಚೆಲ್ ಸ್ಯಾಂಟನರ್, ಟಿಮ್ ಸೀಫರ್ಟ್, ಈಶ್ ಸೋಧಿ.

ಪಂದ್ಯ ಆರಂಭ: ರಾತ್ರಿ 7.00; ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ರಾಂಚಿಯ ಪಿಚ್ ಹೇಗಿದೆ?

ರಾಂಚಿಯಲ್ಲಿ ನಾಲ್ಕು ವರ್ಷಗಳ ನಂತರ ಅಂತರ ರಾಷ್ಟ್ರೀಯ ಟಿ20 ಪಂದ್ಯ ನಡೆಯಲಿದೆ. ಇಲ್ಲಿ ನಡೆದಿರುವ ಎರಡು ಟಿ20 ಪಂದ್ಯಗಳಲ್ಲಿ ಭಾರತ ಜಯಿಸಿದೆ. ಮುಸ್ಸಂಜೆಯಲ್ಲಿ ಕಾಡುವ ಮಂಜು ಪಂದ್ಯದ ಫಲಿತಾಂಶದ ಮೇಲೆ ಪರಿಣಾಮ ಬೀರುತ್ತದೆ. ಬ್ಯಾಟರ್‌ಗಳಿಗೆ ಸ್ನೇಹಿಯಾಗಿರುವ ಪಿಚ್‌ನಲ್ಲಿ ದೊಡ್ಡ ಮೊತ್ತ ಕಲೆ ಹಾಕುವ ಅವಕಾಶವೂ ಇದೆ. ಚಾಣಾಕ್ಷತೆಯಿಂದ ಸ್ಪಿನ್ ಮಾಡುವ ಬೌಲರ್‌ಗಳಿಗೂ ವಿಕೆಟ್ ಗಳಿಸುವ ಅವಕಾಶವಿದೆ.



ಟ್ರೋಫಿಯೊಂದಿಗೆ ಗಾರ್ಬೈನ್ ಮುಗುರುಜಾ –ಎಎಫ್‌ಪಿ ಚಿತ್ರ

ಮುಗುರುಜಾಗೆ ಪ್ರಶಸ್ತಿ

ಗಾಡಾಲ್ಹಾರ್, ಮೆಕ್ಸಿಕೊ (ಎಪಿ): ಸ್ಪೇನ್‌ನ ಗಾರ್ಬೈನ್ ಮುಗುರುಜಾ ಡಬ್ಲ್ಯುಟಿಎ ಫೈನಲ್ ಪ್ರಶಸ್ತಿಯನ್ನು ಜಯಿಸಿದರು.

28 ವರ್ಷದ ಮುಗುರುಜಾ ಅವರಿಗೆ ಇದು ಮೊದಲ ಪ್ರಶಸ್ತಿಯಾಗಿದೆ. ಅವರು 6–3, 7–5ರಿಂದ ಎಸ್ತೋನಿಯಾದ ಅನೆಟ್ ಕೋಂಥಾವಿಟ್ ವಿರುದ್ಧ ಗೆದ್ದರು.

‘ಟೂರ್ನಿಗೂ ಮುನ್ನ ಟಕಿಲಾಗೆ ಹೋಗಿದ್ದೆ. ಅಲ್ಲಿಯ ಸುಪ್ರಸಿದ್ಧ ಮದ್ಯವನ್ನು ರುಚಿ ನೋಡಿ ಬಂದಿದ್ದೆ. ಇಲ್ಲಿ ಪ್ರಶಸ್ತಿ ಜಯಿಸಿದ ನಂತರ ಮತ್ತೆ ಟಕಿಲಾಗೆ ಹೋಗಿ ಔತಣಕೂಟ ಮಾಡುವುದು ಖಚಿತವೆಂದು ನನಗೆ ಗೊತ್ತಿತ್ತು’ ಎಂದು ಮುಗುರುಜಾ ಸಂತಸ ಹಂಚಿಕೊಂಡರು. ಟೂರ್ನಿ ನಡೆದ ಸ್ಥಳದಿಂದ 60 ಕಿಲೋಮೀಟರ್ಸ್ ದೂರದಲ್ಲಿರುವ ಪಟ್ಟಣ ಟಕೀಲಾ. 2015ರಲ್ಲಿ ಮುಗುರುಜಾ ಅವರು ಡಬ್ಲ್ಯುಟಿಎ ಸೆಮಿಫೈನಲ್ ಪ್ರವೇಶಿಸಿದ್ದರು.

ಡಿಜಿಪಿ, ಐಜಿಪಿಗಳ ಸಮ್ಮೇಳನ ನಾಳೆ

ನವದೆಹಲಿ: ಲಖನೌದಲ್ಲಿರುವ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಶನಿವಾರ ನಡೆಯಲಿರುವ ಪೊಲೀಸ್ ಮಹಾನಿರ್ದೇಶಕರು (ಡಿಜಿಪಿ) ಮತ್ತು ಪೊಲೀಸ್ ಮಹಾ ನಿರೀಕ್ಷಕರ (ಐಜಿಪಿ) ಸಮ್ಮೇಳನದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ.

ನವೆಂಬರ್ 20 ರಿಂದ ಆರಂಭವಾಗುವ ಎರಡು ದಿನಗಳ ಸಮ್ಮೇಳನದಲ್ಲಿ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಡಿಜಿಪಿಗಳು, ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳು, ಕೇಂದ್ರ ಪೊಲೀಸ್ ಸಂಸ್ಥೆಗಳ ಮುಖ್ಯಸ್ಥರು ಭಾಗವಹಿಸುತ್ತಾರೆ.ಅಲ್ಲದೆ ಇತರ ಆಹ್ವಾನಿತರು 37 ವಿವಿಧ ಸ್ಥಳಗಳಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ಭಾಗವಹಿಸಲಿದ್ದಾರೆ. ಸೈಬರ್ ಅಪರಾಧ, ದತ್ತಾಂಶ ನಿರ್ವಹಣೆ, ಭಯೋತ್ಪಾದನೆ ನಿಗ್ರಹದ ಸವಾಲುಗಳು, ಎಡಪಂಥೀಯ ಭಯೋ ತ್ಪಾದಕತೆ, ಮಾದಕವಸ್ತು ಕಳ್ಳಸಾಗಣೆ ತಡೆ, ಜೈಲು ಸುಧಾರಣೆಗಳು ಮತ್ತಿತರ ಅಂಶಗಳನ್ನು ಚರ್ಚಿಸಲಾಗುವುದು ಎಂದು ಮೂಲಗಳು ಹೇಳಿವೆ.

ನಾಗರಿಕರ ಹತ್ಯೆ; ತನಿಖೆಗೆ ಆದೇಶ

ಶ್ರೀನಗರ: ಇಲ್ಲಿನ ಹೈದರ್‌ಪೋರಾದಲ್ಲಿ ಈಚೆಗೆ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ಗೆ ಇಬ್ಬರು ನಾಗರಿಕರು ಸೇರಿ ನಾಲ್ವರು ಮೃತಪಟ್ಟ ಘಟನೆಗೆ ಕೇಂದ್ರಾಡಳಿತ ಪ್ರದೇಶದಾದ್ಯಂತ ಭಾರಿ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ ಗುರುವಾರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮ್ಯಾಜಿಸ್ಟ್ರೇಟ್ ತನಿಖೆಗೆ ಆದೇಶಿಸಿದ್ದಾರೆ.

ಈ ಕುರಿತು ಗುರುವಾರ ಟ್ವೀಟ್ ಮಾಡಿರುವ ಮನೋಜ್ ಸಿನ್ಹಾ, ಹೈದರ್‌ಪೋರಾ ಎನ್‌ಕೌಂಟರ್ ಪ್ರಕರಣವನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಮಟ್ಟದ ಅಧಿಕಾರಿ ನೇತೃತ್ವದಲ್ಲಿ ನಿಗದಿತ ಕಾಲಮಿತಿಯೊಳಗೆ ತನಿಖೆ ನಡೆಸಲು ಆದೇಶಿಸಲಾಗಿದ್ದು, ವರದಿ ಬಂದ ಬಳಿಕ ಸರ್ಕಾರ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಿದೆ. ಜಮ್ಮು ಕಾಶ್ಮೀರದ ನಾಗರಿಕರ ಜೀವ ರಕ್ಷಣೆಗೆ ಸರ್ಕಾರ ಬದ್ಧವಾಗಿದ್ದು, ಯಾವುದೇ ಅನ್ಯಾಯ ಆಗದಂತೆ ನೋಡಿಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಶ್ರೀನಗರದ ಹೊರವಲಯದ ಹೈದರ್‌ಪೋರಾದಲ್ಲಿ ನ.15ರಂದು ನಡೆದ ಭದ್ರತಾ ಪಡೆಗಳ ಎನ್‌ಕೌಂಟರ್‌ನಲ್ಲಿ ಉದ್ಯಮಿ, ವೈದ್ಯರೊಬ್ಬರು ಸೇರಿ ನಾಲ್ವರು ಬಲಿಯಾಗಿದ್ದರು. ಉಗ್ರವಾದದ ಹೆಸರಿನಲ್ಲಿ ಭದ್ರತಾಪಡೆಗಳು ನಾಗರಿಕರನ್ನು ಕೊಲ್ಲುತ್ತಿದ್ದು, ಸರ್ಕಾರ ನಾಗರಿಕರ ಜೀವ ರಕ್ಷಣೆಗೆ ಮುಂದಾಗಬೇಕು ಎಂದು ಪಿಡಿಪಿ ಮುಖ್ಯಸ್ಥೆ ಮೆಹಬೂಬ ಮುಫ್ತಿ ಹಾಗೂ ಸಂಸದ ಫಾರೂಕ್ ಅಬ್ದುಲ್ಲಾ ಅವರು ಬುಧವಾರ ಒತ್ತಾಯಿಸಿದ್ದರು.

ಕಾಶ್ಮೀರ ಬಂದ್ ಇಂದು: ನಾಗರಿಕರ ಹತ್ಯೆಯನ್ನು ಖಂಡಿಸಿ ಆಲ್ ಪಾರ್ಟೀಸ್ ಹುರಿಯತ್ ಕಾನ್ಫರೆನ್ಸ್ (ಎಪಿಎಚ್‌ಸಿ) ಹಾಗೂ ಜಮ್ಮು ಮತ್ತು ಕಾಶ್ಮೀರ ವಕೀಲರ ಸಂಘ ಶುಕ್ರವಾರ (ನ.19) ಕಾಶ್ಮೀರ ಬಂದ್‌ಗೆ ಕರೆ ನೀಡಿವೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಎಪಿಎಚ್‌ಸಿ, ಹೈದರಾಪೋರಾದಲ್ಲಿನ ನಾಗರಿಕರ ಹತ್ಯೆಯು ಹಾಗೂ ಪ್ರೀತಿಪಾತ್ರರನ್ನು ಕಳೆದುಕೊಂಡ ಸಂತ್ರಸ್ತ ಕುಟುಂಬಗಳು ಅನುಭವಿಸಿದ ನೋವು ಕಾಶ್ಮೀರದ ಜನರನ್ನು ದಿಗ್ಭ್ರಮೆಗೊಳಿಸಿದೆ. ದುರಂತದಲ್ಲಿ ಸಾವಿಗೀಡಾದ ನಾಗರಿಕರನ್ನು ಅಂತ್ಯಕ್ರಿಯೆ ನಡೆಸಲು ಅವಕಾಶ ನೀಡದೇ ಅಮಾನವೀಯವಾಗಿ ನಡೆದುಕೊಳ್ಳಲಾಗುತ್ತಿದೆ. ಹಾಗಾಗಿ ಇದನ್ನು ಖಂಡಿಸುವ ಸಲುವಾಗಿ ನವೆಂಬರ್ 19ರಂದು ಬಂದ್ ಕರೆ ನೀಡಲಾಗಿದ್ದು, ಜನರು ಸ್ವಯಂಪ್ರೇರಿತರಾಗಿ ಬಂದ್‌ಗೆ ಬೆಂಬಲ ನೀಡಬೇಕು ಎಂದು ಮನವಿ ಮಾಡಲಾಗಿದೆ.

ಮತ್ತೆ ಗೃಹಬಂಧನ: ‘ನನ್ನ ಹಾಗೂ ಇಬ್ಬರು ಸಹೋದ್ಯೋಗಿಗಳನ್ನು ಕೇಂದ್ರ ಸರ್ಕಾರ ಮತ್ತೆ ಗೃಹಬಂಧನದಲ್ಲಿ ಇರಿಸಿದೆ’ ಎಂದು ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ಅಧ್ಯಕ್ಷೆ ಮೆಹಬೂಬ ಮುಫ್ತಿ ಆರೋಪಿಸಿದ್ದಾರೆ.

ತಮ್ಮ ನಿವಾಸಕ್ಕೆ ಹೊರಗಿನಿಂದ ಬೀಗ ಹಾಕಿರುವ ಫೋಟೊಗಳನ್ನು ಗುರುವಾರ ಟ್ವೀಟ್‌ನಲ್ಲಿ ಹಾಕಿರುವ ಮೆಹಬೂಬ ಮುಫ್ತಿ, ತಮ್ಮ ಪಕ್ಷದ ಮುಖ್ಯ ವಕ್ತಾರ ಸುಹೇಲ್ ಬುಖಾರಿ, ವಕ್ತಾರ ನಜ್ಮು ಸಾಕೀಬ್ ಅವರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ತಿಳಿಸಿದ್ದಾರೆ.

ಪಾಕ್ ವಿಶ್ವಕ್ಕೇ ತಲೆನೋವು: ರಾಮ್ ಮಾಧವ್

ವಾಷಿಂಗ್ಟನ್ (ಪಿಟಿಐ): ಜಗತ್ತಿನಾದ್ಯಂತ ನಡೆದಿರುವ ಎಲ್ಲಾ ಪ್ರಮುಖ ಭಯೋತ್ಪಾದಕ ದಾಳಿಗಳಲ್ಲಿ ಪಾಕಿಸ್ತಾನದವರ ಹೆಜ್ಜೆ ಗುರುತುಗಳಿವೆ. ಹಾಗಾಗಿ ಭಯೋತ್ಪಾದಕರಿಗೆ ಸುರಕ್ಷಿತ ತಾಣವಾಗಿರುವ ಆ ದೇಶ ಇಡೀ ವಿಶ್ವಕ್ಕೇ ‘ತಲೆನೋವಾಗಿದೆ’ ಎಂದು ಬಿಜೆಪಿಯ ಹಿರಿಯ ನಾಯಕ ರಾಮ್ ಮಾಧವ್ ಹೇಳಿದ್ದಾರೆ. ಇಲ್ಲಿ ಭಾರತೀಯ–ಅಮೆರಿಕನ್ನರು ಆಯೋಜಿಸಿದ್ದ ‘ಜಾಗತಿಕ ಭಯೋತ್ಪಾದನಾ ವಿರೋಧಿ ದಿನ’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಜಾಗತಿಕ ಭಯೋತ್ಪಾದನೆಯ ತಾಣ ಆಗಿರುವ ಪಾಕಿಸ್ತಾನವನ್ನು ವಿಶ್ವ ಸಮುದಾಯ ಸೂಕ್ತವಾಗಿ ನಿಭಾಯಿಸಬೇಕಾದ ಅಗತ್ಯವಿದೆ’ ಎಂದರು.

‘ಪಾಕಿಸ್ತಾನ ಕೇವಲ ಭಾರತಕ್ಕಷ್ಟೇ ತಲೆನೋವಾಗಿಲ್ಲ. ಇಡೀ ವಿಶ್ವಕ್ಕೆ ಸಮಸ್ಯೆಯಾಗಿದೆ. ಕೈಗವಸು ತೊಟ್ಟು ಮಕ್ಕಳಿಗೆ ಚಿಕಿತ್ಸೆ ನೀಡುವಂತೆ, ಆ ದೇಶಕ್ಕೆ ಚಿಕಿತ್ಸೆ ನೀಡಲು ಸಾಧ್ಯವಿಲ್ಲ’ ಎಂದು ಆರ್‌ಎಸ್‌ಎಸ್‌ನ ರಾಷ್ಟ್ರೀಯ ಕಾರ್ಯಕಾರಿ ಸದಸ್ಯರೂ ಆಗಿರುವ ಮಾಧವ್ ಅವರು ಪುನರುಚ್ಚರಿಸಿದರು.

ವಿಶ್ವಸಂಸ್ಥೆ: ಭಾರತ ಮರು ಆಯ್ಕೆ

ವಿಶ್ವಸಂಸ್ಥೆ: ವಿಶ್ವಸಂಸ್ಥೆಯ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸಂಸ್ಥೆಯ(ಯುನೆಸ್ಕೊ) ಕಾರ್ಯ ನಿರ್ವಾಹಕ ಮಂಡಳಿಗೆ ನಡೆದ ಮರುಚುನಾವಣೆಯಲ್ಲಿ ಬುಧವಾರ ಭಾರತ ಗೆಲುವು ಸಾಧಿಸಿದ್ದು, 2021–25ರ ಅವಧಿಗೂ ಸದಸ್ಯತ್ವ ಮುಂದುವರಿಯಲಿದೆ.

ಏಷ್ಯನ್ ಆರ್ಚರಿ ಚಾಂಪಿಯನ್‌ಷಿಪ್: ರಿಷಭ್ ಯಾದವ್‌ಗೆ ಬೆಳ್ಳಿ ಪದಕ

ಢಾಕಾದಲ್ಲಿ ಬೆಳಗಿದ ಚಿನ್ನದ ಜ್ಯೋತಿ

ಢಾಕಾ (ಪಿಟಿಐ): ಏಷ್ಯನ್ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ಜ್ಯೋತಿ ಸುರೇಖಾ ವೆಣ್ಣಂ ಅವರು ಸಾಧನೆಯ ಹಾದಿಯಲ್ಲಿ ಎರಡು ಬಾರಿ ಬಲಿಷ್ಠ ಕೊರಿಯಾದ ಸವಾಲನ್ನು ಮೀರಿ ನಿಂತಿದ್ದರು. ಆದರೆ ಮಿಶ್ರ ತಂಡ ವಿಭಾಗದ ಫೈನಲ್‌ನಲ್ಲಿ ಕೊರಿಯಾ ಆರ್ಚರ್‌ಗಳಿಗೆ ಮಣಿದರು.

ಮಹಿಳೆಯರ ವಿಭಾಗದ ಫೈನಲ್ ಹಣಾಹಣಿಯಲ್ಲಿ ಜ್ಯೋತಿ 146-145ರಲ್ಲಿ ಓಹ್ ಯೂಹ್ಯೂನ್ ಎದುರು ಜಯ ಗಳಿಸಿದರು.

ಈಚೆಗೆ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮೂರು ಬೆಳ್ಳಿ ಪದಕ ಗೆದ್ದು ಸಂಭ್ರಮಿಸಿದ್ದ ಜ್ಯೋತಿ ಸೆಮಿಫೈನಲ್‌ನಲ್ಲಿ 2015ರ ವಿಶ್ವ ಚಾಂಪಿಯನ್ ಕಿಮ್ ಯುನ್ಹಿ ಅವರನ್ನು 148-143ರಲ್ಲಿ ಮಣಿಸಿದ್ದರು.

ಎರಡು ಪಾಯಿಂಟ್‌ಗಳ ಮುನ್ನಡೆಯೊಂದಿಗೆ ಅಂತಿಮ ಸುತ್ತಿನಲ್ಲಿ ಕಣಕ್ಕೆ ಇಳಿದ ವಿಶ್ವ ಕ್ರಮಾಂಕದಲ್ಲಿ ಆರನೇ ಸ್ಥಾನದಲ್ಲಿರುವ ಜ್ಯೋತಿ ಒಂದು ಬಾರಿ 10 ಮತ್ತು ಎರಡು ಬಾರಿ ಒಂಬತ್ತಕ್ಕೆ ಗುರಿ ಇಟ್ಟರು. ಈ ಮೂಲಕ ದೇಶಕ್ಕೆ ಮೊದಲ ಚಿನ್ನ ಗಳಿಸಿಕೊಟ್ಟರು.

ಕೊರಿಯಾದ ಆರ್ಚರ್ ಒಂಬತ್ತು ರಿಂಗ್ ಹಾಕಿದರು. ಆ ತಂಡದ ಕೋಚ್ ಸೇರಿದಂತೆ ಎಲ್ಲರೂ ಅದನ್ನು 10 ಎಂದೇ ಪರಿಗಣಿಸಿ ಸಂಭ್ರಮಿಸಿದ್ದರು. ಆದರೆ ಅಂಪೈರ್ ನಿರ್ಧಾರ ಪ್ರಕಟಗೊಂಡಾಗ ಅಸಮಾಧಾನ ವ್ಯಕ್ತಪಡಿಸಿದರು.

'ಬಾಣವು 10ರ ರಿಂಗ್‌ನಲ್ಲಿರಲಿಲ್ಲ. ಆದರೆ ಕೊರಿಯಾದವರು ತೀರ್ಪುಗಾರರ ಮೇಲೆ ಒತ್ತಡ ಹೇರಿ ಫಲಿತಾಂಶವನ್ನು ತಮ್ಮ ಪರವಾಗಿ ಮಾಡಿಕೊಳ್ಳಲು ಪ್ರಯತ್ನಿಸಿದರು. ವಿಶ್ವ ಆರ್ಚರಿ ನಿಯಮಗಳ ಪ್ರಕಾರ ತೀರ್ಪುಗಾರರ ನಿರ್ಧಾರಕ್ಕೆ ಪ್ರತಿಭಟನೆ ವ್ಯಕ್ತಪಡಿಸುವ ಅವಕಾಶ ಇಲ್ಲ' ಎಂದು ಭಾರತದ ಕೋಚ್ ತಿಳಿಸಿದರು.

ಜ್ಯೋತಿ-ರಿಷಭ್‌ಗೆ ಬೆಳ್ಳಿ: ಮಿಶ್ರ ತಂಡ ವಿಭಾಗದಲ್ಲಿ ಕೊರಿಯಾದ ಕಿಮ್ ಯುನ್ಹಿ ಮತ್ತು ಚೊಯ್ ಯುಂಘೀ ಎದುರಿನ ಹಣಾಹಣಿಯಲ್ಲಿ ಜ್ಯೋತಿ ಮತ್ತು ರಿಷಭ್ ಯಾದವ್ ಸೋತು ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ಕೊರಿಯಾ ಜೋಡಿ 155-154ರಲ್ಲಿ ಜಯ ಸಾಧಿಸಿತು. ಯಾದವ್ ತಂಡ ವಿಭಾಗದಲ್ಲಿ ಅಭಿಷೇಕ್ ಮತ್ತು ಅಮನ್ ಸೈನಿ ಜೊತೆಗೂಡಿ ಕಂಚಿನ ಪದಕವನ್ನೂ ಗಳಿಸಿದ್ದರು.



ಮಿಶ್ರ ತಂಡ ವಿಭಾಗದಲ್ಲಿ ಬೆಳ್ಳಿ ಗೆದ್ದ ಜ್ಯೋತಿ ಸುರೇಖಾ ವೆಣ್ಣಂ ಮತ್ತು ರಿಷಭ್ ಯಾದವ್ ಟ್ವಿಟರ್ ಚಿತ್ರ

'10'ರ ಅಮೋಘ ಆರಂಭ

ಎರಡು ಬಾರಿ ಹತ್ತರ ರಿಂಗ್ ಮೂಲಕ ಅಮೋಘ ಆರಂಭ ಕಂಡ ಜ್ಯೋತಿ ಮೊದಲು 29-20ರ ಮುನ್ನಡೆ ಕಂಡರು. ಆದರೆ ನಂತರ ಕೊರಿಯಾ ಆರ್ಚರ್ ತಿರುಗೇಟು ನೀಡಿದರು. ಈ ಮೂಲಕ ಸ್ಕೋರು 58ರಲ್ಲಿ ಸಮ ಆಯಿತು.


ಮೂರನೇ ಸೆಟ್‌ನ ಮೂರು ಬಾಣಗಳನ್ನು 10ಕ್ಕೆ ಗುರಿ ಇಟ್ಟ ಆಂಧ್ರಪ್ರದೇಶದ ಜ್ಯೋತಿ 88-86ರ ಮುನ್ನಡೆ ಸಾಧಿಸಿದರು. ನಂತರ ಇಬ್ಬರೂ ತಲಾ 30 ಸ್ಕೋರು ಗಳಿಸಿದ್ದರಿಂದ ಎಲ್ಲರ ಗಮನ ಫೈನಲ್ ಹಂತದತ್ತ ಸಾಗಿತು. ಈ ಸಂದರ್ಭದಲ್ಲಿ ಜ್ಯೋತಿ ಎದೆಗುಂದದೆ ಆಡಿ ಚಿನ್ನಕ್ಕೆ ಮುತ್ತನ್ನಿತ್ತರು.

ಪ್ರಕಾಶ್ ಪಡುಕೋಣೆಗೆ ಜೀವಮಾನ ಸಾಧನೆ ಪ್ರಶಸ್ತಿ

ನವದೆಹಲಿ (ಪಿಟಿಐ): ದಿಗ್ಗಜ ಬ್ಯಾಡ್ಮಿಂಟನ್ ಆಟಗಾರ ಪ್ರಕಾಶ್ ಪಡುಕೋಣೆ ಅವರು ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ನೀಡುವ ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಭಾರತ ಬ್ಯಾಡ್ಮಿಂಟನ್ ಸಂಸ್ಥೆಯು ಪ್ರಕಾಶ್ ಪಡುಕೋಣೆ ಅವರನ್ನು ಪ್ರಶಸ್ತಿಗಾಗಿ ನಾಮನಿರ್ದೇಶನ ಮಾಡಿತ್ತು. ಪ್ರಶಸ್ತಿ ಆಯ್ಕೆ ಆಯೋಗವು ವಿಶ್ವದ ಶ್ರೇಷ್ಠ ಬ್ಯಾಡ್ಮಿಂಟನ್ ಪಟುಗಳನ್ನು ಆಯ್ಕೆ ಮಾಡಿ ಬಿಡಬ್ಲ್ಯುಎಫ್‌ಗೆ ಶಿಫಾರಸು ಮಾಡಿತ್ತು. ಅದರಲ್ಲಿ ಕನ್ನಡಿಗ ಪ್ರಕಾಶ್ ಅವರನ್ನು ಗೌರವಿಸಲು ಬಿಡ್ಲ್ಯುಎಫ್ ನಿರ್ಧರಿಸಿದೆ.

ವಿಶ್ವದ ಮಾಜಿ ಅಗ್ರಶ್ರೇಯಾಂಕದ ಆಟಗಾರ, ಭಾರತದ ಮೊದಲ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್ ಮತ್ತು ಆಲ್ ಇಂಗ್ಲೆಂಡ್ ಚಾಂಪಿಯನ್ ಕೂಡ ಆಗಿರುವ ಪ್ರಕಾಶ್ ಅವರಿಗೆ 2018ರಲ್ಲಿ ಬಿಎಐ ಜೀವಮಾನ ಸಾಧನೆ ಪ್ರಶಸ್ತಿ ನೀಡಿತ್ತು.



ಪ್ರಕಾಶ್ ಪಡುಕೋಣೆ

ಬಿಡಬ್ಲ್ಯುಎಫ್ ಕೌನ್ಸಿಲ್ ಮೆರಿಟೋರಿಯಸ್ ಸರ್ವಿಸ್ ಅವಾರ್ಡ್ ವಿಭಾಗದಲ್ಲಿ ಹರಿಯಾಣ ಬ್ಯಾಡ್ಮಿಂಟನ್ ಸಂಸ್ಥೆ ಅಧ್ಯಕ್ಷ ದೇವೆಂದರ್ ಸಿಂಗ್, ಮಹಾರಾಷ್ಟ್ರ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎಸ್.ಎ. ಶೆಟ್ಟಿ, ಬಿಎಐ ಉಪಾಧ್ಯಕ್ಷ ಮಾಣಿಕ್ ಶಾ, ಡಾ. ಓ.ಡಿ. ಶರ್ಮಾ ಅವರ ನಾಮನಿರ್ದೇಶನ ಮಾಡಿದೆ.

ಉತ್ತರಾಖಂಡ ಬ್ಯಾಡ್ಮಿಂಟನ್ ಸಂಸ್ಥೆಯ ಅಧ್ಯಕ್ಷೆ ಅಲಕನಂದಾ ಅಶೋಕ್ ಅವರಿಗೆ ಮಹಿಳಾ ಮತ್ತು ಲಿಂಗಸಮಾನತೆ ವಿಭಾಗದ ಪ್ರಶಸ್ತಿ ನೀಡಲಾಗುವುದು.

'ಇವತ್ತು ಭಾರತದ ಬ್ಯಾಡ್ಮಿಂಟನ್ ಈ ಹಂತಕ್ಕೆ ಬೆಳೆದು ನಿಲ್ಲಲು ಪ್ರಕಾಶ್ ಪಡುಕೋಣೆ ಅವರ ಸಾಧನೆ ಮತ್ತು ಕಾಣಿಕೆಗಳು ಪ್ರಮುಖವಾಗಿವೆ.

ಅವರಿಗೆ ಬಿಡಬ್ಲ್ಯುಎಫ್ ಪ್ರಶಸ್ತಿ ಸಂದಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ' ಎಂದು ಬಿಎಐ ಪ್ರಧಾನ ಕಾರ್ಯದರ್ಶಿ ಅಜಯ್ ಸಿಂಘಾನಿಯಾ ಹೇಳಿದ್ದಾರೆ.

ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ ನಡೆಯುವ ಸಂದರ್ಭದಲ್ಲಿ ಎಲ್ಲ ಪುರಸ್ಕೃತರಿಗೆ ಪ್ರಮಾಣಪತ್ರ ಮತ್ತು ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು.

ಐಎಸ್‌ಎಲ್: ಎಟಿಕೆಎಂಬಿ–ಕೇರಳ ಮುಖಾಮುಖಿ

ಮಡಗಾಂವ್ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಗೆ ಶುಕ್ರವಾರ ಚಾಲನೆ ದೊರೆಯಲಿದ್ದು, ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಎಟಿಕೆ ಮೋಹನ್ ಬಾಗನ್ ಮತ್ತು ಕೇರಳ ಬ್ಲಾಸ್ಟರ್ಸ್ ಮುಖಾಮುಖಿಯಾಗಲಿವೆ.

ಜವಾಹರ್‌ಲಾಲ್ ನೆಹರೂ ಕ್ರೀಡಾಂಗಣದಲ್ಲಿ ಈ ಪಂದ್ಯ ನಡೆಯಲಿದೆ.

ಗೋವಾದ ಮೂರು ತಾಣಗಳಾದ ಮಡಗಾಂವ್‌ನ ಜವಾಹರ್‌ಲಾಲ್ ನೆಹರೂ ಕ್ರೀಡಾಂಗಣ, ವಾಸ್ಕೋದ ತಿಲಕ್ ಕ್ರೀಡಾಂಗಣ ಮತ್ತು ಬ್ಯಾಂಬೊಲಿನ್‌ನ ಜಿಎಂಸಿ ಅಥ್ಲೆಟಿಕ್ ಕ್ರೀಡಾಂಗಣಗಳಲ್ಲಿ ಜನವರಿ 9ರವರೆಗೆ ಟೂರ್ನಿ ನಡೆಯಲಿದೆ.

2014ರಲ್ಲಿ ಲೀಗ್ ಪ್ರಾರಂಭದ ಬಳಿಕ ಈ ಬಾರಿ ಪ್ರಮುಖ ಬದಲಾವಣೆಯೊಂದು ಕಂಡಿದೆ. ಪ್ರತಿ ತಂಡದ ಆಡುವ ಹನ್ನೊಂದರ ಬಳಗದಲ್ಲಿ ಏಳು ಮಂದಿ ಭಾರತದ ಆಟಗಾರರು ಹಾಗೂ ನಾಲ್ಕು ಮಂದಿ ವಿದೇಶಿ ಆಟಗಾರರು ಕಣಕ್ಕಿಳಿಯಲಿದ್ದಾರೆ. 2014ರ ಆವೃತ್ತಿಯನ್ನು ಹೊರತುಪಡಿಸಿ ಈ ಹಿಂದಿನ ಆವೃತ್ತಿಗಳಲ್ಲಿ ದೇಶದ ಕನಿಷ್ಠ ಆರು ಮಂದಿ ಆಟಗಾರರಿಗೆ ಅವಕಾಶವಿತ್ತು. ಈ ಬಾರಿ ಈ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಲೀಗ್‌ನ ಆರಂಭದ ವರ್ಷದಲ್ಲಿ ಆರು ಮಂದಿ ವಿದೇಶದ ಮತ್ತು ಐದು ಮಂದಿ ದೇಶಿ ಆಟಗಾರರಿಗೆ ಅವಕಾಶ ನೀಡಲಾಗಿತ್ತು.

'ನಮ್ಮ ಆಟದ ಶೈಲಿಯನ್ನು ಬಿಟ್ಟುಕೊಡುವುದಿಲ್ಲ. ಆದರೆ ಎದುರಾಳಿ ತಂಡವನ್ನು ಹಗುರವಾಗಿ ಪರಿಗಣಿಸುವುದಿಲ್ಲ' ಎಂದು ಎಟಿಕೆಎಂಬಿ ತಂಡದ ಕೋಚ್ ಆ್ಯಂಟೊನಿಯೊ ಹಬಾಸ್ ಹೇಳಿದರು. ಕೇರಳ ಬ್ಲಾಸ್ಟರ್ಸ್ ತಂಡವನ್ನು ಈ ಹಿಂದಿನ ಆವೃತ್ತಿಯಲ್ಲಿ ಎರಡು ಬಾರಿ ಮಣಿಸಿರುವ ಎಟಿಕೆಎಂಬಿ ಅದೇ ಲಯವನ್ನು ಮುಂದುವರಿಸುವ ತವಕದಲ್ಲಿದೆ.

ಪಂದ್ಯ ಆರಂಭ ಸಂಜೆ 7.30

ಸ್ಥಳ: ಫತೋರ್ಡ ಕ್ರೀಡಾಂಗಣ

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಎಟಿಕೆ ಮೋಹನ್ ಬಾಗನ್ ಆಟಗಾರರು– ಪಿಟಿಐ ಚಿತ್ರ

ಐಎಸ್‌ಎಲ್ ಅಂಕಿಅಂಶಗಳು

115 ಲೀಗ್ ಹಂತದ ಒಟ್ಟು ಪಂದ್ಯಗಳು

55 ಮೊದಲ ಹಂತದ ಪಂದ್ಯಗಳು

6 ಒಟ್ಟು ಡಬಲ್ ಹೆಡರ್‌ಗಳು

ಬೆಂಗಳೂರು ಎಫ್‌ಸಿ ತಂಡದ ಪಂದ್ಯಗಳು

ದಿನಾಂಕ	ಎದುರಾಳಿ	ಸ್ಥಳ	ಸಮಯ
ನ.20	ಎನ್‌ಇಯು	ಬ್ಯಾಂಬೊಲಿಮ್	7.30
ನ.24	ಒಎಫ್‌ಸಿ	ವಾಸ್ಕೊ	
ನ.28	ಕೆಬಿಎಫ್‌ಸಿ	ಬ್ಯಾಂಬೊಲಿಮ್	
ಡಿ.4	ಮುಂಬೈ	ಬ್ಯಾಂಬೊಲಿಮ್	9.30
ಡಿ.8	ಎಚ್‌ಎಫ್‌ಸಿ	ಬ್ಯಾಂಬೊಲಿಮ್	7.30
ಡಿ.11	ಗೋವಾ	ಬ್ಯಾಂಬೊಲಿಮ್	9.30
ಡಿ.16	ಎಟಿಕೆಎಂಬಿ	ಬ್ಯಾಂಬೊಲಿಮ್	7.30
ಡಿ.20	ಜೆಎಫ್‌ಸಿ	ಬ್ಯಾಂಬೊಲಿಮ್	
ಡಿ.30	ಸಿಎಫ್‌ಸಿ	ವಾಸ್ಕೊ	
ಜ.4	ಎಸ್‌ಸಿಇಬಿ	ಬ್ಯಾಂಬೊಲಿಮ್	

ತಾಷ್ಕೆಂಟ್‌ನಲ್ಲಿ ಏಷ್ಯನ್ ಪ್ಯಾರಾ ಯೂತ್ ಗೇಮ್ಸ್

ನವದೆಹಲಿ (ಪಿಟಿಐ): ಉಜ್ಬೆಕಿಸ್ತಾನದ ತಾಷ್ಕೆಂಟ್‌ನಲ್ಲಿ 2025ರ ಏಷ್ಯನ್ ಯೂತ್ ಕ್ರೀಡಾಕೂಟ ನಡೆಯಲಿದೆ ಎಂದು ಏಷ್ಯನ್ ಪ್ಯಾರಾಲಿಂಪಿಕ್ ಸಮಿತಿ (ಎಪಿಸಿ) ಗುರುವಾರ ತಿಳಿಸಿದೆ.

ಕ್ರೀಡಾಕೂಟ ಆಯೋಜಿಸಲು ಅವಕಾಶ ಕೋರಿ ಸೆಪ್ಟೆಂಬರ್ ಕೊನೆ ಮತ್ತು ಅಕ್ಟೋಬರ್ ಆರಂಭದಲ್ಲಿ ಕ್ರೀಡಾ ಮತ್ತು ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ಉಜ್ಬೆಕಿಸ್ತಾನ ಸರ್ಕಾರ ಬಿಡ್ ಸಲ್ಲಿಸಿತ್ತು. ಆ ದೇಶಕ್ಕೆ ಆತಿಥ್ಯದ ಅವಕಾಶ ನೀಡಲು ಸಭೆಯಲ್ಲಿ ನಿರ್ಧರಿಸಲಾಯಿತು.

'ಅನೇಕ ಪ್ರಬಲ ಬಿಡ್‌ಗಳು ಸಲ್ಲಿಕೆಯಾಗಿದ್ದವು. ಕ್ರೀಡಾಕೂಟ ಆಯೋಜನೆಗೆ ಮುಂದೆ ಬಂದ ಎಲ್ಲರಿಗೂ ಕೃತಜ್ಞತೆಗಳು ಸಲ್ಲಬೇಕು. ಬಿಡ್ಡಿಂಗ್‌ನಲ್ಲಿ ಉಜ್ಬೆಕಿಸ್ತಾನ ಯಶಸ್ವಿಯಾಗಿದೆ' ಎಂದು ಎಪಿಸಿ ಅಧ್ಯಕ್ಷ ಮಜೀದ್ ರಶೀದ್ ತಿಳಿಸಿದರು.

'ನಮ್ಮದು ಮಹತ್ವಾಕಾಂಕ್ಷೆ ಇರುವ ರಾಷ್ಟ್ರ. ಏಷ್ಯನ್ ಗೇಮ್ಸ್ ಮತ್ತು ಪ್ಯಾರಾಲಿಂಪಿಕ್ ಗೇಮ್ಸ್‌ನಲ್ಲಿ ದೇಶ ದಿಂದ ಪಾಲ್ಗೊಳ್ಳುವವರ ಸಂಖ್ಯೆ ಇತ್ತೀಚೆಗೆ ಹೆಚ್ಚುತ್ತಿದೆ. ಗೆಲ್ಲುವ ಪದಕಗಳ ಸಂಖ್ಯೆಯೂ ಹೆಚ್ಚುತ್ತಿದೆ. 2025ರ ಕ್ರೀಡಾಕೂಟದ ಯಶಸ್ವಿಗಾಗಿ ಈಗಲೇ ಕಾರ್ಯಯೋಜನೆ ಗ ಳನ್ನು ರೂಪಿಸಲಾಗುವುದು. ಏಷ್ಯಾದ ಸಮರ್ಥ ಪ್ಯಾರಾ ಅಥ್ಲೀಟ್ ಗಳನ್ನು ಸ್ವಾಗತಿಸಲು ಖುಷಿ ಎನಿ ಸುತ್ತದೆ' ಎಂದು ಉಜ್ಬೆಕಿಸ್ತಾನ ಪ್ಯಾರಾಲಿಂಪಿಕ್ ಸಮಿತಿಯ ಅಧ್ಯಕ್ಷ ಮುಖ್ತೊರ್ಖಮ್ ತಷ್ಕೊಜೆವ್ ಹೇಳಿದರು.

ಈ ಸಾಲಿನ ಏಷ್ಯನ್ ಯೂತ್ ಪ್ಯಾರಾ ಗೇಮ್ಸ್ ಡಿಸೆಂಬರ್ ಎರಡರಿಂದ ಆರರ ವರೆಗೆ ಬಹರೇನ್‌ನಲ್ಲಿ ನಡೆಯಲಿದೆ.

ಪೂಜಾರಾ ಕ್ಷಮೆ ಕೇಳಿದ ಜ್ಯಾಕ್ ಬ್ರೂಕ್ಸ್

ಲಂಡನ್ (ಪಿಟಿಐ): ಜನಾಂಗೀಯ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮರ್‌ಸೆಟ್ ತಂಡದ ಬೌಲರ್ ಜ್ಯಾಕ್ ಬ್ರೂಕ್ಸ್ ಗುರುವಾರ ಭಾರತದ ಟೆಸ್ಟ್ ಆಟಗಾರ ಚೇತೇಶ್ವರ್ ಪೂಜಾರಾ ಅವರ ಕ್ಷಮೆ ಕೋರಿದ್ದಾರೆ.

ಕೌಂಟಿ ಕ್ರಿಕೆಟ್ ಟೂರ್ನಿಯಲ್ಲಿ ಯಾರ್ಕ್‌ಶೈರ್ ತಂಡದಲ್ಲಿ ಆಡುವಾಗ ಪೂಜಾರಾ ಅವರಿಗೆ 'ಸ್ಟೀವ್' ಎಂದು ನಿಕ್‌ನೇಮ್ ಇರಿಸಿದ್ದಕ್ಕಾಗಿ ಬ್ರೂಕ್ಸ್ ಕ್ಷಮೆ ಯಾಚಿಸಿದ್ದಾರೆ.

2018ರಲ್ಲಿ ಬ್ರೂಕ್ಸ್ ಸಮರ್‌ಸೆಟ್ ಕ್ಲಬ್ ಸೇರ್ಪಡೆಯಾಗಿದ್ದರು. 2012ರಲ್ಲಿ ಮಾಡಿದ್ದ ಜನಾಂಗೀಯ ನಿಂದನೆ ಟ್ವೀಟ್‌ಗಳ ಕುರಿತು ಈಚೆಗೆ ಆಟಗಾರ ಅಜೀಂ ರಫೀಕ್ ಮಾಡಿದ್ದ ಆರೋಪಗಳಲ್ಲಿ ಬ್ರೂಕ್ಸ್ ಹೆಸರೂ ಕೇಳಿಬಂದಿತ್ತು.

'ಕೆಲವರ ಹೆಸರುಗಳನ್ನು ಉಚ್ಚರಿಸಲು ಕಷ್ಟವಾಗುತ್ತಿದ್ದ ಕಾರಣಕ್ಕೆ ಸ್ಟೀವ್ ಎಂದು ಕರೆಯುತ್ತಿದ್ದೆ. ಡ್ರೆಸ್ಸಿಂಗ್ ಕೋಣೆಯಲ್ಲಿ ಇದೆಲ್ಲವೂ ಸಹಜವಾಗಿ ನಡೆಯುವಂತದ್ದು. ಧರ್ಮ, ಬಣ್ಣ, ಭಾಷೆಯ ತಾರತಮ್ಯವಿಲ್ಲದೇ ಈ ರೀತಿ ಮಾಡುವುದು ಸಹಜ' ಎಂದು ಬ್ರೂಕ್ಸ್ ಹೇಳಿದ್ದಾರೆ.